ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ



ಬಿಹಾರದ ಹಿರಿಯ ಕಮ್ಯುನಿಸ್ಟ್ ನಾಯಕ

ವಿಜಯಕಾಂತ್ ಠಾಕೂರ್ ಲಾಲ್ ಸಲಾಂ!

ಸಂಪುಟ 12 | ಸಂಚಿಕೆ 34 | ಆಗಸ್ಟ್ 20–26, 2018 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com

ನೈಜ ಸ್ವಾತಂತ್ರ್ಯಕ್ಕಾಗಿ ಸಾವಿರಾರು ಕಾರ್ಮಿಕರ ಜಾಗರಣೆ





ಪಾರ್ಲಿಮೆಂಟ್ ಚಲೋ

5 ಸೆಪ್ಟೆಂಬರ್ 2018, ನವದೆಹಲಿ

CITU - AIKS - AIAWU


ರೂ. 18ಸಾವಿರ ಕನಿಷ್ಟ ಕೂಲಿ! ಎಲ್ಲರಿಗೂ ಸಾಮಾಜಿಕ ಭದ್ರತೆ! ಬೆಲೆ ಏರಿಕೆ ನಿಲ್ಲಲಿ!



ಕೇರಳ ಕರ್ನಾಟಕ ಭೀಕರ ನೆರೆ ರಾಷ್ಟ್ರೀಯ ವಿಪತ್ತು

ಮಹಾದಾಯಿ ತೀರ್ಪು: ಸ್ವಾಗತಾರ್ಹ, ಹಂಚಿಕೆ ಅಸಮರ್ಪಕ







2019 ರಲ್ಲಿ ಸಂಘಿ ಪ್ರಧಾನಿ ಕೆಂಪುಕೋಟೆ ಭಾಷಣ ಮಾಡದಿರಲಿ







ಕೇರಳದಲ್ಲಿ ಅಭೂತಪೂರ್ವ ಮಳೆ-ಪ್ರವಾಹ: ನೆರವಿಗೆ ಧಾವಿಸಲು ಸಿಪಿಐ(ಎಂ) ಪೊಲಿಟ್‌ಬ್ಯುರೊ ಮನವಿ

ಇಡೀ ಕೇರಳ ರಾಜ್ಯದಲ್ಲಿ ಭಾರೀ ಮಳೆ ಮತ್ತು ಪ್ರವಾಹಗಳು ವ್ಯಾಪಕ ಹಾನಿ ಉಂಟು ಮಾಡಿವೆ. ರಾಜ್ಯದ ಎಲ್ಲಾ ಜಿಲ್ಲೆಗಳು ಹಾಗೂ ಎಲ್ಲಾ 1654 ಹಳ್ಳಿಗಳನ್ನು ಇದು ತಟ್ಟಿದೆ. ಇತ್ತೀಚಿನ ಈ ಮಳೆ, ಪ್ರವಾಹ, ಭೂಕುಸಿತ ಮುಂತಾದವುಗಳಿಂದಲೇ ಆಗಸ್ಟ್ 15 ರ ವೇಳೆಗೆ 65 ಜನ ಪ್ರಾಣ ಕಳಕೊಂಡಿದ್ದಾರೆ ಎಂದು ಅಧಿಕೃತವಾಗಿ ವರದಿಯಾಗಿದೆ. ಈ ವರ್ಷದ ಮಳೆಗಾಲದಲ್ಲಿ ಸತ್ತವರ ಒಟ್ಟು ಸಂಖ್ಯೆ 265 ಆಗಿದೆ. 50,000 ಕ್ಕೂ ಹೆಚ್ಚು ಮನೆಗಳು ಸಂಪೂರ್ಣವಾಗಿ ನೆಲಸಮ ಆಗಿವೆ ಮತ್ತು ಒಂದೂವರೆ ಲಕ್ಷಕ್ಕೂ ಹೆಚ್ಚು ಜನ ಈಗ ಪರಿಹಾರ ಶಿಬಿರಗಳಲ್ಲಿ ಆಶ್ರಯ ಪಡೆದಿದ್ದಾರೆ. ರಾಜ್ಯದ ಬಹುಭಾಗಗಳಲ್ಲಿ ರಸ್ತೆ, ರೈಲು ಮತ್ತು ವಿಮಾನ ಸಂಚಾರ ನಿಲ್ಲಿಸಲಾಗಿದೆ. ರಾಜ್ಯದ ಎಲ್ಲ ನದಿಗಳೂ ಉಕ್ಕಿ ಹರಿಯುತ್ತಿವೆ. 27 ಆಣೆಕಟ್ಟುಗಳನ್ನು ತೆರೆಯಬೇಕಾಗಿ ಬಂದಿದೆ.

ಹಲವು ಸಂಸ್ಥೆಗಳು ಪಾಲ್ಗೊಂಡಿರುವ ಸಂಯೋಜಿತ ರಕ್ಷಣಾ ಪ್ರಯತ್ನಗಳನ್ನು ನಡೆಸಿದ್ದರೂ ರಾಜ್ಯದ ವಿವಿಧ ಪ್ರದೇಶಗಳು ಜಲಾವೃತವಾಗಿದ್ದು ಜನರು ಅಲ್ಲೇ ಸಿಲುಕಿಕೊಂಡಿದ್ದಾರೆ. ರಾಜ್ಯ ಸರಕಾರ ಜನಗಳಿಗೆ ಎಲ್ಲ ರೀತಿಯ ನೆರವುಗಳನ್ನು ಒದಗಿಸುತ್ತಿದೆ. ಕೇಂದ್ರ ಸರಕಾರವೂ ಎಲ್ಲ ನೆರವು ನೀಡುವ ಭರವಸೆ ನೀಡಿದೆ. ಸೇನೆ, ನೌಕಾಪಡೆ, ವಿಮಾನಪಡೆ ಹಾಗೂ ಇತರ ಸಂಸ್ಥೆಗಳು ಕೂಡ ಸಾಧ್ಯವಾದ ನೆರವುಗಳನ್ನೆಲ್ಲಾ ನೀಡುತ್ತಿವೆ.



ಇಂತಹ ವಿಷಮ ಪರಿಸ್ಥಿತಿಯನ್ನು ಕೇರಳದ ಜನತೆ ಎದುರಿಸುತ್ತಿರುವಾಗ ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆಗಳಿಗೆ ನೆರವಾಗಲು ತುರ್ತಾಗಿ ಉದಾರ ವಂತಿಗೆ ನೀಡಬೇಕು ಎಂದು ಸಮಸ್ತ ದೇಶದ ಜನತೆಯನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಕಳಕಳಿಯಿಂದ ವಿನಂತಿಸಿಕೊಂಡಿದೆ. ಪಕ್ಷದ ಸದಸ್ಯರು, ಹಿತೈಷಿಗಳು ಮತ್ತು ಸಾರ್ವಜನಿಕರು ತಮ್ಮ ವೈಯಕ್ತಿಕ ದೇಣಿಗೆಗಳನ್ನು ಸಿಪಿಐ(ಎಂ) ಕೇಂದ್ರ ಸಮಿತಿ ಕಚೇರಿಗೆ ಕಳಿಸಿ ಎಂದು ಅದು ಕೇಳಿದೆ.

ಎ.ಕೆ.ಗೋಪಾಲನ್ ಭವನ,

27-29, ಭಾಯೀ ವೀರ್‌ಸಿಂಗ್ ಮಾರ್ಗ್

ನವದೆಹಲಿ-110 001.

ಸಾರ್ವಜನಿಕರಿಂದ ಸಂಗ್ರಹಿಸಿದ ದೇಣಿಗೆಗಳನ್ನು ಪಕ್ಷದ ರಾಜ್ಯ ಸಮಿತಿಗಳು ನೇರವಾಗಿ ಕೇರಳ ಸರಕಾರದ ಮುಖ್ಯಮಂತ್ರಿ ಸಂಕಟ ಪರಿಹಾರ ನಿಧಿಗೆ ಕಳಿಸಬೇಕು ಎಂದು ಪೊಲಿಟ್‌ಬ್ಯುರೊ ಹೇಳಿದೆ.

'ಸಂವಿಧಾನದ ಬುನಾದಿಯ ರಕ್ಷಣೆಯಲ್ಲಿ ಮಹತ್ವದ ಪಾತ್ರ ವಹಿಸಿದವರು' ಸೋಮನಾಥ್ ಚಟರ್ಜಿಯವರಿಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಶ್ರದ್ಧಾಂಜಲಿ



ಮಾಜಿ ಲೋಕಸಭಾಧ್ಯಕ್ಷರೂ, ಹತ್ತು ಬಾರಿ ಲೋಕಸಭಾ ಸದಸ್ಯರೂ ಆಗಿದ್ದ ಸೋಮನಾಥ ಚಟರ್ಜಿಯವರು ಆಗಸ್ಟ್ 13 ರ ಬೆಳಿಗ್ಯೆ ಕೊಲ್ಕತಾದಲ್ಲಿ ನಿಧನರಾಗಿದ್ದಾರೆ. ಅವರಿಗೆ 89 ವರ್ಷ. ಅವರ ನಿಧನದ ಬಗ್ಗೆ ದುಃಖ ವ್ಯಕ್ತಪಡಿಸುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಅವರೊಬ್ಬ ಹಿರಿಯ ಸಂಸದೀಯ ಪಟು, ಭಾರತೀಯ ಸಂವಿಧಾನದ ಬುನಾದಿಗಳನ್ನು, ಅದರಲ್ಲೂ ಮುಖ್ಯವಾಗಿ ಅದರ ಜಾತ್ಯತೀತ ಪ್ರಜಾಸತ್ತಾತ್ಮಕ ಬುನಾದಿಗಳನ್ನು ಮತ್ತು ಒಕ್ಕೂಟತತ್ವವನ್ನು ಕಾಯ್ದುಕೊಳ್ಳುವಲ್ಲಿ ಒಂದು ಮಹತ್ವದ ಪಾತ್ರವಹಿಸಿದರು ಎಂದು ಹೇಳಿದೆ.

ವೃತ್ತಿಯಿಂದ ಒಬ್ಬ ಪ್ರತಿಷ್ಠಿತ ವಕೀಲರಾಗಿದ್ದ ಅವರು ಕಾರ್ಮಿಕ ವರ್ಗಕ್ಕೆ ಮತ್ತು ವಂಚಿತರಿಗೆ ನ್ಯಾಯ ಸಿಗುವಂತಾಗಲು ಅವರ ವ್ಯಾಜ್ಯಗಳನ್ನು ಕೈಗೆತ್ತಿಕೊಂಡಿದ್ದರು ಎಂದು ನೆನಪಿಸಿಕೊಳ್ಳುತ್ತ ಪೊಲಿಟ್‌ಬ್ಯುರೊ ಅವರ ಪತ್ನಿ ಮತ್ತು ಮಕ್ಕಳಿಗೆ ಹಾರ್ದಿಕ ಸಂತಾಪಗಳನ್ನು ವ್ಯಕ್ತಪಡಿಸಿದೆ.



ಸಿಐಟಿಯು ಶ್ರದ್ಧಾಂಜಲಿ :

ಒಬ್ಬ ಹಿರಿಯ ಸಂಸದೀಯ ಪಟುವಾಗಿದ್ದ ಸೋಮನಾಥ ಚಟರ್ಜಿಯವರು ದುಡಿಯುವ ಜನರ ಹಕ್ಕುಗಳ, ಮತ್ತು ಜೀವನಾಧಾರಗಳ ಪ್ರಶ್ನೆಗಳನ್ನು ಎತ್ತಿಕೊಳ್ಳುವಲ್ಲಿ ಮತ್ತು ಪ್ರಜಾಪ್ರಭುತ್ವ, ಜಾತ್ಯತೀತತೆ ಮತ್ತು ಒಕ್ಕೂಟತತ್ವವನ್ನು ರಕ್ಷಿಸುವಲ್ಲಿಯೂ ಮಹತ್ವದ ಪಾತ್ರ ವಹಿಸಿದ್ದರು ಎಂದು ಸಿಐಟಿಯು ಅವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತ ನೆನಪಿಸಿಕೊಂಡಿದೆ.

ಒನ್ನ ಪ್ರತಿಷ್ಠಿತ ವಕೀಲರಾಗಿ ಅವರು ಮಾಲಕರು ಮತ್ತು ಸರಕಾರದ ದಬ್ಬಾಳಿಕೆ ಕ್ರಮಗಳಿಗೆ ಒಳಗಾದ ಕಾರ್ಮಿಕರ ಮತ್ತು ನೌಕರರ ಹಕ್ಕುಗಳನ್ನು ರಕ್ಷಿಸುವ ಹಲವು ಮೊಕದ್ದಮೆಗಳನ್ನು ಅವರು ನಿರ್ವಹಿಸಿದ್ದರು. **1974 ರ ದೇಶವ್ಯಾಪಿ ರೈಲ್ವೆ ಮುಷ್ಕರದಲ್ಲಿ ಭಾಗವಹಿಸಿದ ನೌಕರರನ್ನು ಸಾಮೂಹಿಕವಾಗಿ ಕೆಲಸದಿಂದ ತೆಗೆದು ಹಾಕಿದುದರ ವಿರುದ್ಧ ನ್ಯಾಯಾಂಗ ಹೋರಾಟದಲ್ಲಿ ಅವರ ಮುಂಚೂಣಿ ಪಾತ್ರ ಸದಾ ಸ್ಮರಣೀಯ** ಎನ್ನುತ್ತ ಸಿಐಟಿಯು ಅವರ ಕುಟುಂಬದ ಸದಸ್ಯರಿಗೆ ಮತ್ತು ಮಿತ್ರರಿಗೆ ಹಾರ್ದಿಕ ಸಂತಾಪ ವ್ಯಕ್ತಪಡಿಸಿದೆ.

ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಕೂಡ ಸೋಮನಾಥ ಚಟರ್ಜಿಯವರ ನಿಧನಕ್ಕೆ ಶೋಕ ವ್ಯಕ್ತಪಡಿಸುತ್ತ ಈ ಹಿರಿಯ ಸಂಸದೀಯ ಪಟ್ಟು ಭಾರತೀಯ ಸಂವಿಧಾನದ ಬುನಾದಿಗಳನ್ನು ರಕ್ಷಿಸುವಲ್ಲಿ ಒಂದು ಮಹತ್ವದ ಪಾತ್ರ ವಹಿಸಿದವರು ಎಂದು ಹೇಳಿದೆ. ಇವರು ದುಡಿಯುವ ಜನಗಳಿಗಾಗಿ ಹೋರಾಡಿದವರು ಎಂದು ತನ್ನ ನಮನವನ್ನು ಸಲ್ಲಿಸುತ್ತ ಅವರ ಕುಟುಂಬದವರು ಮತ್ತು ಸಹಯೋಗಿಗಳಿಗೆ ತನ್ನ ಹಾರ್ದಿಕ ಸಂತಾಪವನ್ನು ವ್ಯಕ್ತಪಡಿಸಿದೆ.

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ:

ಸೋಮನಾಥ ಚಟರ್ಜಿಯವರಿಗೆ ಗೌರವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ(ಎಐಎಡಬ್ಲ್ಯುಯು) ಅವರು ಪಶ್ಚಿಮ ಬಂಗಲದಲ್ಲಿ ಸಂಯುಕ್ತ ರಂಗ ಆಳ್ವಿಕೆಯ ಸಮಯದಲ್ಲಿ ತೀಕ್ಷ್ಣವಾದ ಭೂಹೋರಾಟ ನಡೆಯುತ್ತಿದ್ದಾಗ ಸಿಪಿಐ(ಎಂ) ಸೇರಿದವರು ಎಂದು ನೆನಪಿಸಿಕೊಂಡಿದೆ.

1971 ರಿಂದ 2009ರ ವರೆಗೆ ಲೋಕಸಭಾ ಸದಸ್ಯರಾಗಿದ್ದ ಅವರು ಪಶ್ಚಿಮ ಬಂಗಾಲದಲ್ಲಿ ಎಡರಂಗದ ಆಡಳಿತದ ಚಾರಿತ್ರಿಕ ಪ್ರಗತಿ ಕಂಡವರು, ಅದರ ರಕ್ಷಣೆಗೆ ನಿಂತವರು ಮತ್ತು ಈ ಅವಧಿಯಲ್ಲೇ ಅವರು ಮೊದಲ ಕಮ್ಯುನಿಸ್ಟ್ ಲೋಕಸಭಾಧ್ಯಕ್ಷರೂ ಆದರು ಎಂದು ಎಐಎಡಬ್ಲ್ಯುಯು ನೆನಪಿಸಿಕೊಂಡಿದೆ.

ಕ್ಲಿಷ್ಟ ಏರಿಳಿತದ ಈ ಅವಧಿಯಲ್ಲಿ ಅವರ ಕಣ್ಣೋಟ ಸ್ಪಷ್ಟವಾಗಿತ್ತು. ಲೋಕಸಭಾಧ್ಯಕ್ಷರಾಗಿದ್ದಾಗ ಅವರು ಒಂದು ವಿಶಾಲ ನೆಲೆಯ ಒಮ್ಮತವನ್ನು ಕಟ್ಟಿ ಕೋಮುವಾದಿ ಮತ್ತು ಸರ್ವಾಧಿಕಾರಶಾಹಿ ಶಕ್ತಿಗಳನ್ನು ದೂರವಿಡುವಲ್ಲಿ ಯಶಸ್ವಿಯಾದರು ಎಂದು ಹೇಳಿರುವ ಎಐಎಡಬ್ಲ್ಯುಯು ಇಂದಿನ ಪರಿಸ್ಥಿತಿ ಬಹಳಷ್ಟು ಒತ್ತಡಗಳಿಂದ ಕೂಡಿದ್ದು, ಇಂತಹ ಸಂದರ್ಭದಲ್ಲಿ ಅವರ ಜಾಣ್ಮೆ ಮತ್ತು ಅನುಭವ ಬಹಳ ಅಗತ್ಯವಾಗಿತ್ತು ಎನ್ನುತ್ತ ಅವರ ಪತ್ನಿ ಮತ್ತು ಮಕ್ಕಳಿಗೆ ಹಾಗೂ 'ಅವರ ಮೇಲಿನ ಗೌರವ ಮತ್ತು ಪ್ರೀತಿಯನ್ನು ಎಂದೂ ಕಳಕೊಳ್ಳದ' ಬಂಗಾಲದ ಜನತೆಗೆ ಆಳವಾದ ಸಂತಾಪ ವ್ಯಕ್ತಪಡಿಸಿದೆ.

ಕರ್ನಾಟಕಕ್ಕೆ ನ್ಯಾಯ ಒದಗಿಸದ ಮಹದಾಯಿ ತೀರ್ಪು

ಬಿ.ಎಸ್.ಸೊಪ್ಪಿನ್

ಮಹಾದಾಯಿ ಐತಿರ್ಪು ಹೊರಬಿದ್ದ ತಕ್ಷಣ ನರಗುಂದ, ನವಲಗುಂದ ಹುಬ್ಬಳ್ಳಿ – ಧಾರವಾಡಗಳಲ್ಲಿ ಚಳುವಳಗಾರರು ಗುಲಾಲ ಅಥವಾ ಹಸಿರು ಬಣ್ಣ ಎರಚಿಕೊಂಡು ವಿಜಯೋತ್ಸವ ಆಚರಿಸಿದರು. ನಿಜವಾಗಿ ಐ–ತಿರ್ಪು ಕರ್ನಾಟಕಕ್ಕೆ ನ್ಯಾಯ ಒದಗಿಸಿಲ್ಲ. 4 ಟಿಎಂಸಿ ನೀರು ಒದಗಿಸಿದ್ದು ದೊಡ್ಡ ಕೊಡುಗೆ ಏನೂ ಅಲ್ಲ. ಈಗ ಸಿಕ್ಕಿರುವ 4 ಟಿಎಂಸಿ ನೀರು ನ್ಯಾಯಾಂಗದ ಕೊಡುಗೆ ವಿನಹ ರಾಜಕೀಯ ಪರಿಹಾರವಲ್ಲ.

ಮಹದಾಯಿ ಯೋಜನೆ ನಕ್ಷೆ



ಅಗಸ್ಟ್ 14, 2018ರಂದು ಮಹದಾಯಿ ಜಲ ನ್ಯಾಯಮಂಡಳಿಯ ತೀರ್ಪು ಪ್ರಕಟವಾಗಿದೆ. ತೀರ್ಪಿನ ಪ್ರಕಾರ ಕರ್ನಾಟಕ 13.42 ಟಿಎಂಸಿ ಅಡಿ ನೀರಿನ ಪಾಲನ್ನು ಪಡೆದಿದೆ. ಗೋವಾ ರಾಜ್ಯಕ್ಕೆ ಈಗಿನ 9.395 ಟಿಎಂಸಿ ಜೊತೆಗೆ 24 ಟಿ.ಎಂ.ಸಿ ಹೆಚ್ಚುವರಿಯಾಗಿ ಸಿಕ್ಕಿದೆ. ಮಹಾರಾಷ್ಟ್ರಕ್ಕೆ 1.33 ಟಿಎಂಸಿ ನೀರನ್ನೂ ಹಂಚಿಕೆ ಮಾಡಲಾಗಿದೆ. ಕರ್ನಾಟಕಕ್ಕೆ ಹಂಚಿಕೆಯಾಗಿರುವ 13.42 ಟಿ.ಎಂ.ಸಿ. ನೀರಿನಲ್ಲಿ 3.90 ಟಿ.ಎಂ.ಸಿ ನೀರು ಕುಡಿಯಲು, 8.2 ಟಿ.ಎಂ.ಸಿ. ವಿದ್ಯುತ್ ಉತ್ಪಾದನೆಗೆ ಹಾಗೂ 1.5. ಟಿಎಂಸಿ ನೈಸರ್ಗಿಕವಾಗಿ ಹರಿಯಲು ಎಂದು ಹಂಚಿಕೆ ಮಾಡಿ ತಿಳಿಸಿದೆ. ಈ ಐ–ತೀರ್ಪನ್ನು ವೈಜ್ಞಾನಿಕವಾಗಿ ನೋಡುವುದಾದರೆ ಕರ್ನಾಟಕಕ್ಕೆ ನ್ಯಾಯ ಸಿಕ್ಕಿರುವುದು, ಒಂದು ರೀತಿಯಲ್ಲಿ ಗುಡ್ಡ ಅಗೆದು ಇಲಿ ಹೊರತೆಗೆದಂತಾಗಿದೆ. ಕರ್ನಾಟಕದಲ್ಲಿ ಉಗಮವಾಗುವ ಮಹಾನದಿ ಮತ್ತು ಅದರ ಉಪನದಿಗಳು ಒಟ್ಟು 350 ಚ.ಕಿ.ಮಿ. ಜಲಾನಯನ ಪ್ರದೇಶವನ್ನು ಕರ್ನಾಟಕ ಹೊಂದಿದ್ದು ಸುಮಾರು 40.45 ಟಿ.ಎಂ.ಸಿ. ನೀರು ಲಭ್ಯವಾಗಲಿದೆ. ಮಹಾದಾಯಿ ಕೊಳ್ಳದಲ್ಲಿ 199 ಟಿಎಂಸಿ ನೀರು ಲಭ್ಯ ಎಂದು ಅಂದಾಜಿಸಲಾಗಿದೆ. ಇಂತಹ ಪರಿಸ್ಥಿತಿಯಲ್ಲೂ ಕರ್ನಾಟಕಕ್ಕೆ 20 ಟಿಎಂಸಿ ನೀರು ಹಂಚಿಕೆಯಾಗಬೇಕಿತ್ತು. ಹೀಗಾಗಿ ನ್ಯಾಯಮೂರ್ತಿ ಪಾಂಚಾಲರ. ನೇತೃತ್ವದ ಜಲ ನ್ಯಾಯ ಮಂಡಳಿಯ ತೀರ್ಪು ಕರ್ನಾಟಕಕ್ಕೆ ನ್ಯಾಯ ಒದಗಿಸಿಲ್ಲ.

ಒಂದು ವಿಷಾದಕರ ಸಂಗತಿಯೆಂದರೆ ತೀರ್ಪಿನ ಪ್ರತಿಯನ್ನು ನ್ಯಾಯ ಮಂಡಳಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿ, ನಂತರ ಸಂಜೆ ಸಾರ್ವಜನಿಕರಿಗೆ ಪ್ರಕಟನೆಗೆ ನೀಡಿದೆ. ನ್ಯಾಯ ಮಂಡಳಿಗೆ ಹೀಗೆಕೆ ನಡೆದುಕೊಂಡಿತೋ ಗೊತ್ತಿಲ್ಲ. ನ್ಯಾಯಾಂಗದ ಘನತೆಗೆ ಕುಂದುಂಟಾಗಿದೆ.

ಷರತ್ತುಗಳು:

ನ್ಯಾಯ ಮಂಡಳಿ ಕೆಲವು ಷರತ್ತುಗಳನ್ನು ವಿಧಿಸಿದೆ. ಕಾಮಗಾರಿಗಳನ್ನು ತಕ್ಷಣಕ್ಕೆ ಯಾವ ಸರ್ಕಾರವೂ ಪ್ರಾರಂಭಿಸುವಂತಿಲ್ಲ. ನೀರಿನ ಬಳಕೆಯ ಯೋಜನೆಯ ಸವಿವರಗಳನ್ನು ಸಂಪೂರ್ಣವಾಗಿ ಪರಿಶೀಲಿಸಿದ ನಂತರ ಬದಲಾವಣೆ ಮಾಡಬೇಕಿದ್ದಲ್ಲಿ ಬದಲಾವಣೆಗಳನ್ನು ಮಾಡಿ ಕೇಂದ್ರ ಸರ್ಕಾರದ ಅಥವಾ ನೀರು ನಿರ್ವಹಣೆ ಪ್ರಾಧಿಕಾರದ ಅನುಮತಿ ಪಡೆಯಬೇಕು.

ನ್ಯಾಯ ಮಂಡಳಿ ವಿಧಿಸಿರುವ ಷರತ್ತುಗಳನ್ನು ಪಾಲಿಸುವವರೆಗೆ ಮಧ್ಯಂತರ ಆದೇಶ ಜಾರಿಯಲ್ಲಿರುತ್ತದೆ. ಅಂದರೆ ಐ–ತಿರ್ಪು ಬಂದಿದೆ ಎಂದು 'ತಡೆಗೋಡೆ'ಯನ್ನು ಒಡೆಯುವಂತಿಲ್ಲ ಎಂದಾಯಿತು.

ಗೊಂದಲಗಳು :

ಈಗ ನಾಲ್ಕು ಟಿಎಂಸಿ ನೀರು ಕುಡಿಯುವ ಉದ್ದೇಶಕ್ಕೆ ಬಳಕೆಯಾಗಬೇಕು. ಇದರ ಮಾಪನ ಹೇಗೆ ? ಈ ನೀರು ಕೂಡಾ ಮಲಪ್ರಭಾ ಜಲಾಶಯಕ್ಕೆ ಹರಿದು ಬರುತ್ತದೆ. ಜಲಾಶಯದಿಂದ ಹುಬ್ಬಳ್ಳಿ, ಧಾರವಾಡ ಮತ್ತು ಇತರ ಪಟ್ಟಣ ಹಾಗೂ ಗ್ರಾಮಾಂತರ ಪ್ರದೇಶಗಳಿಗೆ ಹಂಚಿಕೆಯಾಗಬೇಕಾಗುತ್ತದೆ. ಇಷ್ಟೇ ನೀರು ಬಳಕೆಯಾಗಬೇಕು ಎಂಬುದಕ್ಕೆ ಮಾನದಂಡ ಅಳವಡಿಸುವದು ಹೇಗೆ ಎಂಬ ಗೊಂದಲ ಉಂಟಾಗುತ್ತದೆ. ಅದಕ್ಕೆ ಹೇಗೆ ಪರಿಹಾರ ಕಂಡುಕೊಳ್ಳಲಾಗುತ್ತಿದೆ ಕಾದು ನೋಡಬೇಕು.

ಕಾಮಗಾರಿ ಪ್ರಾರಂಭಿಸುವುದು:

ಇಲ್ಲಿಯವರೆಗೆ ಏನೇ ಕಾಮಗಾರಿ ಆಗಿದ್ದರೂ ಅದು ಕಳಸಾ ಹಳ್ಳಕ್ಕೆ ಮಾತ್ರ ಆಗಿದೆ. ಅಲ್ಲಿಯೂ ಕೂಡಾ ಇನ್ನೂ 400 ಮೀಟರ್‌ದಷ್ಟು ಕಾಲುವೆ ನಿರ್ಮಾಣ ಡ್ಯಾಮ ನಿರ್ಮಾಣ ಆಗಬೇಕು. ಇನ್ನು ಬಂಡೂರಿ ನೀರು ಪಡೆಯಲು ಯಾವುದೇ ಕಾಮಗಾರಿ ಇಲ್ಲಿಯವರೆಗೆ ಪ್ರಾರಂಭ ಆಗಿಲ್ಲ. ಅದು ದಟ್ಟ ಅರಣ್ಯ ಪ್ರದೇಶದಲ್ಲಿರುವುದರಿಂದ ಪರಿಸರ ಮತ್ತು ಅರಣ್ಯ ಇಲಾಖೆಗಳ ಅನುಮತಿ ಸಿಕ್ಕಿಲ್ಲ. ಈಗ ಅದನ್ನು ಪಡೆದುಕೊಂಡು ಕಾಮಗಾರಿ ಪ್ರಾರಂಭಿಸಬೇಕು.

ಏನೇ ಆದರೂ 4 ಟಿಎಂಸಿ ನೀರು ಪಡೆಯಲು ಕರ್ನಾಟಕದ ಜನತೆ ಇನ್ನು 2 ವರ್ಷವಾದರೂ ಕಾಯಬೇಕು.

ವಿಜಯೋತ್ಸವ:

ಮಹಾದಾಯಿ ಐತಿರ್ಪು ಹೊರಬಿದ್ದ ತಕ್ಷಣ ನರಗುಂದ, ನವಲಗುಂದ ಹುಬ್ಬಳ್ಳಿ – ಧಾರವಾಡಗಳಲ್ಲಿ ಚಳುವಳಿಗಾರರು ಗುಲಾಲ ಅಥವಾ ಹಸಿರು ಬಣ್ಣ ಎರಚಿಕೊಂಡು ವಿಜಯೋತ್ಸವ ಆಚರಿಸಿದರು. ನಿಜವಾಗಿ ಐ–ತಿರ್ಪು ಕರ್ನಾಟಕಕ್ಕೆ ನ್ಯಾಯ ಒದಗಿಸಿಲ್ಲ. 4 ಟಿಎಂಸಿ ನೀರು ಒದಗಿಸಿದ್ದು ದೊಡ್ಡ ಕೊಡುಗೆ ಏನೂ ಅಲ್ಲ. ಆದರೂ ಈ ಕೊಡುಗೆ ತಮ್ಮ ಹೋರಾಟಕ್ಕೆ ಸಂದ ಜಯ ಎಂದು ಅವರು ಭಾವಿಸಿದ್ದರು. ಈಗ ಸಿಕ್ಕಿರುವ 4 ಟಿಎಂಸಿ ನೀರು ನ್ಯಾಯಾಂಗದ ಕೊಡುಗೆ ವಿನಹ ರಾಜಕೀಯ ಪರಿಹಾರವಲ್ಲ. ಇದನ್ನೂ ನಾವು ಮನವರಿಕೆ ಮಾಡಿಕೊಳ್ಳಬೇಕಿದೆ.

ಈ ನೀರಿಗಾಗಿ 2003ರಿಂದಲೇ ನರಗುಂದ, ನವಲಗುಂದ, ರಾಮದುರ್ಗ, ನೌದಲ್ಗಾ, ಖಾನಪುರಗಳಲ್ಲಿ ಜನ ಚಳುವಳಿಗಳು ನಡೆದವು. ಅಂದಿನಿಂದ ಆಗಿಷ್ಟು ಈಗಿಷ್ಟು ಪ್ರತಿಭಟನೆ ಬಂದ್ ಕರೆಗಳು ನಡೆಯುತ್ತಲೇ ಇದ್ದವು. 2015 ರಿಂದ ನಿರಂತರ ಧರಣಿ ನಡೆಯಿತು.

ಆದರೆ ಎರಡು ಪ್ರಮುಖ ಆಡಳಿತ ಪಕ್ಷಗಳು ಕಾಂಗ್ರೆಸ್ ಮತ್ತು ಬಿಜೆಪಿ ಹಾಗೂ ಅವುಗಳ ಸರ್ಕಾರಗಳು ಈ ಜನಾಂದೋಲನಗಳನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಅವೆರಡು ಪರಸ್ಪರ ದೋಷಾರೋಪಣೆ ಮಾಡಿಕೊಂಡು ಹೋರಾಟಗಾರರಲ್ಲಿ ಗೊಂದಲ ಸೃಷ್ಟಿಸುತ್ತ ಹೋರಾಟವನ್ನು ಗೌಣವಾಗಿಯೆ ಕಂಡವು. ಅಲ್ಲದೆ ಪ್ರಭುತ್ವಕ್ಕೆ ಬೆದರಿಕೆ ಒಡ್ಡುವ 'ಐಕ್ಯ' ಚಳುವಳಿ ಅದಾಗಿರಲಿಲ್ಲವಾದ್ದರಿಂದ ರಾಜಕಾರಣಿಗಳಿಗೆ ಆಟವಾಡಲು ಸಲೀಸಾಯಿತು.

ರಾಜಕೀಯ ಪರಿಹಾರ ಕಂಡುಕೊಳ್ಳದ ಪಕ್ಷಗಳು, ಸರ್ಕಾರಗಳು :

ಅಂತರ್‌ರಾಜ್ಯ ಜಲ ಸಮಸ್ಯೆಗಳಂತಹ ಸಮಸ್ಯೆಗಳಿಗೆ ನ್ಯಾಯಾಂಗದ ಪರಿಹಾರಕ್ಕಿಂತ ರಾಜಕೀಯ ಪರಿಹಾರ ಮುಖ್ಯ. ಇಂಥ ಒಂದು ರಾಜಕೀಯ ಪರಿಹಾರವನ್ನು ಮನ್‌ಮೋಹನ್ ನೇತೃತ್ವದ ಕಾಂಗ್ರೆಸ್ ಸರ್ಕಾರ ಕಂಡುಕೊಳ್ಳಲು ಒಂದು ಅವಕಾಶ ಇತ್ತು. ಆದರೆ ಅದು ಅದಕ್ಕಾಗಿ ಕಷ್ಟ ಪಡದೆ 2010 ರಲ್ಲಿ ಮಹದಾಯಿ ಜಲವ್ಯಾಜ್ಯ ಮಂಡಳಿ ರಚನೆ ಮಾಡಿ ತನ್ನ ಹೆಗಲಿನ ಭಾರವನ್ನು ಅದಕ್ಕೆ ವರ್ಗಾಯಿಸಿತು. ನಂತರ ಬಂದ ಬಿಜೆಪಿ ನೇತೃತ್ವ ಸರ್ಕಾರಕ್ಕೂ ಅವಕಾಶವನ್ನೂ ನ್ಯಾಯ ಮಂಡಳಿ ಕಲ್ಪಿಸಿತ್ತು. ಒಂದು ಹಂತದಲ್ಲಿ ಮೂರು ರಾಜ್ಯಗಳ ಮುಖ್ಯ ಮಂತ್ರಿಗಳು ಸಭೆ ನಡೆಸಿ ಮಂಡಳಿಯ ಹೊರಗೆ ಸೌಹಾರ್ದಯುತವಾಗಿ ಸಮಸ್ಯೆ ಪರಿಹಾರ ಕಂಡುಕೊಳ್ಳಲು ತಿಳಿಸಿತ್ತು. ಆಗ ಪ್ರಧಾನಮಂತ್ರಿ ಇಲ್ಲದೆ ಅವರ ಪ್ರತಿನಿಧಿ ಮೂರು ರಾಜ್ಯಗಳ ಮುಖ್ಯ ಮಂತ್ರಿಗಳ ಸಭೆ ನಡೆಸಿ ಪರಿಹಾರ ಕಂಡುಕೊಳ್ಳಬೇಕಿತ್ತು. ಒಂದು ಸಾಮಾನ್ಯ ಸೂತ್ರ ಕಂಡುಕೊಳ್ಳಬೇಕಿತ್ತು. ಆದರೆ ಅದನ್ನು ಮೋದಿ ನೇತೃತ್ವದ ಸರ್ಕಾರ ಮಾಡದೆ ಹೋಯಿತು. ಅಂದರೆ ಈ ಎರಡೂ ಸರ್ಕಾರಗಳು ಜನ ಚಳುವಳಿಯನ್ನು ಗೌಣವಾಗಿ ಕಂಡವು.

ಕರ್ನಾಟಕ ಸರ್ಕಾರದ ಮುಂದಿರುವ ತುರ್ತು ಕೆಲಸ :

ಈಗ ಲಭ್ಯವಾದ 4 ಟಿಎಂಸಿ ನೀರು ಕಳಸಾ – ಬಂಡೂರಿ ನಾಲೆಗಳದ್ದು ಮಾತ್ರ. ಮಹಾದಾಯಿ ನದಿ ನೀರಿನ ಬಳಕೆ 8.2 ಟಿಎಂಸಿ ವಿದ್ಯುತ್ ಉತ್ಪಾದನೆಗೆ ಎಂದಿದೆ. ಅದಕ್ಕೆ ಬಳಕೆಯಾದ ನೀರು ಕೂಡಾ ಗೋವಾಕ್ಕೆ ಹರಿದು ಹೋಗುತ್ತದೆ. ಆದ್ದರಿಂದ ಸರ್ಕಾರ ಹೆಚ್ಚಿನ ನೀರಿನ ಬೇಡಿಕೆಗಾಗಿ ಮರು ಪರಿಶೀಲನಾ ಅರ್ಜಿ ಸಲ್ಲಿಸಬೇಕು.

ಎರಡನೆಯದಾಗಿ 4 ಟಿಎಂಸಿ ನೀರು ಪಡೆಯಲು ಅರಣ್ಯ ಪರಿಸರ ಇಲಾಖೆಗಳ ಪರವಾನಿಗೆ ತುರ್ತಾಗಿ ಪಡೆಯಬೇಕು. ನಿರ್ಮಾಣ ಕಾಮಗಾರಿ ಶೀಘ್ರವಾಗಿ ಪ್ರಾರಂಭಿಸಬೇಕು. •

ಸಿಪಿಐ(ಎಂ) ಅಗಸ್ಟ್ 15 ಹೇಳಿಕೆ

ಮಹಾದಾಯಿ ನದಿ ತಿರುವು ಯೋಜನೆಗೆ ಅಸ್ತು –ಸ್ವಾಗತಾರ್ಹ ಕರ್ನಾಟಕದ ನೀರಿನ ಹಂಚಿಕೆ – ಅಸಮಾಧಾನಕರ

ಗೋವಾ ಸರಕಾರ ಮತ್ತು ಪರಿಸರವಾದಿಗಳೆಂದು ಹೇಳಿಕೊಳ್ಳುವವರ ಸಾಕಷ್ಟು ವಿರೋಧದ ನಡುವೆ ಮಹದಾಯಿ ನೀರನ್ನು ಮಲಪ್ರಭೆಗೆ ಹರಿಸುವ "ನದಿ ತಿರುವು ಯೋಜನೆ" ಯನ್ನು ನ್ಯಾಯಾಧಿಕರಣ ಬೆಂಬಲಿಸಿರುವುದು ಮತ್ತು ಮಹದಾಯಿ ನದಿ ನೀರಿನ ನ್ಯಾಯಾಧೀಕರಣದ ಬಹು ನಿರೀಕ್ಷಿತ ಐ–ತೀರ್ಪು ಮತ್ತಷ್ಟು ವಿಳಂಬವಿಲ್ಲದೆ ಹೊರ ಬಂದಿರುವುದು ಸ್ವಾಗತಾರ್ಹವಾಗಿದೆಯೆಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ಕರ್ನಾಟಕ ರಾಜ್ಯ ಸಮಿತಿ ಅಭಿಪ್ರಾಯ ಪಟ್ಟಿದೆ.

ಆದರೆ, ಕರ್ನಾಟಕಕ್ಕೆ ಹಂಚಿಕೆಯಾಗಿರುವ 13.42 ಟಿ.ಎಂ.ಸಿ ನೀರು ಸಾಕಾಗುವುದಿಲ್ಲ, ಅದು ಕಡಿಮೆಯೆಂದು ಎಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ. ಈ 13.42 ಟಿಎಂಸಿ ನೀರಿನಲ್ಲಿ 8.02 ಟಿಎಂಸಿ ನೀರು ವಿದ್ಯುತ್ ಯೋಜನೆಗೆ ಸಿಗುವುದಾಗಿದ್ದು ನಂತರ ಅದು ಮಹದಾಯಿ ನದಿ ಸೇರಲಿದೆ. ಆ ನೀರು ಕರ್ನಾಟಕಕ್ಕೆ ದೊರೆಯದಾಗಿದೆ. ಹೀಗಾಗಿ ಕರ್ನಾಟಕಕ್ಕೆ ಒಟ್ಟಾರೇ ಕುಡಿಯುವ ನೀರಿಗಾಗಿ ಕೇವಲ 5.40 ಟಿಎಂಸಿ ಮಾತ್ರವೇ ದೊರೆಯಲಿದೆ.

ಕರ್ನಾಟಕ ಸರಕಾರ ಕುಡಿಯುವ ನೀರಿಗಾಗಿ 7.5 ಟಿಎಂಸಿ ನೀರು ಮತ್ತು ಕಾಳಿ ಮತ್ತು ಮಹದಾಯಿ ವಿದ್ಯುತ್ ಎರಡು ಯೋಜನೆಗಳಿಗೆ ಸುಮಾರು 20.498 ಟಿಎಂಸಿ ಮತ್ತು ನೀರಾವರಿಗಾಗಿ ಸುಮಾರು 7 ಟಿಎಂಸಿಗಾಗಿ ಬೇಡಿಕೆ ಇಟ್ಟಿತ್ತು. ಆದರೆ, ಹಂಚಿಕೆಯಂತೆ ಕಾಳಿ ವಿದ್ಯುತ್ ಯೋಜನೆಗೆ ಮತ್ತು ನೀರಾವರಿಗೆ ನೀರು ಹಂಚಿಕೆಯಾಗಿಲ್ಲದಿರುವುದು ಅಸಮಾಧಾನಕರವಾಗಿದೆ.

ನದಿಯಲ್ಲಿ ಅಂದಾಜಿನಂತೆ ಸುಮಾರು 220 ಟಿಎಂಸಿ ನೀರು ಹರಿಯುತ್ತಿದ್ದರೂ, ನ್ಯಾಯಾಧೀಕರಣವು ಶೇ 75ರ ಹರಿವಿನ ಆಧಾರದಲ್ಲಿ 188.06 ಟಿಎಂಸಿ ಮಾತ್ರ ಲಭ್ಯವೆಂದು ಗುರುತಿಸಿ, ಅದರಲ್ಲಿ ಕೇವಲ 38.72 ಟಿಎಂಸಿ ನೀರನ್ನು ಮಾತ್ರವೇ ಮೂರು ರಾಜ್ಯಗಳಿಗೆ ಹಂಚಿಕೆ ಮಾಡಲಾಗಿದೆ. ಉಳಿದ ಸುಮಾರು 149.34 ಟಿಎಂಸಿ ನೀರನ್ನು ಸಮುದ್ರಕ್ಕೆ ಹರಿಯಲು ಬಿಡಲಾಗಿದೆ.

ನೀರಾವರಿಗೆ ಹಾಗೂ ಕಾಳಿ ವಿದ್ಯುತ್ ಯೋಜನೆಗೆ ನೀರು ಸಿಗದೇ ಇರುವುದಕ್ಕೆ ಮುಖ್ಯವಾಗಿ, ಮಹದಾಯಿ ನದಿ ವಿವಾದವನ್ನು ಸೌಹಾರ್ಧಯುತವಾಗಿ ಬಗೆ ಹರಿಸಲು ಕ್ರಮವಹಿಸದೇ ಇರುವ ಬಿಜೆಪಿಯ ಮತ್ತು ಬಿಜೆಪಿ ನೇತೃತ್ವದ ಕೇಂದ್ರ ಸರಕಾರವೇ ಹೊಣೆಗಾರನಾಗಿದೆ.

ಈಗಲಾದರೂ ಕೇಂದ್ರ ಸರಕಾರ ತಕ್ಷಣ ಮಧ್ಯ ಪ್ರವೇಶಿಸಿ, ಆಗಿರುವ ನೀರಿನ ಕೊರತೆಯನ್ನು ತುಂಬಿಕೊಡಲು ಮೂರು ರಾಜ್ಯಗಳ ಹಲವು ಸುತ್ತಿನ ಸಭೆಗಳನ್ನು ನಡೆಸಿ, ಸೌಹಾರ್ದಯುತವಾಗಿ ಪರಿಹರಿಸಲು ಕ್ರಮವಹಿಸಬೇಕೆಂದು ಪ್ರಧಾನ ಮಂತ್ರಿಗಳನ್ನು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಒತ್ತಾಯಿಸಿದೆ.

ಕರ್ನಾಟಕ ಸರಕಾರ ಈಗ ಹಂಚಿಕೆ ಮಾಡಲಾದ ನೀರನ್ನು ಆದಷ್ಟು ಬೇಗನೇ ಬಳಸಿಕೊಳ್ಳಲು ಅಗತ್ಯವಾದ ಕ್ರಮಗಳನ್ನು ತುರ್ತಾಗಿ ವಹಿಸಬೇಕು. ಮಾತ್ರವಲ್ಲ, ಕೊರತೆಯ ನೀರನ್ನು ಪಡೆಯಲು, ಸೌಹಾರ್ದ ಇತ್ಯರ್ಥಕ್ಕೆ ಮೂರು ರಾಜ್ಯಗಳ ಜಂಟಿ ಸಭೆಗಳನ್ನು ನಡೆಸುವಂತೆ ಕೇಂದ್ರ ಸರಕಾರವನ್ನು ಮಧ್ಯ ಪ್ರವೇಶಿಸಲು ಒತ್ತಾಯಿಸಬೇಕು ಮತ್ತು ರಾಜ್ಯ ಬಿಜೆಪಿ ಪಕ್ಷವು ಕೂಡಾ ಪ್ರಧಾನಮಂತ್ರಿಗಳು ಈ ಕುರಿತು ಮಧ್ಯ ಪ್ರವೇಶಿಸುವಂತೆ ಅಗತ್ಯ ಕ್ರಮವಹಿಸುವಂತೆ ಒತ್ತಾಯಿಸಲು ಸಿಪಿಐ(ಎಂ) ಒತ್ತಾಯಿಸಿದೆ. •

ಡಿಪೋ ಮುಂದೆ ತೀವ್ರ ಹೋರಾಟ ನಡೆಸಲು ಬೀಡಿ ಕಾರ್ಮಿಕರ ತೀರ್ಮಾನ



ಕಟ್ಟುವ 1000 ಬೀಡಿಗಳಿಗೆ ಸರಕಾರದ ಆದೇಶದಂತೆ ಕನಿಷ್ಟ ವೇತನ ರೂ.210 ನೀಡಬೇಕು ಹಾಗೂ 2015 ಎಪ್ರಿಲ್‌ನಿಂದ ಬಾಕಿಯಿರುವ ಹೆಚ್ಚುವರಿ ತುಟ್ಟಿಭತ್ತೆಯನ್ನು ನೀಡಬೇಕು ಎಂದು ಆಗ್ರಹಿಸಿ ಬೀಡಿ ಕಾರ್ಮಿಕ ಸಂಘಗಳ ರಾಜ್ಯ ಫೆಡರೇಶನ್ (ಸಿಐಟಿಯು) ಕರೆಕೊಟ್ಟ ಮೇರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೀಡಿ ಕಾರ್ಮಿಕರು ಬೀಡಿ ಕಾರ್ಮಿಕ ಸಂಘಗಳ ಜಿಲ್ಲಾ ಫೆಡರೇಶನ್ ನೇತೃತ್ವದಲ್ಲಿ ಆಗಸ್ಟ್ 7 ರಿಂದ ಅನಿರ್ದಿಷ್ಟ ಧರಣಿ ಸತ್ಯಾಗ್ರಹವನ್ನು ಮಂಗಳೂರಿನ ಜಿಲ್ಲಾ ಸಹಾಯಕ ಕಾರ್ಮಿಕ ಕಮಿಷನರ್ ಕಚೇರಿ ಎದುರು ಆರಂಭಿಸಿದರು.

ಕಚೇರಿಯ ಕೆಲಸದ ದಿನಗಳಲ್ಲೇ ಈ ಧರಣಿ ಸತ್ಯಾಗ್ರಹವಿದ್ದುದರಿಂದ, ಸರ್ಕಾರಿ ರಜಾ ದಿನಗಳಲ್ಲಿ ಧರಣಿಯನ್ನು ನಿಲುಗಡೆಗೊಳಿಸಿ, ಆಗಸ್ಟ್ 13ರವರೆಗೂ ಧರಣಿ ನಡೆದಿರುತ್ತದೆ. ಆಗಸ್ಟ್ 10ರಂದು ನಡೆದ ಮೂರನೇ ದಿನದ ಸತ್ಯಾಗ್ರಹದಲ್ಲಿ ಅಳಪೆ, ಮಂಗಳೂರು, ಪದವು ಪ್ರದೇಶ ಬೀಡಿ ಕಾರ್ಮಿಕ ಸಂಘಟನೆಗಳ ಕಾರ್ಮಿಕರು ಈ ದಿನದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಪ್ರತಿಭಟನೆಯ ನೇತೃತ್ವವನ್ನು ಬೀಡಿ ಪ್ರದೇಶ ಸಂಘಟನೆಗಳ ಮುಖಂಡರಾದ ಜಯಂತಿ ಬಿ.ಶೆಟ್ಟಿ, ಜಯಲಕ್ಷ್ಮಿ ಜಪ್ಪಿನಮೊಗರು, ಭಾರತಿ ಬೋಳಾರ್ ವಹಿಸಿದ್ದರು.

ಆಗಸ್ಟ್ 13ರಂದು ನಡೆದ ಪ್ರತಿಭಟನಾ ಪ್ರದರ್ಶನದ ಬಳಿಕ ಧರಣಿ ಸತ್ಯಾಗ್ರಹವನ್ನು ತಾತ್ಕಾಲಿಕವಾಗಿ ನಿಲ್ಲಿಸಿ ಮುಂದಕ್ಕೆ ಹಾಕಲಾಯಿತು. ಆಗಸ್ಟ್ 13ರ ಪ್ರತಿಭಟನಾ ಧರಣಿಯಲ್ಲಿ ಮೂಡಬಿದ್ರಿ, ಬಂಟ್ವಾಳ, ಸುಳ್ಯ, ಬೆಳ್ತಂಗಡಿ ಪ್ರದೇಶ ಬೀಡಿ ಕಾರ್ಮಿಕ ಸಂಘಟನೆಗಳ ಕಾರ್ಮಿಕರು ಭಾಗವಹಿಸಿದ್ದರು. ಈ ವಲಯ ಸಂಘಟನೆಗಳ ಮುಖಂಡರುಗಳಾದ ರಮಣಿ ಮೂಡಬಿದ್ರೆ, ರಾಧಾ ಮೂಡಬಿದ್ರಿ, ರೋಹಿಣಿ ಬೆಳ್ತಂಗಡಿ, ವಸಂತ ನಡ, ಜಯಂತಿ ನೆಲ್ಲಿಂಗೇರಿ, ರಾಬರ್ಟ್ ಡಿಸೋಜ, ಲೋಲಾಕ್ಷಿ ಬಂಟ್ವಾಳ ಪ್ರತಿಭಟನೆಗೆ ನೇತೃತ್ವ ನೀಡಿದ್ದರು.

ಆಗಸ್ಟ್ 7 ರಿಂದ ಆಗಸ್ಟ್ 13ರ ವರೆಗೆ ಸಹಾಯಕ ಕಾರ್ಮಿಕ ಕಮಿಷನರ್ ಕಚೇರಿ ಮುಂದೆ ನಡೆದ ಬೀಡಿ ಕಾರ್ಮಿಕರ ಹೋರಾಟಕ್ಕೆ ದ.ಕ.ಬೀಡಿ ಕಾರ್ಮಿಕ ಸಂಘಟನೆಗಳ ಜಿಲ್ಲಾ ಫೆಡರೇಶನ್ ನೇತೃತ್ವ ನೀಡಿರುತ್ತದೆ. ಫೆಡರೇಶನ್ ಜಿಲ್ಲಾಧ್ಯಕ್ಷ ವಸಂತ ಆಚಾರಿ, ಪ್ರಧಾನ ಕಾರ್ಯದರ್ಶಿ ಜೆ.ಬಾಲಕೃಷ್ಣ ಶೆಟ್ಟಿ, ಜಿಲ್ಲಾ ಮುಖಂಡರುಗಳಾದ ಯು.ಬಿ.ಲೋಕಯ್ಯ, ಪದ್ಮಾವತಿ ಶೆಟ್ಟಿ, ರಮಣಿ ಮೂಡಬಿದ್ರಿ, ಬಾಬು ದೇವಾಡಿಗ, ಜಯಂತ ನಾಯ್ಕ್ ಪ್ರತಿಭಟನಾಕಾರರಿಗೆ ಹೋರಾಟಕ್ಕೆ ಸ್ಫೂರ್ತಿ ನೀಡಿರುತ್ತಾರೆ.

ಆಗಸ್ಟ್ 16ರಂದು ಸಭೆ ಸೇರಿದ ದ.ಕ.ಜಿಲ್ಲಾ ಬೀಡಿ ಕಾರ್ಮಿಕ ಫೆಡರೇಶನ್ ಉಪಾಧ್ಯಕ್ಷರಾದ ಯು.ಬಿ.ಲೋಕಯ್ಯನವರ ಅಧ್ಯಕ್ಷತೆಯಲ್ಲಿ ಕನಿಷ್ಟ ಕೂಲಿ ಹೋರಾಟವನ್ನು ಮುಂದುವರಿಸುವ ಬಗ್ಗೆ ಚರ್ಚೆ ನಡೆಸಿತು. ಸರಕಾರದ ಆದೇಶವನ್ನು ಬೀಡಿ ಉದ್ದಿಮೆ ಮಾಲಕರು ಜಾರಿ ಮಾಡಿ 2018 ಎಪ್ರಿಲ್ 1ರಿಂದ ಬಾಕಿಯಿರುವ 1000 ಬೀಡಿಗೆ ರೂ.210 ಕನಿಷ್ಟ ವೇತನವನ್ನು ನೀಡದೆ ಇದ್ದಲ್ಲಿ, ಆಗಸ್ಟ್ ಸಪ್ಟೆಂಬರ್ ತಿಂಗಳುಗಳಲ್ಲಿ ಬೀಡಿ ಮಾಲಕರ ಡಿಪೋ ಎದುರು ತೀವ್ರತರವಾದ ಹೋರಾಟವನ್ನು ಹಮ್ಮಿಕೊಳ್ಳಲಾಗುವುದು ಎಂಬುದಾಗಿ ಈ ಸಭೆಯಲ್ಲಿ ಜಿಲ್ಲಾ ಫೆಡರೇಶನ್ ಬೀಡಿ ಮಾಲಕರಿಗೆ ಎಚ್ಚರಿಕೆ ನೀಡಿದೆ.



ಸುಭಾಸ್ ಕೊಪ್ಪಿಕರ್ ಕುಟುಂಬಕ್ಕೆ ರೂ. 2.2 ಲಕ್ಷ ನಿಧಿ ಅರ್ಪಣೆ

ಜಿಲ್ಲೆಯ ರೈತ ಕಾರ್ಮಿಕ ಯುವಜನರ ಮುಂಚೂಣಿ ಹೋರಾಟಗಾರರು, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರು ಹಾಗೂ ಸೌಹಾರ್ದತೆಗೆ ಅವಿರತ ಶ್ರಮಿಸುತ್ತಿದ್ದ ಭಟ್ಕಳ ಶಿರಾಲಿಯ ಸಂಗಾತಿ ಸುಭಾಸ್ ಕೊಪ್ಪಿಕರ್ ಮೇ 5 ರಂದು ಆಕಸ್ಮಿಕ ನಿಧನರಾದರು. ಅವರು ಕುಟುಂಬದಲ್ಲಿ ಪತ್ನಿ ಮತ್ತು ಚಿಕ್ಕ ವಯಸ್ಸಿನ ಮಗಳನ್ನು ಮತ್ತು ಅಪಾರ ಬಂಧು ಬಳಗ ಹೋರಾಟದ ಸಂಗಾತಿಗಳನ್ನು ಅಗಲಿದ್ದು ತುಂಬಲಾರದ ನಷ್ಟ. ಬಡತನದಲ್ಲಿರುವ ಅವರ ಕುಟುಂಬಕ್ಕೆ ಸಹಾಯ ನಿಧಿ ಅರ್ಪಣೆ ಕಾರ್ಯಕ್ರಮ ಅಗಸ್ಟ್ 12ರಂದು ಶಿರಾಲಿಯ ಮಾರುತಿ ಸಭಾಭವನದಲ್ಲಿ ನಡೆಯಿತು. ಜಿಲ್ಲೆಯ ಎಲ್ಲಾ ಸಂಘಟನೆಗಳ ಮುಖಂಡರು, ಹಿತೈಷಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದರು. ಸಹಾಯನಿಧಿಯ ಮೊದಲ ಕಂತಿನ ಭಾಗವಾಗಿ 2.20 ಲಕ್ಷ ರೂಪಾಯಿ ಸಂಗ್ರಹಿಸಿ ನೀಡಿದರು.

ಈ ಸಂದರ್ಭದಲ್ಲಿ ಸಿಐಟಿಯು ರಾಜ್ಯ ಅಧ್ಯಕ್ಷರಾದ ಎಸ್ ವರಲಕ್ಷ್ಮಿಯವರು ಮಾತನಾಡಿ, ದೇಶದ ಜನತೆಯ ಹಕ್ಕುಗಳಿಗಾಗಿ ಹೋರಾಟ ಮಾಡಲು ತನ್ನ ಬದುಕನ್ನೇ ಮುಡಿಪಾಗಿಟ್ಟವರನ್ನು ಚಳುವಳಿ ಎಂದಿಗೂ ಮರೆಯುವುದಿಲ್ಲ. ಕಮ್ಯುನಿಸ್ಟರು ಸ್ವಾತಂತ್ರ್ಯ ಚಳುವಳಿಯಲ್ಲಿ ಅತಿಹೆಚ್ಚು ತ್ಯಾಗ ಬಲಿದಾನ ಗೈದವರು. ನಿರ್ಗತಿಕ, ಶೋಷಿತ ಸಮುದಾಯಕ್ಕೆ ಅನ್ನ ಉಳಿಸಲು ತಮ್ಮ ಸ್ವಾರ್ಥ ಬದಿಗಿಟ್ಟು ಶ್ರಮಿಸಿದವರು. ಧನವಂತರ ದಬ್ಬಾಳಿಕೆಯ ವಿರುದ್ಧ ಕೂಲಿ, ಮನೆ, ನಿವೇಶನ, ಶಿಕ್ಷಣ, ಉದ್ಯೋಗ, ಭೂಮಿ, ಆರೋಗ್ಯಕ್ಕೆ ಮತ್ತು ಉತ್ತಮ ಭವಿಷ್ಯಕ್ಕೆ ಆ ಮೂಲಕ ಸಮಸಮಾಜದ ಕನಸು ನನಸು ಮಾಡಲು ಹಗಲಿರುಳು ಶ್ರಮಿಸುವವರು ಕೆಂಬಾವುಟದ ಚಳವಳಿಗಾರರು. ಅಂಥ ಬದ್ಧತೆಯೊಂದಿಗೆ ಉತ್ತರ ಕನ್ನಡ ಜಿಲ್ಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡವರು ಕಾಮ್ರೇಡ್ ಸುಭಾಸ್ ಕೊಪ್ಪಿಕರ್, ಅವರ ಕುಟುಂಬವೆಂದರೆ ನಮ್ಮ ಚಳುವಳಿಯ ಅವಿಭಾಜ್ಯ ಅಂಗ. ಅಗಲಿದ ಸಂಗಾತಿಯ ಅವಲಂಬಿತರಿಗೆ ಬದುಕು ಕೊಡಬೇಕಾದುದು ನಮ್ಮೆಲ್ಲರ ಕರ್ತವ್ಯ ಎಂದರು.

ಸಿಪಿಐ(ಎಂ) ರಾಜ್ಯ ಮುಂದಾಳುಗಳು, ಈ ಭಾಗದಲ್ಲಿ ಕಾರ್ಮಿಕ ಚಳುವಳಿಗೆ ಮಾರ್ಗದರ್ಶನ ಮಾಡುತ್ತಿರುವ ಕೆ. ಶಂಕರ್ ಮಾತನಾಡುತ್ತಾ ಇಂದಿನ ಸರ್ಕಾರದ ಸರ್ವಾಧಿಕಾರಿ ಧೋರಣೆಯ ಆರ್ಥಿಕ ನೀತಿಗಳಿಗೆ ದುಡಿಯುವ ಜನತೆಯ ಪ್ರತಿರೋಧ ಇನ್ನಷ್ಟು ಹೆಚ್ಚಬೇಕಿದೆ, ಅದಕ್ಕಾಗಿ ವೈಯಕ್ತಿಕ ಆಶೆ ಆಕಾಂಕ್ಷೆ ಬದಿಗೊತ್ತಿ, ಜನತೆಯನ್ನು ಸಂಕಷ್ಟದಿಂದ ಪಾರುಮಾಡಲು ಶ್ರಮಿಸುವ ಕಾರ್ಯಕರ್ತರಾಗಿ ದುಡಿಯುವವರನ್ನು ಸಂಘಟನೆಗಳು ಮತ್ತು ಸಾರ್ವಜನಿಕರು ಗೌರವಿಸಬೇಕು ಮತ್ತು ಸಕಾಲದಲ್ಲಿ ಸಹಾಯ ಸಹಕಾರ ನೆರವು ನೀಡಬೇಕು. ಹಾಗಾಗಿ ಇಂದು ಸಂಗಾತಿ ಸುಭಾಸ್ ಕೊಪ್ಪಿಕರ್ ಕುಟುಂಬಕ್ಕೆ ನೀಡುತ್ತಿರುವ ನೆರವು ನಮ್ಮ ಜವಾಬ್ದಾರಿ ಹೆಚ್ಚಿಸಿದೆ, ಈ ಭಾಗದಲ್ಲಿ ಕೋಮುಸೌಹಾರ್ದತೆಗಾಗಿ ಮತ್ತು ಸಾಮಾನ್ಯ ಜನರ ಬೇಡಿಕೆಗಾಗಿ ಚಳುವಳಿಯನ್ನು ಇನ್ನೂ ಬಲಗೊಳಿಸುವ ಬದ್ಧತೆ ಸ್ಫೂರ್ತಿಯನ್ನು ನೀಡುತ್ತದೆ ಎಂದರು. ರಾಜ್ಯ ಕಾರ್ಯದರ್ಶಿ ಯಮುನಾ ಗಾಂವ್ಕರ್ ಪ್ರಸ್ತಾವಿಕವಾಗಿ ಕುಟುಂಬ ನಿಧಿ ಅರ್ಪಣೆಯ ಮಹತ್ವ ಮತ್ತು ಸುಭಾಸ್ ಕೊಪ್ಪಿಕರ್ ರವರ ಹೋರಾಟದ ಬದುಕನ್ನು ಕುರಿತು ಮಾತನಾಡಿದರು. ಸಿಐಟಿಯು ತಾಲ್ಲೂಕು ಕಾರ್ಯದರ್ಶಿ ಗೀತಾ ನಾಯ್ಕ ಅಧ್ಯಕ್ಷತೆ ವಹಿಸಿ, ಈ ಭಾಗದಲ್ಲಿ ಯಾವುದೇ ಸಮಸ್ಯೆಗಳ ವಿರುದ್ಧ ಧ್ವನಿ ಎತ್ತಲು ಸುಭಾಸ ರವರು ನಂಬಿದ ಸಿದ್ಧಾಂತವನ್ನು ಮುಂದುವರೆಸುತ್ತೇವೆ ಎಂದರು. ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಅಧ್ಯಕ್ಷರಾದ ಶಾಂತಾರಾಮ ನಾಯಕ ಮೂರ ದಶಕಗಳ ಕಾಲದ ವಿವಿಧ ಚಳುವಳಿಯಲ್ಲಿ ಸುಭಾಸರೊಂದಿಗಿನ ಕೆಲಸದ ಅನುಭವ ಹಂಚಿಕೊಂಡು ಕಾರ್ಯಕ್ರಮ ನಿರ್ವಹಿಸಿದರು.

ಸ್ನೇಹಿತರಾದ ವಾಮನ ಪಾವಸ್ಕರ್ ಮತ್ತು ಸಿಐಟಿಯು ಜಿಲ್ಲಾಧ್ಯಕ್ಷರಾದ ತಿಲಕ ಗೌಡ, ತಾಲ್ಲೂಕು ಪದಾಧಿಕಾರಿಗಳಾದ ಪುಷ್ಪಾವತಿ ನಾಯ್ಕ, ಸುಧಾ ಭಟ್, ಪುಂಡಲೀಕ ನಾಯ್ಕ, ಗಜೇಂದ್ರ ಶಿರಾಲಿ ಇತರ ಮುಖಂಡರು ಹಾಜರಿದ್ದರು. ಪ್ರಾರಂಭದಲ್ಲಿ ಸುಶೀಲಾ ನಾಡಾ ಹೋರಾಟದ ಹಾಡುಗಳನ್ನು ಹೇಳಿದರು.

ಕ್ರಾಂತಿಕಾರಿ ಘೋಷಣೆಗಳ ಮಧ್ಯೆ ಸುಭಾಸ್ ಕೊಪ್ಪಿಕರ್ ಮಡದಿ ಕವಿತಾ, ಮಗಳು ಸ್ನೇಹಾ ಮತ್ತು ಗಣ್ಯರಿಂದ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.

ಈ ಕಾರ್ಯಕ್ರಮವನ್ನು ಕಾಮ್ರೇಡ್ ಸುಭಾಸ್ ಕೊಪ್ಪಿಕರ್ ಕುಟುಂಬ ಸಹಾಯ ನಿಧಿ ಸಮಿತಿ ಆಯೋಜಿಸಿತು. ●

ಸುರತ್ಕಲ್ ಎಂಆರ್‌ಪಿಎಲ್ ರಸ್ತೆ ದುರಸ್ತಿಗೆ ಆಗ್ರಹಿಸಿ ರಸ್ತೆ ತಡೆ:

ಸುರತ್ಕಲ್ ಎಂಆರ್‌ಪಿಎಲ್ ರಸ್ತೆ ಚತುಷ್ಪಥವಾಗಿ ಅಭಿವೃದ್ಧಿಗೊಳಿಸಲು ನಾಗರಿಕ ಹೋರಾಟಗಳ ಪರಿಣಾಮವಾಗಿ ಸರಕಾರ ಅನುದಾನ ಮಂಜೂರು ಮಾಡಿದ್ದರೂ, ಮಾಜಿ ಶಾಸಕರ ಹಿಂಬಾಲಕರೊಬ್ಬರಿಗೆ ಗುತ್ತಿಗೆ ಸಿಕ್ಕಿಲ್ಲ ಎನ್ನುವ ಕಾರಣಕ್ಕೆ ಕಾಮಗಾರಿ ಆರಂಭಗೊಂಡಿಲ್ಲವೆಂದು ತಿಳಿದು ಬಂದಿದ್ದು, ಇದನ್ನು ವಿರೋಧಿಸಿ ಡಿವೈಎಫ್‌ಐ ಸುರತ್ಕಲ್ ವಲಯ ಸಮಿತಿ, ಕಾನ ನಾಗರಿಕ ಹೋರಾಟ ಸಮಿತಿ ಮತ್ತು ಲೋಕಲ್ ಲಾರಿ ಚಾಲಕ ನಿರ್ವಾಹಕರ ಸಂಘಗಳ ನೇತೃತ್ವದಲ್ಲಿ ಆಗಸ್ಟ್ 10 ರಂದು ರಸ್ತೆ ತಡೆ ನಡೆಸಿ ನಾಗರಿಕರು ಪ್ರತಿಭಟನೆ ನಡೆಸಿದರು.

ಡಿವೈಎಫ್‌ಐ ದ.ಕ.ಜಿಲ್ಲಾಧ್ಯಕ್ಷ ಬಿ.ಕೆ.ಇಮ್ತಿಯಾಜ್ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು.



ಸಂಘಟನೆಗಳ ಮುಖಂಡರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ವರದಿ: ವಾಸುದೇವ ಉಚ್ಚಿಲ್

ಮಾತೆಂದರೆ ಇದು

ಯಾವುದೇ ಸಾಮಾಜಿಕ ವ್ಯವಸ್ಥೆ ಎಷ್ಟೆಲ್ಲಾ ಉತ್ಪಾದನಾ ಶಕ್ತಿಗಳಿಗೆ ಅದು ಸಾಲುತ್ತದೋ, ಅವೆಲ್ಲವೂ ವಿಕಾಸಗೊಳ್ಳುವ ವರೆಗೆ, ತನ್ನನ್ನು ಎಂದೂ ನಾಶಪಡಿಸಿಕೊಳ್ಳುವದಿಲ್ಲ, ಮತ್ತು ಹೊಸ ಮೇಲ್ಮಟ್ಟದ ಉತ್ಪಾದನಾ ಸಂಬಂಧಗಳು ಹಳೆಯ ಸಮಾಜದ ಚೌಕಟ್ಟಿನೊಳಗೆ ಅವುಗಳ ಅಸ್ತಿತ್ವಕ್ಕೆ ಬೇಕಾದ ಭೌತಿಕ ಪರಿಸ್ಥಿತಿಗಳು ಪಕ್ವವಾಗುವ ವರೆಗೆ ಹಳೆಯದವುಗಳ ಸ್ಥಾನ ಪಡೆಯುವುದಿಲ್ಲ. ಹೀಗೆ ಮಾನವ ಕುಲ ಅನಿವಾರ್ಯವಾಗಿಯೇ ತಾನು ಪರಿಹರಿಸಬಲ್ಲ ಕಾರ್ಯಗುರಿಗಳನ್ನು ಮಾತ್ರ ತನ್ನ ಮುಂದಿಟ್ಟುಕೊಳ್ಳುತ್ತದೆ. ಏಕೆಂದರೆ, ನಿಕಟವಾಗಿ ಪರೀಕ್ಷಿಸಿದಾಗ ಒಂದು ಸಮಸ್ಯೆ ಹುಟ್ಟಿಕೊಳ್ಳುವದು ಅದರ ಪರಿಹಾರಕ್ಕೆ ಭೌತಿಕ ಪರಿಸ್ಥಿತಿಗಳು ಅದಾಗಲೇ ಇದ್ದಾಗ ಅಥವ ಮೂಡಿಕೊಳ್ಳುತ್ತಿರುವಾಗ ಮಾತ್ರವೇ ಎಂಬುದು ಕಂಡುಬರುತ್ತದೆ.



–ಕಾರ್ಲ್ ಮಾರ್ಕ್ಸ್, "ರಾಜಕೀಯ ಅರ್ಥಶಾಸ್ತ್ರದ ವಿಮರ್ಶೆಗೊಂದು ಕೊಡುಗೆ"ಯಲ್ಲಿ

ನಗರ / ಪುರ ಸಭೆಗಳ ಚುನಾವಣೆ ನಾಮಪತ್ರ ಸಲ್ಲಿಕೆ

ಕುಂದಾಪುರ ಪುರಸಭೆ ಚುನಾವಣೆಗೆ ಸಿಪಿಐ(ಎಂ) ಪಕ್ಷದ ಪ್ರಥಮ ಹಂತದಲ್ಲಿ 7 ಮಂದಿ ಸ್ಪರ್ಧಿಗಳು ಸ್ಪರ್ಧಾಕಣದಲ್ಲಿದ್ದು 13ನೇ ಮಂಗಳೂರು ಟೈಲ್ಸ್ ಫ್ಯಾಕ್ಟರಿ ವಾರ್ಡ್ ಕ್ಷೇತ್ರದ ಮಾಣಿ ಪ್ರಮೀಳಾ ರವರು ಅಗಸ್ಟ್ 16ರಂದು ಚುನಾವಣಾಧಿಕಾರಿ ತಿಪ್ಪೇಸ್ವಾಮಿ ಇವರಿಗೆ ನಾಮಪತ್ರ ಸಲ್ಲಿಸಲಾಯಿತು. ಆ ಸಂದರ್ಭದಲ್ಲಿ ಪಕ್ಷದ ಮುಖಂಡರಾದ ಕೆ.ಶಂಕರ್, ಹೆಚ್. ನರಸಿಂಹ, ವಿ. ನರಸಿಂಹ, ವೆಂಕಟೇಶ ಕೋಣಿ, ರಾಜು ದೇವಾಡಿಗ ಇತರರು ಇದ್ದರು.

ಗಜೇಂದ್ರಗಡ ಪುರಸಭೆ ಚುನಾವಣೆಯಲ್ಲಿ 5 ಅಭ್ಯರ್ಥಿಗಳು ಸ್ಪರ್ಧಿಸಲಿದ್ದು ಅವರ ಹೆಸರು ಮತ್ತು ವಾರ್ಡು ಸಂಖ್ಯೆ ಈ ಕೆಳಗಿನಂತಿದೆ:

ವಾರ್ಡ ನಂ: 01	ಮಲ್ಲಿಕಾರ್ಜುನ ಶರಣಪ್ಪ ಹಡಪದ
ವಾರ್ಡ ನಂ: 02	ಕಲ್ಲುಗಡಿ ರೇಣುಕರಾಜ ದುರ್ಗಪ್ಪ
ವಾರ್ಡ ನಂ: 03	ಚಿಟಗಿ ಮಾರುತಿರಾವ್ ಯಲ್ಲಪ್ಪ
ವಾರ್ಡ ನಂ: 10	ಪೀರಪ್ಪ ದುರುಗಪ್ಪ ರಾಠೋಡ
ವಾರ್ಡ ನಂ: 23	ಬಾಲಪ್ಪ ಉಮಲೆಪ್ಪ ರಾಠೋಡ

ನಾಳಿನ ಕಾರ್ಯಕ್ರಮಗಳು

ಮಾರ್ಕ್ಸ್200–ಕ್ಯಾಪಿಟಲ್150, ಅಗಸ್ಟ್ 19, ಮಂಗಳೂರು
ಪುಸ್ತಕ ಬಿಡುಗಡೆ, ವಿಚಾರ ಸಂಕಿರಣ 'ಮಾರ್ಕ್ಸ್ ಎಂದಿಗೂ ಪ್ರಸ್ತುತ'

ರಾಷ್ಟ್ರೀಯ ವೈಜ್ಞಾನಿಕ ಮನೋವೃತ್ತಿ ದಿನ, ಅಗಸ್ಟ್ 20
ಜನ ವಿಜ್ಞಾನ ಸಂಘಟನೆಗಳ ಅಖಿಲ ಭಾರತ ಜಾಲ

'ಸಂವಿಧಾನದ ಓದು' ಕಾರ್ಯಾಗಾರ ಅಗಸ್ಟ್ 25, ಬೆಂಗಳೂರು
ಅಭಿಯಾನದ ಸಂಪನ್ಮೂಲ ವ್ಯಕ್ತಿಗಳಿಗೆ ಕಾರ್ಯಾಗಾರ

ಮಜದೂರ್ ಕಿಸಾನ್ ಸಂಘರ್ಷ ರ್‍ಯಾಲಿ ಸೆಪ್ಟೆಂಬರ್ 5
ನವದೆಹಲಿಗೆ ಪಾರ್ಲಿಮೆಂಟ್ ಚಲೋ, ಕಾರ್ಮಿಕ ರೈತ ಕೃಷಿಕೂಲಿ ಸಂಘಟನೆಗಳಿಂದ ಜಂಟಿ ಕರೆ

60 ಕೇಂದ್ರಗಳಲ್ಲಿ ಸ್ವಾತಂತ್ರ್ಯೋತ್ಸವ-ಸಾಮೂಹಿಕ ಜಾಗರಣೆ 2018

ನೈಜ ಸ್ವಾತಂತ್ರ್ಯಕ್ಕೆ ಸಾವಿರಾರು ಕಾರ್ಮಿಕರ ಜಾಗರಣೆ

ಸ್ವಾತಂತ್ರ್ಯ ಬಂದು 71 ವರ್ಷಗಳಾದರೂ ಕೋಟ್ಯಾಂತರ ದುಡಿಯುವ ಜನರಿಗೆ ನಿಜವಾದ ಸ್ವಾತಂತ್ರ್ಯ ಬಂದಿಲ್ಲ. ಬದಲಾಗಿ ಇದ್ದಬದ್ದ ಹಕ್ಕುಗಳನ್ನು ಕಸಿಯುವ ಜಾರಿ ಮಾಡದಿರುವ ಪ್ರಯತ್ನಗಳು ನಡೆಯುತ್ತಿವೆ. ಹಸಿವು, ಬಡತನ, ನಿರಕ್ಷರತೆ, ಅಸಮಾನತೆ, ಮೂಢನಂಬಿಕೆ ನಿವಾರಣೆಯಾಗಿಲ್ಲ. ನೈಜ ಸ್ವಾತಂತ್ರ್ಯಕ್ಕೆ ಹೋರಾಡಲು ದುಡಿಯುವ ಜನರನ್ನು ಅಣಿ ನೆರೆಸಲು ಕಾರ್ಮಿಕರ ಪ್ರಮುಖ ಸಂಘಟನೆಯಾದ ಸಿಐಟಿಯು ಮತ್ತು ಪಕ್ಷವಾದ ಸಿಪಿಐ(ಎಂ) ಕಳೆದ 3 ವರ್ಷಗಳಿಂದ ಸ್ವಾತಂತ್ರ್ಯ ದಿನವನ್ನು ವಿನೂತನ ರೀತಿಯಲ್ಲಿ ಆಚರಿಸುತ್ತಾ ಬಂದಿವೆ. ಸ್ವಾತಂತ್ರ್ಯದ ಮುನ್ನಾದಿನ (ಅಗಸ್ಟ್ 14) ದಂದು ಸಾಂಸ್ಕೃತಿಕ ಕಾರ್ಯಕ್ರಮಗಳಿಂದ ಕೂಡಿದ ಸ್ವಾತಂತ್ರ್ಯೋತ್ಸವ ಮತ್ತು ರಾಜಕೀಯ ಪ್ರಜ್ಞೆ ಎತ್ತರಿಸುವ ಚಿಂತಕರ ನಾಯಕರ ನುಡಿಗಳೊಂದಿಗೆ ಅಹೋರಾತ್ರಿ ಸಾಮೂಹಿಕ ಜಾಗರಣೆ, ಮಧ್ಯರಾತ್ರಿಯಲ್ಲಿ ಧ್ವಜಾರೋಹಣ ಮಾಡುವ ಮೂಲಕ ವಿಸ್ತರಿಸುತ್ತಿದೆ. ರಾಜ್ಯದ ಈ ವಿಶಿಷ್ಟ ಮಾದರಿಯನ್ನು ಈ ವರ್ಷ ಸಿಐಟಿಯು ದೇಶದಾದ್ಯಂತ ವಿಸ್ತರಿಸಿತ್ತು. ರಾಜ್ಯದಲ್ಲೂ ಈ ಬಾರಿ ಹಿಂದಿಗಿಂತಲೂ ವಿಸ್ತೃತವಾಗಿ ಸ್ವಾತಂತ್ರ್ಯೋತ್ಸವ ಮತ್ತು ಸಾಮೂಹಿಕ ಜಾಗರಣೆ ನಡೆದಿದೆ. ತೀವ್ರ ಮಳೆ ಮತ್ತಿತರ ಕಾರಣಗಳಿಂದಾಗಿ 2-3 ಜಿಲ್ಲೆ ಬಿಟ್ಟರೆ ಎಲ್ಲಾ ಜಿಲ್ಲೆಗಳಲ್ಲೂ ಜಾಗರಣೆ ನಡೆದ ವರದಿಗಳು ಬಂದಿವೆ. ಸ್ವಾತಂತ್ರ್ಯೋತ್ಸವ ಮತ್ತು ಸಾಮೂಹಿಕ ಜಾಗರಣೆ 60 ಜಿಲ್ಲಾ/ತಾಲೂಕು ಕೇಂದ್ರಗಳಲ್ಲಿ ನಡೆದಿದ್ದು ಸಾವಿರಾರು ಕಾರ್ಮಿಕರು ಇವುಗಳಲ್ಲಿ ಭಾಗವಹಿಸಿದ ವರದಿಗಳು ಬಂದಿವೆ. ಬೆಂಗಳೂರು, ದಾವಣಗೆರೆ ಮತ್ತು ಹಾಸನಗಳಿಂದ ವಿವರವಾದ ವರದಿ ಬಂದಿದ್ದು, ಇತರ ಕೇಂದ್ರಗಳಿಂದ ಫೋಟೊ, ಸ್ವಲ್ಪ ಮಾಹಿತಿ ದೊರಕಿದೆ. ವರದಿಗಳು ಈ ಕೆಳಗಿವೆ, ಫೋಟೋಗಳು ಪುಟ 8ರಲ್ಲಿವೆ.



ಜಿಟಿಜಿಟಿ ಮಳೆಯ ನಡುವೆಯೂ ಜಾಗರಣೆ

ಬೆಂಗಳೂರು: 72ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಸ್ವಾತಂತ್ರ್ಯ ಹೋರಾಟದ ಪರಂಪರೆ ಮತ್ತು ಆಶಯಗಳ ಉಳಿವಿಗಾಗಿ, ಭಾರತದ ಸಂವಿಧಾನ ಮತ್ತು ಕಾರ್ಮಿಕರ ಹಕ್ಕುಗಳ ಸಂರಕ್ಷಣೆಗಾಗಿ ಸಿಐಟಿಯು ದೇಶಾದ್ಯಂತ ಹಮ್ಮಿಕೊಂಡಿದ್ದ ಸ್ವಾತಂತ್ರ್ಯೋತ್ಸವ ಸತ್ಯಾಗ್ರಹ ಬೆಂಗಳೂರಿನಲ್ಲಿ ಜಿಟಿಜಿಟಿ ಮಳೆಯ ನಡುವೆಯೂ ಯಶಸ್ವಿಯಾಗಿ ನಡೆಯಿತು. ನಗರದ ಟೌನ್ ಹಾಲ್ ಎದುರು ಕಿಕ್ಕಿರಿದು ನೆರೆದಿದ್ದ ವಿವಿಧ ಕಾರ್ಖಾನೆಗಳ ಕಾರ್ಮಿಕರು, ಅಸಂಘಟಿತ ಕಾರ್ಮಿಕರು ಹಾಗು ಐಟಿ ತಂತ್ರಜ್ಞರು ಉತ್ಸಾಹದಿಂದ ಪಾಲ್ಗೊಂಡಿದ್ದರು. ಸಾಹಿತಿಗಳು, ಕಲಾವಿದರು ಹಾಗು ಸ್ವಾತಂತ್ರ್ಯ ಹೋರಾಟಗಾರರು ಭಾಗವಹಿಸಿ ಮಾತನಾಡಿದ್ದು ನೆರೆದವರಿಗೆ ಸ್ಫೂರ್ತಿ ನೀಡಿತು.

ಖ್ಯಾತ ರಂಗಕರ್ಮಿ ಪ್ರಸನ್ನ ಹೆಗ್ಗೋಡು ಸತ್ಯಾಗ್ರಹ ಉದ್ಘಾಟಿಸಿದರು. ಸುಪ್ರೀಂ ಕೋರ್ಟಿನ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ ಮಧ್ಯರಾತ್ರಿ 12 ಗಂಟೆಗೆ ಧ್ವಜಾರೋಹಣ ನೆರವೇರಿಸಿದರು. ಈ ಕಾರ್ಯಕ್ರಮಕ್ಕೆಂದೇ ದೆಹಲಿಯಿಂದ ಆಗಮಿಸಿದ್ದ ಸಿಐಟಿಯು ರಾಷ್ಟ್ರೀಯ ಅಧ್ಯಕ್ಷೆ ಡಾ.ಕೆ.ಹೇಮಲತಾ ಭಾಗವಹಿಸಿ ಮಾತನಾಡಿದ್ದಲ್ಲದೇ ಬೆಳಗಿನ ಜಾವದವರೆಗೂ ಜಾಗರಣೆ ಮಾಡಿದ್ದು ವಿಶೇಷವಾಗಿತ್ತು.

ದುಡಿಯುವ ಜನರನ್ನು ಬಾಧಿಸುತ್ತಿರುವ ಸಮಸ್ಯೆಗಳು, ಸರ್ಕಾರದ ನೀತಿಗಳು, ದೇಶದ ಐಕ್ಯತೆ, ಸೌಹಾರ್ದತೆ ಮತ್ತು ತ್ಯಾಗ-ಬಲಿದಾನದಿಂದ ಪಡೆದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವ ಜರೂರು ಹಾಗು ಜನಪರ ಪರ್ಯಾಯಗಳ ಕುರಿತು ಕುರಿತು ಭಾಗವಹಿಸಿದ್ದ ಗಣ್ಯರು ಮಾತನಾಡಿದರು. ಇದೇ ಸಂದರ್ಭದಲ್ಲಿ ಕರ್ನಾಟಕದ ಜಲಿಯನ್ ವಾಲಾಬಾಗ್ ಎಂದೇ ಕರೆಯುವ ವಿಧುರಾಶ್ವತ್ಥ ಸತ್ಯಾಗ್ರಹದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ 102 ವಯಸ್ಸಿನ ಕೃಷ್ಣಮಾಚಾರ್ ಅವರನ್ನು ಸನ್ಮಾನಿಸಲಾಯಿತು.

ಚಿಂತಕ ಜಿ.ರಾಮಕೃಷ್ಣ, ಹಿರಿಯ ನ್ಯಾಯವಾದಿ ಕೆ.ಸುಬ್ಬರಾವ್, ಲೇಖಕಿ ಸಂಧ್ಯಾರೆಡ್ಡಿ, ಗಾಂಧಿಭವನ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ಸಂಗೀತ ನಿರ್ದೇಶಕ ವಿ.ಮನೋಹರ್, ಹೊಸತು ಪತ್ರಿಕೆ ಸಂಪಾದಕ ಸಿದ್ದನಗೌಡ ಪಾಟೀಲ, ಸಮಕಾಲೀನ ವಿಚಾರ ವೇದಿಕೆ ಮುಖ್ಯಸ್ಥ ಡಾ.ಬಿ.ಆರ್.ಮಂಜುನಾಥ್, ಚಿತ್ರ ನಿರ್ದೇಶಕ ಬಿ.ಸುರೇಶ್, ಲೇಖಕಿ ಎನ್.ಗಾಯತ್ರಿ, ಗಾಯಕ ಪಿಚ್ಚಳ್ಳಿ ಶ್ರೀನಿವಾಸ್, ಪತ್ರಕರ್ತ ಜಯಕುಮಾರ್, ಬಿಟಿವಿ ಪತ್ರಕರ್ತ ನವೀನ್ ಸೂರಿಂಜೆ, ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘಟನೆ ಮುಖಂಡ ಜಿಎನ್.ನಾಗರಾಜ್, ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷ ಜಿಸಿ.ಬಯ್ಯಾರೆಡ್ಡಿ, ಅಖಿಲ ಭಾರತ ವಕೀಲರ ಸಂಘದ ಮುಖಂಡ ಟಿ.ನಾರಾಯಣಸ್ವಾಮಿ, ಹಿರಿಯ ಕಾರ್ಮಿಕ ಮುಖಂಡರಾದ ವಿಜೆಕೆ ನಾಯರ್ ಮತ್ತು ಆರ್.ಶ್ರೀನಿವಾಸ್, ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ಜನಶಕ್ತಿ ಸಂಪಾದಕ ಎನ್.ಕೆ.ವಸಂತರಾಜ್, ಸಮುದಾಯದ ಸುರೇಂದ್ರರಾವ್, ಜನವಾದಿಯ ಕೆಎಸ್ ವಿಮಲಾ, ಗೌರಮ್ಮ, ಕೆ.ಎಸ್.ಲಕ್ಷ್ಮಿ ಹಾಗು ಇತರರು ಭಾಗವಹಿಸಿ ಮಾತನಾಡಿದರು. ಇದಲ್ಲದೇ ಎಸ್.ಎಫ್.ಐ., ಡಿ.ವೈ.ಎಫ್.ಐ. ಸೇರಿದಂತೆ ಇತರೆ ಸಂಘಟನೆಗಳ ಕಾರ್ಯಕರ್ತರು ಭಾಗವಹಿಸಿದ್ದರು.

ಭೂಮ್ತಾಯಿ ಬಳಗ, ನಾದ ಮಣಿನಾಲ್ಕೂರು, ಗಾಮನಹಳ್ಳಿ ಸ್ವಾಮಿ ಹಾಗು ಹೆಬ್ಬಾಳ ವೆಂಕಟೇಶ್ ರಾತ್ರಿಯಿಡೀ ಹಾಡಿನ ರಸದೌತಣ ಉಣಬಡಿಸಿದರು, ಜಂಬೆ ಅಶೋಕ್ ಮತ್ತು ಜಂಬೆ ಬಾಲು ಅವರ 'ಜಂಬೆ ಜುಗಲ್ಬಂದಿ' ನೆರೆದವರನ್ನು ಕುಣಿಯುವಂತೆ ಮಾಡಿತು. ಸಮುದಾಯದ ಚೆನ್ನರು ಬೀದಿನಾಟಕ ಪ್ರದರ್ಶಿಸಿದರು. ಗೆಲುವು ನಮ್ಮದು ಹಾಡಿನೊಂದಿಗೆ ಬೆಳಗಿನ 5 ಗಂಟೆಗೆ ಸತ್ಯಾಗ್ರಹ ಮುಕ್ತಾಯಗೊಂಡಿತು.

ವರದಿ: ಲಿಂಗರಾಜು

ತಹಸೀಲ್ದಾರರ ನಿರಾಕರಣೆಯ ವಿರುದ್ಧ ಹೋರಾಡುತ್ತಾ ಜಾಗರಣೆ

ದಾವಣಗೆರೆ: ಸಿಐಟಿಯು ಸಂಗಾತಿಗಳು ಕಷ್ಟ ಪಟ್ಟು ತಯಾರಿ ಅಹೋರಾತ್ರಿ ಸತ್ಯಾಗ್ರಹಕ್ಕೆ ನಡೆಸಿದ್ದರು. ಆದರೆ ಕಾರ್ಯಕ್ರಮಕ್ಕೆ ತಹಸೀಲ್ದಾರ್ ಅನುಮತಿ ನಿರಾಕರಿಸಿ ಪತ್ರ ನೀಡಿದ್ದರು. ಸ್ಥಳಕ್ಕೆ ಹೋದಾಗ ಪೋಲೀಸರು ಶಾಮಿಯಾನಕ್ಕೆ ಅಡ್ಡಿಮಾಡಿ ತಡೆದರು. ನಂತರ ಒಂದಷ್ಟು ಮಾತುಕತೆ ಪಟ್ಟು ಬಿಡದ ನಮ್ಮ ಹಠ. ಹತ್ತು ಗಂಟೆ ಮೇಲೆ ಕಾರ್ಯಕ್ರಮ ಮುಗಿಸುವ ಷರತ್ತಿನೊಂದಿಗೆ ಅವಕಾಶ ಅಂತೂ...ಶುರುವಾಯಿತು ನಮ್ಮ ಸತ್ಯಾಗ್ರಹ.. .. ಅಕ್ಷರಶಃ ಹೋರಾಟದ ಮೂಲಕವೇ..

ಇಷ್ಟಾ ಕಲಾವಿದರಾದ ಲೋಕಿಕೆರೆ ಅಂಜಿನಪ್ಪ ಹಾಗೂ ಐರಣಿ ಚಂದ್ರು ತಂಡದಿಂದ ಹೋರಾಟದ ಹಾಡುಗಳು ನೆರೆದವರಲ್ಲಿ ಸ್ಫೂರ್ತಿ ತುಂಬಿದವು. ನಂತರ ಸಿದ್ದಾಪುರದ ಸಂಗಾತಿ ಡಾ ವಿಠ್ಠಲ ಭಂಡಾರಿಯವರಿಂದ ಸ್ವಾತಂತ್ರ್ಯ ಹೋರಾಟಗಳ ಜನಧಾರೆಗಳ ಮೆಲುಕು.. ಮತ್ತು ಇವತ್ತಿನ ನಿಜವಾದ ದೇಶಭಕ್ತರ ಮತ್ತು ಹುಸಿಭಕ್ತರ ನಡುವಿನ ಸಂಘರ್ಷದಲ್ಲಿ ನಾವು ಎಲ್ಲಿ ನಿಲ್ಲಬೇಕು ಎನ್ನುವ ಸವಾಲು...ಬಂಡಾಯ ಸಾಹಿತ್ಯ ಸಂಘಟನೆಯ ಡಾ.ಎಬಿ ರಾಮಚಂದ್ರಪ್ಪನವರ ಮಾತು. ಸಂವಿಧಾನವನ್ನು, ದಲಿತರನ್ನು, ಮಹಿಳೆಯರು, ಮೀಸಲಾತಿಯ ವಿರುದ್ಧ ಜನರನ್ನು ಎತ್ತಿಕಟ್ಟುವ ಷಡ್ಯಂತ್ರಗಳನ್ನು ಸೋಲಿಸುವ ಅನಿವಾರ್ಯತೆ, ಹೀಗೆ ಮುಂದುವರೆಯಿತು ಮಾತುಕತೆ..ನಂತರ ಕೇಲವು ಹಾಡುಗಳು..

ಹಿರಿಯ ಕವಿ ಖತೀಬ್..ಅಧ್ಯಕ್ಷತೆ ಹಾಗೂ ಯುವಕವಿ ರಾಜೇಂದ್ರ ಪ್ರಸಾದ್ ನೇತೃತ್ವದಲ್ಲಿ ಹತ್ತಕ್ಕೂ ಹೆಚ್ಚಿನ ಕವಿಗಳು ರೈತ ಕಾರ್ಮಿಕರ ನೋವುಗಳು, ಶೋಷಣೆ ಕುರಿತಾಗಿ ಕವನ ವಾಚನ...ನಡುವೆ ಹಾಡುಗಳು...ನಂತರ ಸಭೆಯಲ್ಲಿ ಉಪಸ್ಥಿತರಿದ್ದ ವಕೀಲರಾದ ಎಲ್. ಹೆಚ್ ಅರುಣ್ ಕುಮಾರ್, ಅನೀಫ್ ಪಾಷ, ಆವರಗೆರೆ ರುದ್ರುಮುನಿ ಕಡಿಮೆ. ಮಹಾಂತೇಶ, ಮುಂತಾದವರ ಮಾತುಗಳು...ಕಾರ್ಯಕ್ರಮದಲ್ಲಿ ಹಿರಿಯ ಬರಹಗಾರ ಮಲ್ಲಿಕಾರ್ಜುನ ಕಡಕೋಳ, ಬ್ಯಾಂಕ್ ನೌಕರರ ಚಳವಳಿಯ ಹಿರಿಯ ನಾಯಕ ಎಂ.ಆರ್.ಹಿರೇಮಠ, ಪ್ರಗತಿಪರ ಚಿಂತಕ ಇಮ್ತಿಯಾಜ್ ಹುಸೇನ್, ಮಾಜಿ ನಗರ ಸಭಾ ಸದಸ್ಯ ಜಯಣ್ಣ ಜಾಧವ್ ಬಿಎಸ್.ಎಲ್.ಎಲ್ ನೌಕರರ ಮುಖಂಡ ಈರಣ್ಣ, ವಿಕ್ಟರ್, ಗ್ರಾಮಪಂಚಾಯ್ತಿ ನೌಕರರ ಸಂಘದ ನಾಯಕರಾದ ಕೈದಾಳ ಉಮೇಶ್, ಶ್ರೀನಿವಾಸ ಚಾರಿ, ಔಷಧಿ ಪ್ರತಿನಿಧಿಗಳ ಸಂಘದ ನವೀನ ಕುಮಾರ್, ಕಟ್ಟಡ ಕಾರ್ಮಿಕ ಸಂಘದ ಹೊನ್ನೂರು ತಿಮ್ಮಣ್ಣ, ಗುಡ್ಡಪ್ಪ, ಸಿಐಟಿಯು ಮುಖಂಡರಾದ ಶ್ರೀನಿವಾಸ ಮೂರ್ತಿ,ಅಣ್ಣಪ್ಪ ಸ್ವಾಮಿ, ಅನ್ವರ್ ಸಾಬ್, ದಲಿತ ನೌಕರರ ಸಂಘದ ನಾಯಕರಾದ ಹೆಚ್.ವೆಂಕಟೇಶ, ಚಂದ್ರಪ್ಪ ನೀಲಗುಂದ, ಜೆಡಿ-ಎಸ್ ಮುಖಂಡ ವಕೀಲರಾದ ಕೆ.ಎಂ ಆಂಜನಪ್ಪ ಮೊದಲಾವರ ಕಾರ್ಯಕ್ರಮದಲ್ಲಿ ಉಪಸ್ಥಿತಿ... ಇದರ ನಡುವೆ ಹರಿಹರದ ಹರಿ ಜಾದುಗಾರ್, ಪ್ರಶಾಂತ್ ಹಾಗೂ ಶಿಕ್ಷಕರಾದ ಗುರುಸಿದ್ದ ಸ್ವಾಮಿ ಅವರ ವೈಜ್ಞಾನಿಕ ,ವೈಚಾರಿಕ ವಿಶ್ಲೇಷಣೆಯೊಂದಿಗೆ ಪವಾಡ ಬಯಲು ಕಾರ್ಯಕ್ರಮ ನೆರೆದ ಸಭಿಕರನ್ನು ಜಾಗೃತಗೊಳಿಸುವಲ್ಲಿ ಯಶಸ್ವಿಯಾಯಿತು. ಕೊನೆಯಲ್ಲಿ ಸಿಐಟಿಯು ಜಿಲ್ಲಾ ಗೌರವಧ್ಯಕ್ಷ ಕೆ.ಎಲ್.ಭಟ್ ಅವರ ಸಮಾರೋಪ ಮಾತುಗಳು...ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಹೆಚ್. ಆನಂದರಾಜ್ ಅವರ ಸ್ವಾಗತ..ಜೊತೆಗೆ ನಿಲ್ಲದ ಜಿಟಿಜಿಟಿ ಮಳೆಯ ನಡುವೆ ದಾವಣಗೆರೆ ಕಾರ ಮಂಡಕ್ಕಿ ಮೆಣಸಿನ ಕಾಯಿ..ಕೊನೆಯಲ್ಲಿ ಸಾಮೂಹಿಕ ಉಪಹಾರ...ಹೀಗೆ..ಸುಮಾರ ನಾಲ್ಕು ಗಂಟೆಗಳು ದೇಶದ ರೈತ ಕಾರ್ಮಿಕರ ಬೇಡಿಕೆಗಳು, ಸ್ವಾತಂತ್ರ್ಯ ಉಳಿಸುವ, ಸಂವಿಧಾನ ರಕ್ಷಿಸುವ ಪ್ರತಿಜ್ಞೆ ಮತ್ತು ಘೋಷಣೆಯೊಂದಿಗೆ ಕಾರ್ಯಕ್ರಮ ಸಮಾರೋಪ ಗೊಳಿಸಲಾಯಿತು

ವರದಿ: ಮಹಾಂತೇಶ ಕೆ.

ಸ್ವಾತಂತ್ರದ ಪರಿಕಲ್ಪನೆಯೇ ಇಲ್ಲದ ಅವಿವೇಕಿಗಳು ಇಂದು ನಮ್ಮನ್ನಾಳುತ್ತಿದ್ದಾರೆ: ಗ್ಯಾರಂಟಿ ರಾಮಣ್ಣ

ಭಾರತ ದೇಶಕ್ಕೆ ಸ್ವಾತಂತ್ರ್ಯ ಬಂದು ಇಂದಿಗೆ 72 ವರ್ಷಗಳು ಕಳೆದಿವೆ, ನಾವುಗಳೆಲ್ಲರೂ ಇಂದು ಈ ಸಂಭ್ರಮವನ್ನು ಆಚರಿಸುತ್ತಿದ್ದೇವೆ. ಆದರೆ ನಿಜವಾದ ಸ್ವಾತಂತ್ರ್ಯ ಬಂದಿರುವುದು ಉಳ್ಳವರಿಗೆ, ಮಾಲೀಕರಿಗಾಗಿದೆ. ಇಂದು ದೇಶದ ದುಡಿಯುವ ವರ್ಗ ಶೋಷಣೆಯಿಂದ ಮುಕ್ತಿ ಪಡೆದಿಲ್ಲವಾಗಿದೆ ಎಂದು ಸಿಐಟಿಯು ಕಾರ್ಮಿಕ ಸಂಘಟನೆಯ ಜಿಲ್ಲಾಧ್ಯಕ್ಷರಾದ ಧರ್ಮೇಶ್ ತಿಳಿಸಿದರು. ಹಾಸನ ನಗರದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಸಿಐಟಿಯು, ಕೆಪಿಆರ್ಎಸ್, ಎಸ್. ಎಫ್.ಐ, ಡಿಐಎಫ್ಐ, ದಲಿತ ಹಕ್ಕುಗಳ ಸಮಿತಿ ಮತ್ತು ಪ್ರಗತಿಪರ ಸಂಘಟನೆಗಳು ಹಮ್ಮಿಕೊಂಡಿದ್ದ 'ಸಂವಿಧಾನದ ಉಳಿವಿಗಾಗಿ-ದುಡಿಯುವ ಜನರ ಸ್ವಾತಂತ್ರ್ಯಕ್ಕಾಗಿ' ಆಗ್ರಹಿಸಿ ನಡೆದ ರಾತ್ರಿಯಿಡೀ ಸತ್ಯಾಗ್ರಹ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕಲಾವಿದರಾದ ಗ್ಯಾರಂಟಿ ರಾಮಣ್ಣನವರು ಮಾತನಾಡಿ ಸ್ವಾತಂತ್ರದ ಪರಿಕಲ್ಪನೆಯೇ ಇಲ್ಲದ ಅವಿವೇಕಿಗಳು ಇಂದು ನಮ್ಮನ್ನಾಳುತ್ತಿದ್ದಾರೆ. ಇದು ದೇಶದ ದುರಂತವೇ ಸರಿ, ರಾಜಕಾರಣಿಗಳು ತಮ್ಮ ಸ್ವಾರ್ಥಕ್ಕಾಗಿ ದೇಶದ ಜನರನ್ನು ಸಂಕಷ್ಟದ ಜೀವನಕ್ಕೆ ದೂಡುತ್ತಿದ್ದಾರೆ ನಮಗೆ ನಿಜವಾಗಿಯೂ ಸ್ವಾತಂತ್ರ್ಯ ಸಿಗಬೇಕಾದರೆ ಭಗತ್‌ಸಿಂಗ್‌ರಂತಹ ವ್ಯಕ್ತಿಗಳನ್ನು ಆದರ್ಶವಾಗಿ ಇಟ್ಟುಕೊಳ್ಳುವ ರಾಜಕೀಯ ಪಕ್ಷಗಳ ಅಗತ್ಯತೆ ಇದೆ ಎಂದರು.

ಮುಖ್ಯ ಭಾಷಣಕಾರರಾಗಿ ಆಗಮಿಸಿದ್ದ ಪ್ರಾಧ್ಯಾಪಕರಾದ ಡಾ.ಸಿ.ಚ ಯತೀಶ್ವರ್‌ರವರು ಮಾತನಾಡುತ್ತಾ ಈಸ್ಟ್ ಇಂಡಿಯಾ ಕಂಪನಿಯವರು ಭಾರತವನ್ನು 200 ವರ್ಷಗಳ ಕಾಲ ತಮ್ಮ ಹಿಡಿತದಲ್ಲಿಟ್ಟುಕೊಂಡು ದೇಶದ ಸಂಪತ್ತನ್ನು ಲೂಟಿ ಹೊಡೆದರು. ಇದರಿಂದ ಭಾರತವು ಚೇತರಿಸಿಕೊಳ್ಳಲು ಬಹಳ ವರ್ಷಗಳೇ ಬೇಕಾಯಿತು. ದೇಶವು ಆರ್ಥಿಕ ದುಸ್ಥಿತಿಯಿಂದ ಹೊರಬರಲು ಇಂದಿಗೂ ಸಾಧ್ಯವಾಗಿಲ್ಲವಾಗಿದೆ ಎಂದರು. ಶಿಕ್ಷಣ-ವಸತಿ-ಉದ್ಯೋಗಗಳು ಇಂದು ವ್ಯಾಪಾರೀಕರಣಗೊಂಡಿವೆ. ಬಡವರು, ಕಾರ್ಮಿಕರು, ರೈತರು ಇಂದು ಇವುಗಳಿಂದ ವಂಚಿತರಾಗಿದ್ದಾರೆ. ಆಳುವ ಸರ್ಕಾರಗಳಿಗೂ ಇವರ ಬಗ್ಗೆ ಯಾವುದೇ ಕಾಳಜಿ ಇಲ್ಲವಾಗಿದೆ. ಜಿಎಸ್‌ಟಿ ಯಂತಹ ಕಾನೂನನ್ನು ಜಾರಿಗೊಳಿಸಿ ದೇಶದ ಜನರನ್ನು ಸುಲಿಗೆ ಮಾಡುತ್ತಿರುವುದು ಸರಿಯಲ್ಲವೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಿಐಟಿಯು ಪ್ರಧಾನ ಕಾರ್ಯದರ್ಶಿ ಡಿ.ಎಲ್ ರಾಘವೇಂದ್ರ, ಕೆಪಿಆರ್‌ಎಸ್‌ನ ಜಿಲ್ಲಾಧ್ಯಕ್ಷರಾದ ಎಚ್.ಆರ್ ನವೀನ್ ಕುಮಾರ್ ಕಾರ್ಯದರ್ಶಿ ವಸಂತ್‌ಕುಮಾರ್,ಎಸ್.ಎಫ್.ಐ ನ ಜಿಲ್ಲಾ ಕಾರ್ಯದರ್ಶಿ ಆಶಾ, ಉಪನ್ಯಾಸಕರಾದ ಭಾರತೀದೇವಿ, ಡಿವೈಎಫ್ಐನ ಜಿಲ್ಲಾ ಕಾರ್ಯದರ್ಶಿ ಎಂ.ಜಿ ಪೃಥ್ವಿ, ಸಾರಿಗೆ ನೌಕರರ ಸಂಘದ ಎಚ್.ಎಸ್ ಮಂಜುನಾಥ್, ಬಿಸಿಯೂಟ ನೌಕರರ ಸಂಘದ ಪುಷ್ಪ ಭಾಗವಹಿಸಿದ್ದರು, ಕಾರ್ಯಕ್ರಮದ ನಿರೂಪಣೆಯನ್ನು ಸಿಐಟಿಯುನ ಹಾಸನ ತಾ. ಕಾರ್ಯದರ್ಶಿ ಅರವಿಂದ್ ನಡೆಸಿಕೊಟ್ಟರು, ಸಿಐಟಿಯು ಜಿಲ್ಲಾ ಉಪಾಧ್ಯಕ್ಷರಾದ ಜಿ.ಪಿ ಸತ್ಯನಾರಾಯಣರವರು ಅಧ್ಯಕ್ಷತೆ ವಹಿಸಿದ್ದರು.

ರಾತ್ರಿಯಿಡೀ ನಡೆದ ಈ ಸತ್ಯಾಗ್ರಹದಲ್ಲಿ ವಿದ್ಯಾರ್ಥಿಗಳಿಗೆ ಭಾಷಣ ಸ್ಪರ್ಧೆ ನಡೆಸಲಾಯಿತು, ವಿವಿಧ ಕಲಾ ತಂಡಗಳಿಂದ ಹಾಡು-ನೃತ್ಯ ಗಳನ್ನು ಏರ್ಪಡಿಸಲಾಗಿತ್ತು. ಪವಾಡ ರಹಸ್ಯ ಬಯಲು ಕಾರ್ಯಕ್ರಮ ಮತ್ತು ಸ್ವಾತಂತ್ರ್ಯ ಹೋರಾಟವನ್ನು ಕುರಿತ ಸಿನಿಮಾಗಳನ್ನು ಪ್ರದರ್ಶನ ಮಾಡಲಾಯಿತು.

ವರದಿ: ಎಚ್.ಆರ್. ನವೀನ್ ಕುಮಾರ್

ಪ್ರಾದೇಶಿಕ ಅಸಮಾನತೆಯ ರಾಜಕಾರಣ

ಅತಿಥಿ ಅಂಕಣ



ಡಾ. ಟಿ. ಆರ್. ಚಂದ್ರಶೇಖರ

ಕರ್ನಾಟಕದಲ್ಲಿ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದು ಅದು 2018–19ರ ಬಜೆಟ್ಟನ್ನು ಮಂಡಿಸಿದ ಮೇಲೆ ಅನುದಾನದ ಜಿಲ್ಲಾವಾರು ಹಂಚಿಕೆ ಕುರಿತಂತೆ ಗಂಭೀರವಾದ ಪ್ರಾದೇಶಿಕ ಅಸಮಾನತೆಯ ಪಶ್ನೆಯನ್ನು ವಿರೋಧ ಪಕ್ಷಗಳು ಬೇಜವಾಬ್ದಾರಿಯುತವಾಗಿ ಹೋರಾಟದ ಮುಂಚೂಣಿಗೆ ತಂದಿವೆ. ಪ್ರಾದೇಶಿಕ ಅಸಮಾನತೆಯು ಬಹುಮುಖಿ, ಬಹುಜ್ಞಾನಶಿಸ್ತೀಯ ಸಮಸ್ಯೆಯಾಗಿದೆ. ಇದನ್ನು ಈಗ ರಾಜಕಾರಣಿಗಳು ಜಿಲ್ಲಾವಾರು ಅನುದಾನ ಹಂಚಿಕೆಗೆ ಸೀಮಿತಗೊಳಿಸಿಬಿಟ್ಟಿದ್ದಾರೆ. ಇದರಿಂದ ಪ್ರಾದೇಶಿಕ ಅಸಮಾನತೆಯ ನಿವಾರಣೆಗೆ ಅನುಕೂಲವಾಗುವುದಕ್ಕೆ ಪ್ರತಿಯಾಗಿ ಹಾನಿಯೇ ಅಧಿಕ. ಅಭಿವೃದ್ಧಿಯನ್ನು ವರಮಾನ, ಉತ್ಪಾದನೆ, ಬಂಡವಾಳ ಹೂಡಿಕೆಯ ಚೌಕಟ್ಟನ್ನು ಮೀರಿ ಪರಿಭಾವಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ ಪ್ರಾದೇಶಿಕ ಅಸಮಾನತೆಯನ್ನು ಅನುದಾನ ಹಂಚಿಕೆಗೆ ಸೀಮಿತಗೊಳಸಿರುವುದು ಅವರ ಬೌದ್ಧಿಕ ದಾರಿದ್ರ್ಯದ ಹೆಗ್ಗುರುತಾಗಿದೆ.

ಕರ್ನಾಟಕದಲ್ಲಿ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದು ಅದು 2018–19ರ ಬಜೆಟ್ಟನ್ನು ಮಂಡಿಸಿದ ಮೇಲೆ ಅನುದಾನದ ಜಿಲ್ಲಾವಾರು ಹಂಚಿಕೆ ಕುರಿತಂತೆ ಗಂಭೀರವಾದ ಪ್ರಾದೇಶಿಕ ಅಸಮಾನತೆಯ ಪಶ್ನೆಯನ್ನು ವಿರೋಧ ಪಕ್ಷಗಳು ಬೇಜವಾಬ್ದಾರಿಯುತವಾಗಿ ಹೋರಾಟದ ಮುಂಚೂಣಿಗೆ ತಂದಿವೆ. ಈ ವಿವಾದದ ಸಂದರ್ಭದಲ್ಲಿ ಸಮಸ್ಯೆಯ ಆಳ–ಅಗಲಗಳ ಬಗ್ಗೆ ಯಾರೂ ಮಾತನಾಡುತ್ತಿಲ್ಲ. ಅವರ ವಾದ ಎಷ್ಟೊಂದು ಟೊಳ್ಳಾಗಿದೆ–ಪೊಳ್ಳಾಗಿದೆ ಅಂದರೆ ರಾಜಕಾರಣಿಗಳ ಪತ್ಯೇಕ ರಾಜ್ಯದ ಮಾತು ಮಕ್ಕಳಾಟದಂತೆ ಕಾಣುತ್ತಿದೆ. ಪ್ರಾದೇಶಿಕ ಅಸಮಾನತೆಯ ಮೂಲ ಸಂಗತಿಗಳ ಬಗ್ಗೆ ಇವರಾರಿಗೂ ಕಾಳಜಿಯಿಲ್ಲ. ಪ್ರಾದೇಶಿಕ ಅಸಮಾನತೆಯು ಬಹುಮುಖಿ, ಬಹುಜ್ಞಾನಶಿಸ್ತೀಯ ಸಮಸ್ಯೆಯಾಗಿದೆ. ಇದನ್ನು ಈಗ ರಾಜಕಾರಣಿಗಳು ಜಿಲ್ಲಾವಾರು ಅನುದಾನ ಹಂಚಿಕೆಗೆ ಸೀಮಿತಗೊಳಿಸಿಬಿಟ್ಟಿದ್ದಾರೆ. ಇದರಿಂದ ಪ್ರಾದೇಶಿಕ ಅಸಮಾನತೆಯ ನಿವಾರಣೆಗೆ ಅನುಕೂಲವಾಗುವುದಕ್ಕೆ ಪ್ರತಿಯಾಗಿ ಹಾನಿಯೇ ಅಧಿಕ. ಅಭಿವೃದ್ಧಿಯನ್ನು ವರಮಾನ, ಉತ್ಪಾದನೆ, ಬಂಡವಾಳ ಹೂಡಿಕೆಯ ಚೌಕಟ್ಟನ್ನು ಮೀರಿ ಪರಿಭಾವಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ ಪ್ರಾದೇಶಿಕ ಅಸಮಾನತೆಯನ್ನು ಅನುದಾನ ಹಂಚಿಕೆಗೆ ಸೀಮಿತಗೊಳಸಿರುವುದು ಅವರ ಬೌದ್ಧಿಕ ದಾರಿದ್ರ್ಯದ ಹೆಗ್ಗುರುತಾಗಿದೆ. ಉದಾಹರಣೆಗೆ 2017–18ರಲ್ಲಿ ಪ.ಜಾ ಮತ್ತು ಪ.ಪಂ. ಉಪಯೋಜನೆಗಳಿಗೆ ಬಜೆಟ್ಟಿನಲ್ಲಿ ನೀಡಲಾದ ಅನುದಾನದಲ್ಲಿ ವೆಚ್ಚವಾದ ಪ್ರಮಾಣ ಕ್ರಮವಾಗಿ ಶೇ.55.04 ಮತ್ತು ಶೇ.57.74. ಬಜೆಟ್ಟಿನಲ್ಲಿ 371 ಜೆ ಅಡಿಯಲ್ಲಿ ಹೈದರಾಬಾದ್ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿಗೆ ನೀಡಲಾದ ರೂ.1000 ಕೋಟಿ ಅನುದಾನದಲ್ಲಿ ಖರ್ಚಾಗಿದ್ದು ಕೇವಲ ರೂ.174.29 ಕೋಟಿ. ಡಾ. ಡಿ. ಎಂ. ನಂಜುಂಡಪ್ಪ ವರದಿಯ ಶಿಫಾರಸ್ಸಾದ ಎಂಟು ವರ್ಷಗಳ ವಿಶೇಷ ಅಭಿವೃದ್ಧಿ ಯೋಜನೆಗಾಗಿ 2017–18ರ ಬಜೆಟ್ಟಿನಲ್ಲಿ ನೀಡಲಾಗಿದ್ದ ರೂ.3000 ಕೋಟಿಯಲ್ಲಿ ವೆಚ್ಚವಾಗಿದ್ದು ಮಾತ್ರ ಕೇವಲ ರೂ1278.95 ಕೋಟಿ. ಆದ್ದರಿಂದ ಬಜೆಟ್ ಅನುದಾನವೇ ಅಭಿವೃದ್ಧಿಯಲ್ಲ.

ಬಜೆಟ್ಟಿನಲ್ಲಿ ಘೋಷಿಸಿದ ಅನುದಾನವೆಷ್ಟು, ಅದರಲ್ಲಿ ಬಿಡುಗಡೆಯಾದುದು ಎಷ್ಟು ಮತ್ತು ಬಿಡುಗಡೆಯಾದುದರಲ್ಲಿ ಖರ್ಚಾದುದೆಷ್ಟು, ಯಾವ ಕಾರ್ಯಕ್ರಮಗಳಿಗೆ ಅನುದಾನದ ಬಳಕೆಯಾಗಿದೆ, ಅನುದಾನ ವಿನಿಯೋಜನೆಯ ಫಲಶೃತಿಯೇನು ಮುಂತಾದ ಪ್ರಶ್ನೆಗಳು ಇಲ್ಲಿ ಮುಖ್ಯವಾಗುತ್ತವೆ. ಎಂಟು ವರ್ಷಗಳ ವಿಶೇಷ ಯೋಜನೆಯಲ್ಲಿ 2007–08 ರಿಂದ 2017–18ರ ಅವಧಿಯಲ್ಲಿನ ಒಟ್ಟು ಅನುದಾನ ರೂ. 28,438.61 ಕೋಟಿಯಲ್ಲಿ ನೀರಾವರಿ ಮತ್ತು ಲೋಕೋಪಯೋಗಿ ಇಲಾಖೆಗೆ ನೀಡಿದ್ದ ಮೊತ್ತ ರೂ.7,456.58 ಕೋಟಿ (ಶೇ.26.23) ಯಷ್ಟಾಗಿದ್ದರೆ ಶಿಕ್ಷಣ ಮತ್ತು ಆರೋಗ್ಯಗಳನ್ನು ಒಳಗೊಂಡ ಸಾಮಾಜಿಕ ವಲಯಕ್ಕೆ ನೀಡಿದ್ದ ಮೊತ್ತ ರೂ.2784.40 ಕೊಟಿ(ಶೇ.9.79). ಪ್ರಾದೇಶಿಕ ಅಸಮಾನತೆಯ ಮೂಲದಲ್ಲಿ ಅನಕ್ಷರತೆ, ಶಿಕ್ಷಣದ ಅಲಭ್ಯತೆ ಮತ್ತು ಆರೋಗ್ಯ ಸೇವೆಯ ಕೊರತೆಗಳಿವೆ. ಸರ್ಕಾರಕ್ಕೆ ಸಾಮಾಜಿಕ ವಲಯಕ್ಕಿಂತ ನಿರ್ಮಾಣ, ಮೂಲಸೌಕರ್ಯಗಳು ಆದ್ಯತೆಯ ಸಂಗತಿಗಳಾಗಿವೆ. ಆದರೆ ಈ ಬಗೆಯ ಸೂಕ್ಷ್ಮ ಸಂಗತಿಗಳ ಬಗ್ಗೆ ರಾಜಕಾರಣಿಗಳು ಚರ್ಚೆ ಮಾಡುವುದಿಲ್ಲ. ಅನುದಾನ ಕಡಿಮೆಯಾದುದರ ಬಗ್ಗೆ ಬೇಕಾಬಿಟ್ಟಿ ಸರ್ಕಾರವನ್ನು ಟೀಕಿಸುವ ವಿರೋಧ ಪಕ್ಷಗಳು ಸರ್ಕಾರ ಅಭಿವೃದ್ಧಿ ವೆಚ್ಚಕ್ಕೆ ಹಣವನ್ನು ಹೇಗೆ ಸಂಗ್ರಹಿಸಿಕೊಳ್ಳಬೇಕು, ತೆರಿಗೆ ದರಗಳನ್ನು ಹೇಗೆ ಹೆಚ್ಚಿಸಬೇಕು, ಯಾವ ಚಟುವಟಿಕೆಗಳ ಮೇಲೆ ತೆರಿಗೆ ವಿಧಿಸಬೇಕು ಎಂಬುದರ ಬಗ್ಗೆ ಚರ್ಚೆ ಮಾಡುವುದಿಲ್ಲ. ಸಂಪನ್ಮೂಲವೇ ಇಲ್ಲದಿದ್ದಾಗ ಖರ್ಚನ್ನು ಹೇಗೆ ಹೆಚ್ಚಿಸುವುದು? ಸಾಲಮನ್ನಾದ ಬಗ್ಗೆ ಕಿಡಿ ಕಾರುವ ಬಿ. ಎಸ್. ಯಡಿಯೂರಪ್ಪ ಅವರು ತಮ್ಮ ಪಕ್ಷದ ಪ್ರಣಾಳಿಕೆಯಲ್ಲಾಗಲಿ, ಸಾರ್ವಜನಿಕ ಭಾಷಣಗಳಲ್ಲಾಗಲಿ ಸರ್ಕಾರಗಳು ಸಂಪನ್ಮೂಲವನ್ನು ಹೇಗೆ ರೂಢಿಸಿಕೊಳ್ಳಬೇಕು ಎಂಬುದರ ಬಗ್ಗೆ, ಎಲ್ಲಿಂದ ಹಣ ತರಬೇಕು ಎಂಬುದರ ಬಗ್ಗೆ ಮಾತನಾಡುವುದಿಲ್ಲ. ಏಕೆ ಮಾತನಾಡುವುದಿಲ್ಲ ಅಂದರೆ ಅದರ ಬಗ್ಗೆ ಗೊತ್ತಿಲ್ಲ ಅನ್ನಬೇಕಾಗುತ್ತದೆ.


ಸಾಲಮನ್ನಾ, ಕೃಷಿ ಬಿಕ್ಕಟ್ಟು, ರೈತರ ಆತ್ಮಹತ್ಯೆ ಮುಂತಾದವು ರಾಜ್ಯ ಸರ್ಕಾರಗಳು ಎದುರಿಸಬೇಕಾದ ಸಮಸ್ಯೆಗಳೆನ್ನುವುದು ನಿಜ. ಒಕ್ಕೂಟ ರಾಜಕೀಯ ವ್ಯವಸ್ಥೆಯಲ್ಲಿ ಅವುಗಳ ಬಗ್ಗೆ ಕೇಂದ್ರ ಸರ್ಕಾರದ ಜವಾಬ್ದಾರಿಯೂ ಇದೆ ಎಂಬುದೂ ನಿಜ. ಆದರೆ ಇಂದು ಕೇಂದ್ರ ಸರ್ಕಾರವು ಎಲ್ಲವನ್ನೂ ರಾಜ್ಯ ಸರ್ಕಾರದ ಕೊರಳಿಗೆ ಕಟ್ಟುಹಾಕುತ್ತಿದೆ. ಜಿ.ಎಸ್.ಟಿ ಅನುಷ್ಠಾನಗೊಂಡ ಮೇಲೆ ರಾಜ್ಯಗಳು ತೆರಿಗೆ ವಿಧಿಸುವ ಸಂವಿಧಾನಾತ್ಮಕ ಅಧಿಕಾರ ಕಳೆದುಕೊಂಡಿವೆ. ಪ್ರಾದೇಶಿಕ ಅಸಮಾನತೆಯ ಬಗ್ಗೆ ಮಾತನಾಡುವಾಗ ಈ ಸಂಗತಿಗಳ ಬಗ್ಗೆಯೂ ನಾವು ಯೋಚಿಸಬೇಕು. ಇಲ್ಲದಿದ್ದರೆ ಸಮಸ್ಯೆಗೆ ಪರಿಹಾರ ರೂಪಿಸುವುದು ಕಷ್ಟವಾಗುತ್ತದೆ. ಹಿಂದುಳಿದ ಜಿಲ್ಲೆಗಳ ಅಭಿವೃದ್ಧಿಗಾಗಿ ವಿಶೇಷ ಅನುದಾನ ನೀಡುವ ಬ್ಯಾಕ್‌ವರ್ಡ್ ರೀಜನ್ ಗ್ರಾಂಟ್ ಫಂಡ್(ಬಿ.ಆರ್.ಜಿ.ಎಫ್) ಯೋಜನೆಯನ್ನು ಕೇಂದ್ರ ಸರ್ಕಾರ 2014–15 ರಲ್ಲಿ ರದ್ದು ಪಡಿಸಿದೆ. ಪ್ರಾದೇಶಿಕ ಅಸಮಾನತೆಯ ಬಗ್ಗೆ ರಾಜ್ಯ ಸರ್ಕಾರದ ವಿರುದ್ಧ ಉಗ್ರ ಹೋರಾಟ ಮಾಡುವ ಬಿ. ಎಸ್. ಯಡಿಯೂರಪ್ಪ ಕೇಂದ್ರ ಸರ್ಕಾರವು ರಾಜ್ಯಗಳಿಗೆ ಮಾಡುತ್ತಿರುವ ಅನ್ಯಾಯದ ಬಗ್ಗೆ ಚಕಾರವೆತ್ತುವುದಿಲ್ಲ.

ಜಮೀನ್ದಾರಿ ಪಾಳೆಗಾರಿಕೆ

ಪ್ರಾದೇಶಿಕ ಅಸಮಾನತೆ ಕುರಿತ ಚರ್ಚೆಯಲ್ಲಿ ಅತಿಯಾಗಿ ಕಂಡು ಬರುವ ಸಂಗತಿಗಳೆಂದರೆ: ರಾಜ್ಯ ಸರ್ಕಾರದ ಮಲತಾಯಿ ಧೋರಣೆ, ದಕ್ಷಿಣ ಕರ್ನಾಟಕದವರ ದಬ್ಬಾಳಿಕೆ, ಉತ್ತರ ಕರ್ನಾಟಕದ ನಿರ್ಲಕ್ಷ್ಯ, ಬಂಡವಾಳ ಹೂಡಿಕೆಯಲ್ಲಿ ತಾರತಮ್ಯ ಮುಂತಾದವು. ಇವೆಲ್ಲವೂ ನಿಜ. ಇವುಗಳನ್ನು ಸುಮ್ಮಸುಮ್ಮನೆ ತಳ್ಳಿ ಹಾಕಲು ಬರುವುದಿಲ್ಲ. ಆದರೆ ಇವುಗಳ ಆಚೆಗೂ ನಾವು ಯೋಚಿಸುವ ಅಗತ್ಯವಿದೆ. ಅಭಿವೃದ್ಧಿಗೆ ಕಂಠಕವಾಗಿರುವ ಅನೇಕ ಹಿಂದುಳಿದ ಪ್ರದೇಶಗಳಿಗೆ ವಿಶಿಷ್ಟವಾದ ಕೆಲವು ಸಂಗತಿಗಳಿವೆ. ಬೆಳಗಾವಿ ಮತ್ತು ಕಲಬುರಗಿ ವಿಭಾಗದ ಜಿಲ್ಲೆಗಳಲ್ಲಿ ಜಮೀನ್ದಾರಿ ವ್ಯವಸ್ಥೆಯು ಇನ್ನೂ ಗಟ್ಟಿಯಾಗಿ ಉಳಿದುಕೊಂಡು ಬರುತ್ತಿದೆ. ಆದರೆ ದಕ್ಷಿಣ ಕರ್ನಾಟಕ ಪ್ರದೇಶವು ಜಮೀನ್ದಾರಿ ಪಾಳೆಗಾರಿಕೆ ವ್ಯವಸ್ಥೆಯಿಂದ ಹೊರಬಂದು ರಾಚನಿಕ ಬದಲಾವಣೆಗೆ ಒಳಗಾಗಿದೆ. ಉದಾಹರಣೆಗೆ ರಾಜ್ಯದ ಒಟ್ಟು ಭೂಸಾಗುವಳಿಗಾರರಲ್ಲಿ ದಕ್ಷಿಣ ಕರ್ನಾಟಕದ ಪಾಲು (2011) ಶೇ.54.83 ರಷ್ಟಿದ್ದರೆ ಬೆಳಗಾವಿ ವಿಭಾಗದಲ್ಲಿ ಅವರ ಪಾಲು ಶೇ.27.08ರಷ್ಟಿದೆ. ಕಲಬುರಗಿ ವಿಭಾಗದಲ್ಲಿ ಅವರ ಪ್ರಮಾಣ ಶೇ.27.08. ಒಟ್ಟು ಉತ್ತರ ಕರ್ನಾಟಕದ ಪಾಲು ಶೇ.45.17. ಆದರೆ ರಾಜ್ಯದ ಒಟ್ಟು ಭೂರಹಿತ ಕೃಷಿ ದಿನಗೂಲಿ ದುಡಿಮೆಗಾರರಲ್ಲಿ ದಕ್ಷಿಣ ಕರ್ನಾಟಕದ ಪಾಲು ಶೇ.42.25 ರಷ್ಟಿದ್ದರೆ ಉತ್ತರ ಕರ್ನಾಟಕದ ಪಾಲು ಶೇ.57.75. ಅಂದರೆ ದಕ್ಷಿಣ ಕರ್ನಾಟಕದಲ್ಲಿ ಸಾಗುವಳಿಗಾರರ ಪ್ರಮಾಣ ಅಧಿಕ: ಭೂರಹಿತ ದಿನಗೂಲಿ ದುಡಿಮೆಗಾರರ ಪ್ರಮಾಣ ಕಡಿಮೆ. ಆದರೆ ಉತ್ತರ ಕರ್ನಾಟಕ ಪ್ರದೇಶದಲ್ಲಿ ಸ್ಥಿತಿಯು ಇದಕ್ಕೆ ವ್ಯತಿರಿಕ್ತವಾಗಿದೆ.

ಭೂಮಾಲೀಕತ್ವದಲ್ಲಿನ ಅಸಮಾನತೆಯು ಉತ್ತರ ಕರ್ನಾಟಕದಲ್ಲಿ ತೀವ್ರವಾಗಿದ್ದರೆ ದಕ್ಷಿಣ ಕರ್ನಾಟಕದಲ್ಲಿ ಅದು ಸೌಮ್ಯವಾಗಿದೆ. ಉತ್ತರ ಕರ್ನಾಟಕದಲ್ಲಿರುವುದೆಲ್ಲ ಒಣಭೂಮಿ ಎಂದು ಇದಕ್ಕೆ ಸಮಜಾಯಿಷಿ ಹೇಳಬಹುದು. ಆದರೆ ಇಂದು ರಾಜ್ಯದಲ್ಲಿನ ನೀರಾವರಿಯ ಪ್ರಾದೇಶಿಕ ಸ್ವರೂಪ ಬದಲಾಗಿದೆ. ನಮ್ಮ ರಾಜ್ಯದಲ್ಲಿ ಇಂದು ಒಟ್ಟು ಬಿತ್ತನೆ ಪ್ರದೇಶದಲ್ಲಿ ನೀರಾವರಿ ಪ್ರಮಾಣ ಶೇ.30ಕ್ಕಿಂತ ಅಧಿಕವಿರುವ ಜಿಲ್ಲೆಗಳ ಸಂಖ್ಯೆ 17. ಅವುಗಳಲ್ಲಿ 10 ಉತ್ತರ ಕರ್ನಾಟಕದಲ್ಲಿದ್ದರೆ 7 ಮಾತ್ರ ದಕ್ಷಿಣ ಕರ್ನಾಟಕದಲ್ಲಿವೆ ಮತ್ತು ಶೇ.50ಕ್ಕಿಂತ ಅಧಿಕ ನೀರಾವರಿ ಪ್ರದೇಶವಿರುವ ಜಿಲ್ಲೆಗಳ ಸಂಖ್ಯೆ 6. ಅವುಗಳಲ್ಲಿ ತಲಾ ಮೂರು ಎರಡೂ ಪ್ರದೇಶಗಳಲ್ಲಿವೆ. ಇವೆಲ್ಲಕ್ಕಿಂತ ಮುಖ್ಯವಾಗಿ ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳ ಸಂಖ್ಯೆ 64. ಅವುಗಳಲ್ಲಿ 56 ಉತ್ತರ ಕರ್ನಾಟಕದಲ್ಲಿದ್ದರೆ ಕೇವಲ 8 ದಕ್ಷಿಣ ಕರ್ನಾಟಕದಲ್ಲಿವೆ. ಕಬ್ಬನ್ನು ಬೆಳೆಯಲು ಹೆಚ್ಚಿನ ನೀರಾವರಿ ಅಗತ್ಯ. ಅಂದಮೇಲೆ ನೀರಾವರಿ ಅಧಿಕವಾಗಿರುವುದರಿಂದ ಉತ್ತರ ಕರ್ನಾಟಕ ಪ್ರದೇಶದಲ್ಲಿ ಅತ್ಯಧಿಕ ಸಂಖ್ಯೆಯ ಸಕ್ಕರೆ ಕಾರ್ಖಾನೆಗಳಿವೆ. ಜಮೀನ್ದಾರಿ ಪಾಳೆಗಾರಿಕೆಗೂ ಮತ್ತು ನೀರಾವರಿ ಬೆಳವಣಿಗೆಗೂ ಸಂಬಂಧವಿದೆ. ಅಭಿವೃದ್ಧಿಯಲ್ಲಿ ಹಿಂದುಳಿದಿರುವಿಕೆಗೂ ಮತ್ತು ಸಾಕ್ಷರತೆಗೂ ನಡುವೆ ಸಂಬಂಧವಿದೆ. ಕರ್ನಾಟಕದ ಒಟ್ಟು ಅಕ್ಷರಸ್ಥರಲ್ಲಿ(406.47 ಲಕ್ಷ) ದಕ್ಷಿಣ ಕರ್ನಾಟಕದ ಪಾಲು ಶೇ.61.21 ರಷ್ಟಿದ್ದರೆ ಉತ್ತರ ಕರ್ನಾಟಕದ ಪಾಲು ಕೇವಲ ಶೇ.38.79. ಆದರೆ ಅನಕ್ಷರಸ್ಥರಲ್ಲಿ ಮಾತ್ರ ಉತ್ತರ ಕರ್ನಾಟಕದ ಪಾಲು ಶೇ.50.54. ಈ ಎಲ್ಲ ಸಂಕೀರ್ಣ ಸಂಗತಿಗಳ ಬಗ್ಗೆ ಗಮನ ನೀಡದೆ ಪ್ರಾದೇಶಿಕ ಅಸಮಾನತೆಯನ್ನು ಅನುದಾನದ ಜಿಲ್ಲಾವಾರು ಹಂಚಿಕೆಗೆ ಸೀಮಿಗೊಳಿಸಿದ್ದು ಸಮಸ್ಯೆಯ ಪರಿಹಾರಕ್ಕೆ ಇದು ಯಾವುದೇ ರೀತಿಯಲ್ಲಿ ನೆರವಾಗುವುದಿಲ್ಲ. ಸಾಲಮನ್ನಾ ಅನ್ನುವುದು ರಾಜ್ಯದಲ್ಲಿರುವ 65.55 ಲಕ್ಷ ಸಾಗುವಳಿಗಾರರ ಹಿತವನ್ನು ಕಾಯಬಹುದು. ಆದರೆ ಇದರಿಂದ 71.55 ಲಕ್ಷ ಭೂರಹಿತ ದಿನಗೂಲಿ ದುಡಿಮೆಗಾರರಿಗೆ ಯಾವುದೇ ಅನುಕೂಲ ದೊರೆಯುವುದಿಲ್ಲ. ಸಾಲಮನ್ನಾದಿಂದ ಉತ್ತರ ಕರ್ನಾಟಕಕ್ಕೆ ಎರಡು ರೀತಿಯಲ್ಲಿ ಅನ್ಯಾಯವಾಗುತ್ತದೆ. ಮೊದಲನೆಯದಾಗಿ ಭೂಮಾಲೀಕ ಸಾಗುವಳಿಗಾರರ ಪ್ರಮಾಣ ದಕ್ಷಿಣ ಕರ್ನಾಟಕದಲ್ಲಿ ಅಧಿಕ(ಶೇ.54.83). ಉತ್ತರ ಕರ್ನಾಟಕದಲ್ಲಿ ಅವರ ಪಾಲು ಕೇವಲ ಶೇ.42.25. ಆದರೆ ಭೂರಹಿತ ದಿನಗೂಲಿ ದುಡಿಮೆಗಾರರಲ್ಲಿ ದಕ್ಷಿಣ ಕರ್ನಾಟಕದ ಪಾಲು ಶೇ.45.17ರಷ್ಟಿದ್ದರೆ ಉತ್ತರ ಕರ್ನಾಟಕದ ಪಾಲು ಶೇ.57.75. ಈ ಭೂರಹಿತ ದಿನಗೂಲಿ ದುಡಿಮೆಗಾರರ ಪ್ರಮಾಣ ಉತ್ತರ ಕರ್ನಾಟಕದಲ್ಲಿ ಅಧಿಕವಾಗಿದೆ. ಇವರ ಹಿತಾಸಕ್ತಿಯನ್ನು ಕಾಪಿಡುವ ಬಗ್ಗೆ ಪ್ರಾದೇಶಿಕ ಅಸಮಾನತೆ ಹೆಸರಿನಲ್ಲಿ ಪ್ರತ್ಯೇಕ ರಾಜ್ಯದ ಹೋರಾಟಗಾರರು –ಮುಂದಾಳುಗಳು ಮಾತನಾಡುವುದಿಲ್ಲ.

ಒಟ್ಟಾರೆ ಪ್ರಾದೇಶಿಕ ಅಸಮಾನತೆಯನ್ನು ಜಿಲ್ಲೆಗಳ ನಡುವಿನ ಅನುದಾನದ ಹಂಚಿಕೆಯಲ್ಲಿನ ತಾರತಮ್ಯಕ್ಕೆ ಮತ್ತು ಪ್ರತ್ಯೇಕ ರಾಜ್ಯದ ಬೇಡಿಕೆಯ ಮಟ್ಟಕ್ಕೆ ಸೀಮಿತಗೊಳಿರುವುದರಿಂದಾಗಿ ಪ್ರಾದೇಶಿಕ ಅಸಮಾನತೆಯ ಮೂಲ ಸಂಗತಿಗಳು ಮರೆಯಾಗಿ ಬಿಟ್ಟಿವೆ. ಇಂತಹ ಸಮಸ್ಯೆಯನ್ನೂ ಉಳ್ಳವರು ಗುತ್ತಿಗೆ ಹಿಡಿದಿರುವುದು ನಮ್ಮ ರಾಜ್ಯದ ದುರಂತ. ಇದನ್ನು ರಾಜಕಾರಣಿಗಳು ತಮ್ಮ ಮತ್ತು ತಮ್ಮವರ ಹಿತಾಸಕ್ತಿಗಳನ್ನು ಭದ್ರಪಡಿಸಿಕೊಳ್ಳುವ ದೃಷ್ಟಿಯಿಂದ ಮುಂಚೂಣಿಗೆ ತಂದಿರುವುದರ ರಾಜಕೀಯವನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಭೂಸುಧಾರಣೆ ಬಗ್ಗೆ, ಭೂಮಿತಿ ಶಾಸನದ ಬಗ್ಗೆ, ದಿನಗೂಲಿಗಳ ಅಳಲಿನ ಬಗ್ಗೆ, ದುಡಿಯುವ ಮಹಿಳೆಯರ ಬವಣೆ ಬಗ್ಗೆ ಮಾತನಾಡದ ನಮ್ಮ ರಾಜ್ಯದ ಅತಿದೊಡ್ಡ ವಿರೋಧ ಪಕ್ಷವು ಮತ್ತು ಅದರ ಮುಂದಾಳುಗಳು ಉಳ್ಳವರ ಹಿತಾಸಕ್ತಿಗಳನ್ನು ಕಾಪಾಡಲು ಹೋರಾಡುತ್ತಿದೆ ಎಂಬುದನ್ನು ಗುರುತಿಸಬೇಕಾಗಿದೆ. ರಾಜ್ಯ ಸರ್ಕಾರವೂ ಕೂಡ ಪ್ರಾದೇಶಿಕ ಅಸಮಾನತೆ ಮೂಲದಲ್ಲಿರುವ ಭೂರಹಿತ ದಿನಗೂಲಿಗಳ ಬಗ್ಗೆ, ಅಸಂಘಟಿತ ದುಡಿಮೆಗಾರರ ಬಗ್ಗೆ, ಪ.ಜಾ. ಮತ್ತು ಪ.ಪಂ.ಗಳ ಬಗ್ಗೆ ವಿಶೇಷವಾಗಿ ಗಮನ ನೀಡುವ ಅಗತ್ಯವಿದೆ. ಏಕೆಂದರೆ ಅಭಿವೃದ್ಧಿ ಅನ್ನುವುದು ಜನರ, ದುರ್ಬಲ ವರ್ಗದ ಹಿತಾಸಕ್ತಿಯ ಸಂಗತಿಯಾಗಿದೆ. ಅದು ಕೇವಲ ಬಂಡವಾಳದ, ಉತ್ಪಾದನೆಯ ವರಮಾನದ ಸಂಗತಿಗಿಂತ ಮುಖ್ಯವಾಗಿ ವರಮಾನದ ವಿತರಣೆಯ, ಆಹಾರ ಭದ್ರತೆಯ, ಲಿಂಗ ಸಮಾನತೆಯ ಸಂಗತಿಯಾಗಿದೆ. ●



ಕೃಪೆ: ಸತೀಶ್ ಆಚಾರ್ಯ

72ನೇ ಸ್ವಾತಂತ್ರ್ಯ ದಿನಾಚರಣೆಯಂದು ಕವಲುದಾರಿಯಲ್ಲಿ ಭಾರತ

ಮೋದಿಯವರ ಐದನೇ ಮತ್ತು ಅಂತಿಮ ಸ್ವಾತಂತ್ರ್ಯ ದಿನದ ಭಾಷಣ ಒಂದು ಚುನಾವಣಾ-ಪೂರ್ವ ಭಾಷಣದ ರೀತಿಯಲ್ಲೇ ಇತ್ತು. ದೇಶ ಒಂದು ಕವಲುದಾರಿಯಲ್ಲಿರುವ ಸಂದರ್ಭದಲ್ಲಿ ನಡೆದಿರುವ 72ನೇ ಸ್ವಾತಂತ್ರ್ಯ ದಿನಾಚರಣೆಯಂದು ಕೈಗೊಳ್ಳಬೇಕಾದ ಏಕೈಕ ಪ್ರತಿಜ್ಞೆಯೆಂದರೆ, ಭಾರತೀಯ ಪ್ರಭುತ್ವದ ಮತ್ತು ಗಣತಂತ್ರ ಸಂವಿಧಾನದ ಜಾತ್ಯತೀತ ಆಧಾರಕ್ಕೆ ಬೆದರಿಕೆಯ ಪ್ರಸಕ್ತ ಅಪಾಯವನ್ನು ಕೊನೆಗೊಳಿಸಲು ದೃಢನಿಶ್ಚಯ ಮಾಡುವುದು. ಇದಕ್ಕಾಗಿ, ಮುಂದಿನ ವರ್ಷದ ಸ್ವಾತಂತ್ರ್ಯ ದಿನದ ಭಾಷಣವನ್ನು ಬಿಜೆಪಿ-ಆರೆಸ್ಸೆಸ್ ಮೂಲಕ್ಕೆ ಸೇರಿರದ ಪ್ರಧಾನ ಮಂತ್ರಿಗಳು ನೀಡುವಂತೆ ಮಾಡುವುದು ಅತ್ಯಗತ್ಯವಾಗಿದೆ.



ಪ್ರಕಾಶ ಕಾರಟ್



ಕೃಪೆ: ಕೇಶವ್, ದಿ.ಹಿಂದೂ

ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಕೆಂಪುಕೋಟೆಯಿಂದ ಮಾಡಿದ ಸ್ವಾತಂತ್ರ್ಯ ದಿನದ ಭಾಷಣ ಹೆಚ್ಚಾಗಿ ಒಂದು ಚುನಾವಣಾ-ಪೂರ್ವ ಭಾಷಣದ ರೀತಿಯಲ್ಲೇ ಇತ್ತು. ಇದು ಲೋಕಸಭಾ ಚುನಾವಣೆಯ ಮೊದಲು ಅವರ ಐದನೇ ಮತ್ತು ಅಂತಿಮ ಭಾಷಣ. ಮೋದಿಯವರು ಈ ಭಾಷಣದಲ್ಲಿ 2014ರಿಂದ ತನ್ನ ಸಾಧನೆಗಳ ಪಟ್ಟಿ ಕೊಡುವುದರ ಮೇಲೆಯೇ ಗಮನ ಕೇಂದ್ರೀಕರಿಸಿದರು. ಅದಕ್ಕಾಗಿ ವಿವಿಧ ರಂಗಗಳಲ್ಲಿನ ಸಾಧನೆಗಳೊಂದಿಗೆ 2013ರಲ್ಲಿದ್ದ ಸ್ಥಿತಿಯನ್ನು ಹೋಲಿಸುವ ಪ್ರಯತ್ನ ಮಾಡಿದರು.

2014ರ ಅಚ್ಛೇ ದಿನ್ ಆಶ್ವಾಸನೆಯಿಂದ ಹಿಡಿದು, ಸಬ್ ಕಾ ಸಾಥ್-ಸಬ್ ಕಾ ವಿಕಾಸ್ ಘೋಷಣೆಯ ವರೆಗಿನ ಈ ರಿಪೋರ್ಟ್ ಕಾರ್ಡ್‌ನಲ್ಲಿ ಮೋದಿ ಅವರು ಪ್ರಸ್ತುತ ಪಡಿಸಿದ ಸಂಗತಿಗಳು ನೆಲಮಟ್ಟದ ವಾಸ್ತವತೆಗಳಿಗೆ ಯಾವುದೇ ರೀತಿಯಲ್ಲಿ ಹೊಂದಿಕೊಳ್ಳುವಂತೆ ಇಲ್ಲ. ಉದ್ಯೋಗವಾಗಲೀ, ರೈತರು ಕೇಳುವ ಕನಿಷ್ಟ ಬೆಂಬಲ ಬೆಲೆಯಾಗಲೀ, ಗ್ರಾಮೀಣ ವಿದ್ಯುದೀಕರಣ, ಶೌಚಾಲಯಗಳ ನಿರ್ಮಾಣ ಮತ್ತು ಮಹಿಳಾ ಸಬಲೀಕರಣವಾಗಲೀ, ಈ ಎಲ್ಲಾ ಕ್ಷೇತ್ರಗಳಲ್ಲೂ ಮೋದಿಯವರು ತನ್ನ ಚರ್ವಿತಚರ್ವಣ ದಾವೆಗಳ ಬಗ್ಗೆ ಮಾತಾಡಿದರು. ಇವೆಲ್ಲವೂ ಟೊಳ್ಳು ಎಂದು ಆಗಲೇ ಕಂಡು ಬಂದಿರುವಂತವುಗಳು.


ಈ ಭಾಷಣದಲ್ಲಿನ ಪ್ರದರ್ಶನ ಗೊಂಬೆಯಂತಿರುವ ಯೋಜನೆಯೆಂದರೆ 'ಪ್ರಧಾನ ಮಂತ್ರಿ ಜನ ಆರೋಗ್ಯ ಅಭಿಯಾನ', ಅಥವ ಈ ವರ್ಷದ ಬಜೆಟಿನಲ್ಲಿ ಪ್ರಕಟಿಸಿದ ರಾಷ್ಟ್ರೀಯ ಆರೋಗ್ಯ ರಕ್ಷಣಾ ಯೋಜನೆ. ಸಪ್ಟಂಬರ್ 25ರಿಂದ ಇದನ್ನು ಆರಂಭಿಸಲಾಗುವುದು, ಇದು 10 ಕೋಟಿ ಕುಟುಂಬಗಳನ್ನು ಒಳಗೊಳ್ಳುತ್ತದೆ, ಪ್ರತಿ ಕುಟುಂಬಕ್ಕೆ 5ಲಕ್ಷ ರೂ. ವಿಮಾರಕ್ಷಣೆ ಇರುತ್ತದೆ ಎಂದು ಅವರು ಹೇಳಿದ್ದಾರೆ.

ಮೋದಿಯವರು ಪ್ರಕಟಿಸಿದ ಇಂತಹ ಎಲ್ಲ ಅಬ್ಬರದ ಯೋಜನೆಗಳಂತೆ ಇದಕ್ಕೂ ಕೇಂದ್ರ ಬಜೆಟಿನಲ್ಲಿ ಕೇವಲ 2000 ಕೊಟಿ ರೂ. ನೀಡಿದ್ದರೆ, ವಾಸ್ತವವಾಗಿ ಈ ಯೋಜನೆಯಲ್ಲಿ 50 ಕೋಟಿ ಜನಗಳಿಗೆ ವಿಮಾರಕ್ಷಣೆ ನೀಡಬೇಕಾದರೆ ಪ್ರತಿವರ್ಷ ಕನಿಷ್ಟ 50,000 ಕೋಟಿ ರೂ.ಗಳಿಂದ 1.2;ಕ್ಷ ಕೋಟಿ ರೂ.ಗಳ ವರೆಗೆ ಬೇಕಾಗುತ್ತದೆ.

ಅಲ್ಲದೆ ಈ ಆರೋಗ್ಯಪಾಲನೆ ಯೋಜನೆಗೆ ಹಣವನ್ನು ಸಾರ್ವಜನಿಕ ಸಂಪನ್ಮೂಲಗಳಿಂದ(ಕೇಂದ್ರ ಮತ್ತು ರಾಜ್ಯ ಸರಕಾರಗಳಿಂದ) ಒದಗಿಸಲಾಗುವುದು, ಆದರೆ ಬಹುಪಾಲು ಪಾವತಿ ಮಾಡುವುದು ಖಾಸಗಿ ಆಸ್ಪತ್ರೆಗಳಿಗೆ. ಖಾಸಗಿ ಭಾಗವಹಿಸುವಿಕೆ ಇರುವ ವಿಮಾ-ಆಧಾರಿತ ಯೋಜನೆ ಸಾರ್ವಜನಿಕ ಹಣವನ್ನು ಖಾಸಗಿ ಆರೋಗ್ಯಪಾಲನೆ ವಲಯಕ್ಕೆ ಹರಿಸುತ್ತದೆ. ಸಾರ್ವಜನಿಕ ಆರೋಗ್ಯ ವ್ಯವಸ್ಥೆಗೆ ಅಗತ್ಯ ಹಣ ಒದಗಿಸದಿರುವುದರಿಂದಾಗಿ ಅದು ಸೊರಗಿ ಹೋಗಿರುವಂತಹ ಸ್ಥಿತಿಯಲ್ಲಿರುವ ಸಮಯದಲ್ಲಿ ಈ ರಾಷ್ಟ್ರೀಯ ಆರೋಗ್ಯಪಾಲನೆ ಯೋಜನೆಯ ಪ್ರಕಟಣೆ ಆಗಿದೆ. 2018-19ರ ಕೇಂದ್ರ ಬಜೆಟಿನಲ್ಲಿ ಆರೋಗ್ಯ ಬಜೆಟಿನಲ್ಲಿ ವಾಸ್ತವವಾಗಿ ಇಳಿಕೆಯಾಗಿದೆ. ಹೀಗೆ ಈ 'ಮೋದಿಕೇರ್' ಅನ್ನುವಂತದ್ದು ಕಾರ್ಪೊರೇಟ್ ಮತ್ತು ಖಾಸಗಿ ಅಸ್ಪತ್ರೆಗಳಿಗೆ ಒಂದು ವರದಾನವಾಗಲಿದೆ.

ಸರಕಾರದ ಸಬ್ಸಿಡಿಗಳ 6 ಕೋಟಿ ಖೋಟಾ ಫಲಾನುಭವಿಗಳನ್ನು ತೆಗೆದು ಹಾಕಲಾಗಿದೆ, ಇದರಿಂದ 90,000 ಕೋಟಿ ರೂ.ಗಳನ್ನು ಉಳಿಸಲಾಗಿದೆ ಎಂಬ ಮೋದಿಯವರ ಜಂಭದ ಮಾತು ಆಧಾರ್‌ಗೆ ಜೋಡಣೆಯಿಂದಾಗಿ ದೊಡ್ಡ ಸಂಖ್ಯೆಯಲ್ಲಿ ಬಡ ಮತ್ತು ದಟ್ಟ ದರಿದ್ರ ಜನಗಳನ್ನು ಅವರ ರೇಶನ್‌ಗಳಿಂದ ವಂಚಿಸಲಾಗಿದೆ ಎಂಬ ಕ್ರೂರ ವಾಸ್ತವತೆಯನ್ನು ಮರೆ ಮಾಚುತ್ತದೆ. ಝಾರ್ಖಂಡ್ ಮತ್ತಿತರ ಕಡೆಗಳಲ್ಲಿ ಹಸಿವಿನಿಂದ ಸಾವು ಅವರ ಮನಸ್ಸನ್ನು ಚುಚ್ಚುವುದಿಲ್ಲ ಎಂಬುದು ಇಲ್ಲಿ ಸ್ವಯಂವೇದ್ಯ.

ಸರಕಾರದ ಸಬ್ಸಿಡಿಗಳ 6 ಕೋಟಿ ಖೋಟಾ ಫಲಾನುಭವಿಗಳನ್ನು ತೆಗೆದು ಹಾಕಲಾಗಿದೆ, ಇದರಿಂದ 90,000 ಕೋಟಿ ರೂ.ಗಳನ್ನು ಉಳಿಸಲಾಗಿದೆ ಎನ್ನುವಾಗ ಝಾರ್ಖಂಡ್ ಮತ್ತಿತರ ಕಡೆಗಳಲ್ಲಿ ಹಸಿವಿನಿಂದ ಸಾವು ನಮ್ಮ ಪ್ರಧಾನಿಗಳ ಮನಸ್ಸನ್ನು ಚುಚ್ಚುವುದಿಲ್ಲ ಎಂಬುದು ಸ್ವಯಂವೇದ್ಯ.



ಭ್ರಷ್ಟಾಚಾರ ಮತ್ತು ಕಪ್ಪು ಹಣದ ವಿರುದ್ಧ ಸಮರದ ಆಡಂಬರ-ಭರಿತ ಮಾತುಗಳ ಪುನರಾವರ್ತನೆ ರಫೇಲ್ ವಿಮಾನ ವ್ಯವಹಾರ ಸರಕಾರವನ್ನು ಬಾಧಿಸುತ್ತಿರುವಾಗ ಮತ್ತು ನೋಟುರದ್ಧತಿಯ ಮಿಥ್ಯೆ ಪೂರ್ಣವಾಗಿ ಮತ್ತು ನಿಜವಾಗಿಯೂ ಸ್ಫೋಟಗೊಂಡಿರುವಾಗ ಒಂದು ಕಂದಾಚಾರದಂತೆ ಕೇಳ ಬರುತ್ತಿದೆ.

ಇಡೀ ದೇಶವನ್ನು, ವಿಶೇಷವಾಗಿ ಕಳೆದ ಮೂರು ತಿಂಗಳಲ್ಲಿ ಆವರಿಸಿದ ಅಮಾನುಷವಾಗಿ ಸಾಯ ಬಡಿವ ಪ್ರಕರಣಗಳ ಬಗ್ಗೆ ಈ ಭಾಷಣದಲ್ಲಿನ ಮೌನ ಕಿವಿಗೆ ಅಪ್ಪಳಿಸುವಂತಿದೆ. ಈ ಅವಧಿಯಾದ್ಯಂತ ಪ್ರಧಾನ ಮಂತ್ರಿಗಳು ಇಂತಹ ಜನಜಂಗುಳಿ ಹಿಂಸಾಚಾರವನ್ನು ಮುಚ್ಚುಮರೆಯಿಲ್ಲದೆ ಖಂಡಿಸಲು ನಿರಾಕರಿಸಿದ್ದಾರೆ. ಕಳೆದ ವರ್ಷದ ಸ್ವಾತಂತ್ರ್ಯ ದಿನದ ಭಾಷಣದಲ್ಲಿ ಮೋದಿಯವರು ನಂಬಿಕೆಯ ಹೆಸರಲ್ಲಿ ಹಿಂಸಾಚಾರದ ವಿರುದ್ಧ ಮಾತಾಡಿದ್ದರು. ಪ್ರಸಕ್ತ ಭಾಷಣದಲ್ಲಿ ಅಂತಹ ಮೇಲುಮೇಲಿನ ಪ್ರಸ್ತಾಪವೂ ಇರಲಿಲ್ಲ. ಅಲ್ಪಸಂಖ್ಯಾತರು ಮತ್ತು ದಲಿತರ ಮೇಲೆ ಹೆಚ್ಚುತ್ತಿರುವ ಹಲ್ಲೆಗಳು ಮತ್ತು ಅವರು ಅನುಭವಿಸುತ್ತಿರುವ ಅಭದ್ರತೆ ಮತ್ತು ಭೀತಿಯ ಬಗ್ಗೆಯೂ ಚಕಾರವಿಲ್ಲ.

ಮೌನ ತಾಂಡವವಾಡುವ ಮತ್ತೊಂದು ಕ್ಷೇತ್ರವೆಂದರೆ ವಿದೇಶಾಂಗ ಧೋರಣೆ ಮತ್ತು ನಮ್ಮ ನೆರೆದೇಶಗಳೊಂದಿಗಿನ ಸಂಬಂಧಗಳು. ಅಮೆರಿಕನ್ ಸಾಮರಿಕ ಹಿತಗಳು ಮತ್ತು ಮಿಲಿಟರಿಯೊಂದಿಗೆ ಹೆಚ್ಚೆಚ್ಚು ತೊಡರಿಕೊಳ್ಳುತ್ತಿರುವುದು ಮತ್ತು ದಕ್ಷಿಣ ಏಶ್ಯಾದಲ್ಲಿನ ನಮ್ಮ ನೆರೆ ದೇಶಗಳೊಂದಿಗಿನ ಸಂಬಂಧಗಳಲ್ಲಿನ ಸಮಸ್ಯೆಗಳ ಬಗ್ಗೆ ಅವರು ಮಾತನಾಡ ಬಯಸುವುದಿಲ್ಲ.

ಸಂಸತ್ತು ಮತ್ತು ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆಗಳನ್ನು ತರುವ ಪ್ರಯತ್ನ ಮುಂತಾದ ಸಂವಿಧಾನಿಕ ವ್ಯವಸ್ಥೆಯನ್ನು ಬದಲಿಸುವ ಮತ್ತು ರಾಜ್ಯಗಳ ಹಕ್ಕುಗಳನ್ನು ರದ್ದುಮಾಡುವ ಕ್ರಮಗಳ ಬಗ್ಗೆಯಾಗಲೀ, ಉನ್ನತ ನ್ಯಾಯಾಂಗದಲ್ಲಿ ನ್ಯಾಯಾಧೀಶರ ಆಯ್ಕೆಯಲ್ಲಿ ಹಸ್ತಕ್ಷೇಪ ಮಾಡುವ ಪ್ರಯತ್ನಗಳಾಗಲೀ ಮತ್ತು ಧರ್ಮಗಳ ಬೇಧಭಾವವಿಲ್ಲದ ಪೌರತ್ವದ ಪರಿಕಲ್ಪನೆಯನ್ನೇ ಬದಲಿಸುವ ಶಾಸನದ ಬಗ್ಗೆಯಾಗಲೀ ಈ ಭಾಷಣದಲ್ಲಿ ಏನೂ ಹೇಳದೆ ತಪ್ಪಿಸಿಕೊಂಡಿರುವುದು ಅವರ ಸ್ವಭಾವಕ್ಕೆ ತಕ್ಕಂತೆಯೇ ಇದೆ. ಒಂದೆಡೆ ಸಂವಿಧಾನಕ್ಕೆ ಕೇವಲ ಮಾತಿನ ಪೂಜೆ ಸಲ್ಲಿಸುವ ಇಬ್ಬಂದಿತನ ಅವರ ಹಿಂದಿನ ಎಲ್ಲ ಸ್ವಾತಂತ್ರ್ಯ ದಿನದ ಭಾಷಣಗಳಂತೆ ಇಲ್ಲಿಯೂ ಇದೆ.

ದೇಶ ಒಂದು ಕವಲುದಾರಿಯಲ್ಲಿರುವ ಸಂದರ್ಭದಲ್ಲಿ 72ನೇ ಸ್ವಾತಂತ್ರ್ಯ ದಿನಾಚರಣೆ ನಡೆಯುತ್ತಿದೆ. 1947ರ ನಂತರ ಎಂದೂ ಕೂಡ ಭಾರತೀಯ ಪ್ರಭುತ್ವದ ಮತ್ತು ಗಣತಂತ್ರ ಸಂವಿಧಾನದ ಜಾತ್ಯತೀತ ಆಧಾರಕ್ಕೆ ಬೆದರಿಕೆ ಈಗಿರುವಷ್ಟು ತೀಕ್ಷ್ಣವಾಗಿರಲಿಲ್ಲ. ಮೋದಿ ಆಳ್ವಿಕೆಯ ಕಳೆದ ನಾಲ್ಕು ವರ್ಷಗಳಲ್ಲಿ ಜಾತ್ಯತೀತ ಪ್ರಭುತ್ವ ಮತ್ತು ಸಂವಿಧಾನವನ್ನು ಒಳಗಿಂದಲೇ ಶಿಥಿಲಗೊಳಿಸುವ ವ್ಯವಸ್ಥಿತ ಪ್ರಯತ್ನಗಳು ಕಾಣ ಬಂದಿವೆ.

ಈ ಸ್ವಾತಂತ್ರ್ಯ ದಿನದಂದು ಕೈಗೊಳ್ಳಬೇಕಾದ ಏಕೈಕ ಪ್ರತಿಜ್ಞೆಯೆಂದರೆ, ಈ ಸ್ಪಷ್ಟವಾದ ಪ್ರಸಕ್ತ ಅಪಾಯವನ್ನು ಕೊನೆಗೊಳಿಸಲು ದೃಢನಿಶ್ಚಯ ಮಾಡುವುದು. ಇದಕ್ಕಾಗಿ, ಮುಂದಿನ ವರ್ಷದ ಸ್ವಾತಂತ್ರ್ಯ ದಿನದ ಭಾಷಣವನ್ನು ಬಿಜೆಪಿ-ಆರೆಸ್ಸೆಸ್ ಮೂಲಕ್ಕೆ ಸೇರಿರದ ಪ್ರಧಾನ ಮಂತ್ರಿಗಳು ನೀಡುವಂತೆ ಮಾಡುವುದು ಅತ್ಯಗತ್ಯವಾಗಿದೆ. ●

ವಿಜಯಕಾಂತ ಠಾಕುರ್ ಹಲವು ಹೋರಾಟಗಳ ಧೀರ ನೇತಾರ -ಸಿಪಿಐ(ಎಂ) ಪೊಲಿಟ್‌ಬ್ಯುರೊ




ಬಿಹಾರದ ಹಿರಿಯ ಕಮ್ಯುನಿಸ್ಟ್ ನೇತಾರ ವಿಜಯಕಾಂತ ಠಾಕುರ್ ಆಗಸ್ಟ್ 12 ರಂದು ನಿಧನರಾಗಿದ್ದಾರೆ. 86 ವರ್ಷವಾಗಿದ್ದ ಅವರು ಇ ಹಿಮದ ಎಸಿಪಿಐ(ಎಂ) ಕೇಂದ್ರ ಸಮಿತಿಯ ಸದಸ್ಯರಾಗಿದ್ದರು. ಅವರ ನಿಧನಕ್ಕೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಳವಾದ ದುಃಖ ವ್ಯಕ್ತಪಡಿಸಿದೆ.

1955-56ರಲ್ಲಿ ವಿದ್ಯಾರ್ಥಿ ಆಂದೋಲನದಲ್ಲಿ ಸಕ್ರಿಯರಾದ ಕಾಂ. ಠಾಕುರ್ ಆ ಮೂಲಕ ಕಮ್ಯುನಿಸ್ಟ್ ಪಕ್ಷ ಸೇರಿದರು, ಮೂಸುದೆ 1975ರಲ್ಲಿ ಸಿಪಿಐ(ಎಂ) ಸೇರಿದರು. ದೀರ್ಘಕಾಲ ಅವರು ಸಿಪಿಐ(ಎಂ)ನ ದರ್ಭಂಗ ಜಿಲ್ಲಾ ಸಮಿತಿಯ ಕಾರ್ಯದರ್ಶಿಗಳಾಗಿ ದುಡಿದರು. ಮುಂದೆ 2005ರಿಂದ 2015ರ ವರೆಗೆ ಪಕ್ಷದ ಬಿಹಾರ ರಾಜ್ಯಸಮಿತಿಯ ಕಾರ್ಯದರ್ಶಿಗಳಾಗಿ ನೇತೃತ್ವ ನೀಡಿದ್ದ ಅವರು 20ನೇ ಮಹಾಧಿವೇಶನದಲ್ಲಿ ಕೇಂದ್ರ ಸಮಿತಿಗೆ ಆಯ್ಕೆಯಾದರು. ಇತ್ತಿಚಿನ ಮಹಾಧಿವೇಶನದಲ್ಲಿ ಅವರು ವಯಸ್ಸಿನ ಕಾರಣದಿಂದ ನಿವೃತ್ತರಾದರು.

ಕಾಂ. ಠಾಕುರ್ ದರ್ಭಂಗಾ, ಪೂರ್ಣಿಯ, ಮತ್ತಿತರ ಬಿಹಾರದ ಜಿಲ್ಲೆಗಳಲ್ಲಿ ಬಡ ಮತ್ತು ಬೂಹೀನ ರೈತರ ಹಲವಾರು ಹೋರಾಟಗಳಿಗೆ ನೇತೃತ್ವ ನೀಡಿದವರು. ಭೂಮಾಲಕರು ಮತ್ತು ಅವರ ಮಾಫಿಯಾಗಳು ಕಾನೂನುಬಾಹಿರವಾಗಿ ಆಕ್ರಮಿಸಿಕೊಂಡಿದ್ದ ಭೂಮಿಯಿಂದ ಅವರನ್ನು ಓಡಿಸುವಲ್ಲಿ ಯಶಸ್ವಿಯಾದ ಹಲವು ಹೋರಾಟಗಳು ಅವರ ನೇತೃತ್ವದಲ್ಲಿ ನಡೆದಿದ್ದು, ಇದರಿಂದಾಗಿ ಅವರು ಈ ಭಾಗದಲ್ಲಿ ದುಡಿಯುವ ಜನಸಮೂಹಗಳ ನಡುವೆ ಹೆಸರುವಾಸಿಯಾಗಿದ್ದರು. ಸತತವಾಗಿ ನಾಲ್ಕು ದಶಕಗಳ ಕಾಲ ಕನ್ಸೀ ಗ್ರಾಮ ಪಂಚಾಯತಿನ ಅಧ್ಯಕ್ಷರಾಗಿದ್ದರು.

ಬಹಳ ಸಮಯದ ವರೆಗೆ ಅವರು ಅಖಿಲ ಭಾರತ ಕಿಸಾನ್ ಸಭಾದ ಬಿಹಾರ ಘಟಕದ ಪ್ರಧಾನ ಕಾರ್ಯದರ್ಶಿಗಳಾಗಿದ್ದರು, ಅಖಿಲ ಭಾರತ ಕಿಸಾನ್ ಮಂಡಳಿಯ ಸದಸ್ಯರೂ ಆಗಿದ್ದರು ಎಂದು ಪೊಲಿಟ್‌ಬ್ಯುರೊ ತನ್ನ ಶ್ರದ್ಧಾಂಜಲಿ ಹೇಳಿಕೆಯಲ್ಲಿ ತಿಳಿಸಿದೆ.



ಭಾರತದ ಮಾಜಿ ಪ್ರಧಾನ ಮಂತ್ರಿ ಅಟಲ್ ಬಿಹಾರಿ ವಾಜಪೇಯಿಯವರು ಆಗಸ್ಟ್ 16ರಂದು ನಿಧನರಾಗಿದ್ದಾರೆ. ಅವರ ನಿಧನದ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ದುಃಖವನ್ನು ವ್ಯಕ್ತಪಡಿಸಿದೆ.

ಶ್ರೀ ವಾಜಪೇಯಿಯವರು ಸಂಸತ್ತಿನಲ್ಲಿ, ಸರಕಾರದಲ್ಲಿ ಮತ್ತು ಪ್ರಧಾನ ಮಂತ್ರಿಯಾಗಿ ಒಂದು ಗಣ್ಯ ರಾಜಕೀಯ ಬದುಕು ಹೊಂದಿದ್ದವರು. ಒಬ್ಬ ರಾಜಕೀಯ ಮುಖಂಡರಾಗಿ ಅವರು ಎಲ್ಲ ವಿಭಾಗಗಳ ಗೌರವವನ್ನು ಗಳಿಸಿದ್ದರು ಎಂದು ಪೊಲಿಟ್‌ಬ್ಯುರೊ ಹೇಳಿದೆ.

60 ಕೇಂದ್ರಗಳಲ್ಲಿ ಸ್ವಾತಂತ್ರ್ಯೋತ್ಸವ-ಸಾಮೂಹಿಕ ಜಾಗರಣೆ 2018

ನೈಜ ಸ್ವಾತಂತ್ರ್ಯಕ್ಕೆ ಸಾವಿರಾರು ಕಾರ್ಮಿಕರ ಜಾಗರಣೆ


ಬೆಂಗಳೂರು


ಬೆಂಗಳೂರು


ಬೆಂಗಳೂರು


ಧಾರವಾಡ


ದಾವಣಗೆರೆ


ಬಿಜಾಪುರ



ಮಂಗಳೂರು


ತುಮಕೂರು



ಮದ್ದೂರು



ಅಂಕೋಲ


ಚಿಂಚೋಳಿ


ಹಾಸನ

0.1ಶೇ. ಶ್ರೀಮಂತರ ಪರವಾದ ಧೋರಣೆಗಳ ವಿರುದ್ಧ 99.9ಶೇ. ಜನಸಾಮಾನ್ಯರ-ಪರ ಧೋರಣೆಗಳಿಗಾಗಿ



ಸಪ್ಟಂಬರ್ 5: ಎಲ್ಲರ ನಡಿಗೆ–ದಿಲ್ಲಿಯ ಕಡೆಗೆ

ಇದು ದೇಶದ ಕೋಟ್ಯಂತರ ಕಾರ್ಮಿಕರು, ರೈತರು ಮತ್ತು ಕೃಷಿ ಕೂಲಿಕಾರರ ನಡುವೆ ಕೆಲಸ ಮಾಡುತ್ತಿರುವ ಸಿಐಟಿಯು, ಎಐಕೆಎಸ್(ಅಖಿಲ ಭಾರತ ಕಿಸಾನ್ ಸಭಾ) ಮತ್ತು ಎಐಎಡಬ್ಲ್ಯುಯು (ಅಖಿಲ ಭಾರತ ಕೃಷಿಕೂಲಿಕಾರರ ಸಂಘ) ನೀಡಿರುವ ಕರೆ.

ಕೇವಲ 0.1% ದಷ್ಟು ಶ್ರೀಮಂತರ ಸಮೃದ್ಧಿಗಾಗಿ ಕಲ್ಪಿಸಿರುವ ಧೋರಣೆಗಳನ್ನು ಒಪ್ಪಲು ಸಾಧ್ಯವಿಲ್ಲ ಎಂದು ದುಡಿಯುವ ಜನಗಳು ಒಕ್ಕೊರಲಿನಿಂದ ಹೇಳಬೇಕಾದ ಸಮಯ ಬಂದಿದೆ;

ಜಾತಿ–ಧರ್ಮ–ಪ್ರಾದೇಶಿಕ ಭಾವನೆಗಳನ್ನು ಕೆರಳಿಸಿ ಜನರ ಐಕ್ಯತೆಯನ್ನು ಮುರಿಯುವ ಕೋಮುವಾದಿ ಹುನ್ನಾರಗಳನ್ನು ಸೋಲಿಸಲು ದೃಢ ಐಕ್ಯತೆಯನ್ನು ಕಟ್ಟ ಬೇಕಾದ ಸಮಯ ಬಂದಿದೆ;

ಒಟ್ಟಿನಲ್ಲಿ, ಈ ದೇಶದ ಬಹುಸಂಖ್ಯೆಯ ಜನರ ಹಿತ ಕಾಪಾಡಲು ಅಗತ್ಯವಾದ ಪರ್ಯಾಯ ಧೋರಣೆಗಳಿಗಾಗಿ ಒತ್ತಾಯ ಮಾಡಲೇಬೇಕಾದ ಸಮಯ ಬಂದಿದೆ ಎಂದು ಮನಗಂಡಿರುವ ಈ ಸಂಘಟನೆಗಳು ಒಂದು ದೃಢ ಹೋರಾಟದ ಕರೆ ನೀಡಿವೆ.

* **ಇದರ ಮೊದಲ ಭಾಗವಾಗಿ ದೇಶಾದ್ಯಂತ ಕೋಟ್ಯಂತರ ರೈತರು ಆಗಸ್ಟ್ 9, 2018ರಂದು, 76 ವರ್ಷಗಳ ಹಿಂದೆ 'ಬ್ರಿಟಿಷರೇ ದೇಶ ಬಿಟ್ಟು ತೊಲಗಿ' ಎಂದು ಆಗ್ರಹಿಸಿ ಮಾಡು ಇಲ್ಲವೆ ಮಡಿ ಎಂಬ ಘೋಷಣೆಯೊಂದಿಗೆ ಸ್ವಾತಂತ್ರ್ಯ ಹೋರಾಟಗಾರರು ಕ್ವಿಟ್ ಇಂಡಿಯಾ ಚಳುವಳಿಗೆ ಧುಮುಕಿದ ಐತಿಹಾಸಿಕ ದಿನದಂದು ಜೈಲು ಭರೋ ಪ್ರತಿಭಟನೆ ನಡೆಸಿದ್ದಾರೆ.**
* **ಇದನ್ನನುಸರಿಸಿ ಸ್ವಾತಂತ್ರ್ಯ ದಿನಾಚರಣೆಯ ಹಿಂದಿನ ದಿನ ಆಗಸ್ಟ್ 14ರ ರಾತ್ರಿಯಿಡಿ "ಸ್ವಾತಂತ್ರ್ಯೋತ್ಸವ ಸಾಮೂಹಿಕ ಜಾಗರಣೆ" ನಡೆಸಿದ್ದಾರೆ.**
* **ಈಗ ಸೆಪ್ಟೆಂಬರ್ 5, 2018ರಂದು ದೇಶದ ರಾಜಧಾನಿಗೆ ಲಗ್ಗೆಯಿಟ್ಟು 99.9% ದಷ್ಟಿರುವ ಜನಸಾಮಾನ್ಯರ ಪರ ಪರ್ಯಾಯ ಧೋರಣೆಗಳನ್ನು ಒತ್ತಾಯಿಸಿ "ಮಜ್ದೂರ್–ಕಿಸಾನ್ ಪ್ರತಿಭಟನಾ ಪ್ರದರ್ಶನ" ನಡೆಸಲು ಈ ಮೂರು ಸಂಘಟನೆಗಳು ನಿರ್ಧರಿಸಿವೆ.**



ದೇಶದ ದುಡಿಯುವ ಜನಗಳ ಆಕ್ರೋಶ ಏಕೆ, ಅವರು ಈ ದೇಶದ ಆಳರಸರಿಂದ ಕೇಳುತ್ತಿರುವುದಾದರೂ ಏನು ಎಂಬ ಬಗ್ಗೆ ಕಿರುಪುಸ್ತಕಗಳನ್ನು ಪ್ರಕಟಿಸಿ ದೇಶದ ಮೂಲೆ–ಮೂಲೆಗಳಿಗೆ ಈ ಸಂಘಟನೆಗಳ ಕಾರ್ಯಕರ್ತರು ಒಯ್ಯುತ್ತಿದ್ದಾರೆ. ದೇಶದ ದುಡಿಯುವ ಜನರ ಬೇಡಿಕೆಗಳಲ್ಲಿ ಗುತ್ತಿಗೆಕರಣ ಮತ್ತು ಪಿಂಚಣಿ ಬಗ್ಗೆ ಕಳೆದ ವಾರ ಓದಿದ್ದೀರಿ. ಈವಾರ ಇನ್ನು ಕೆಲವು ಬೇಡಿಕೆಗಳ ಬಗ್ಗೆ....

ಬೆಲೆಗಳ ಮೇಲೆ ಹತೋಟಿ ಸಾಧ್ಯವಿದೆ

ಬೆಲೆಗಳು ತಂತಾನೇ ಏರುವುದಿಲ್ಲ. ಅವು ಏರುವಂತೆ ಮಾಡಲಾಗುತ್ತದೆ. ಸರಕಾರ ದೊಡ್ಡ ಬಂಡವಳಿಗರು–ದೊಡ್ಡ ಭೂಮಾಲಕರ ಲಾಭದ ಹಸಿವನ್ನು ಹಿಂಗಿಸಲು ಜನಸಾಮಾನ್ಯರ ಹಿತಗಳನ್ನು ಬಲಿಗೊಟ್ಟು ಈ ಬೆಲೆಯೆರಿಕೆಗಳನ್ನು ಮಾಡಿಸುತ್ತದೆ. ಇದು ನವ–ಉದಾರವಾದಿ ಬಂಡವಾಳಶಾಹಿ ವ್ಯವಸ್ಥೆಯ ಮತ್ತು ಸರಕಾರದಲ್ಲಿರುವ ಅವರ ಸೇವಕರ ನಿಜಸ್ವರೂಪ.

ಮೋದಿ ಸರಕಾರ ಕಳೆದ ನಾಲ್ಕು ವರ್ಷಗಳಲ್ಲಿ ಹಣದುಬ್ಬರ ಸುಮಾರಾಗಿ ಇಲ್ಲದಂತೆ ಮಾಡಿರುವುದಾಗಿ ಹೇಳಿಕೊಳ್ಳುತ್ತದೆ. ಈ ಸರಕಾರದ ಇತರ ಜಂಭಗಳಂತೆ ಇದೂ ಬರೀ ಲೊಳಲೊಟ್ಟೆ ಎಂದು ದುಡಿಯುವ ಜನಗಳು ತಮ್ಮ ಕಟು ಅನುಭವಗಳಿಂದಲೇ ಕಾಣುತ್ತಿದ್ದಾರೆ. ಸರಕಾರದ ಅಧಿಕೃತ ಬೆಲೆ ಸೂಚ್ಯಂಕಗಳ ಪ್ರಕಾರವೂ ಗ್ರಾಮೀಣ ಪ್ರದೇಶಗಳಲ್ಲಿ ಈ ಅವಧಿಯಲ್ಲಿ 21% ಬೆಲೆಯೇರಿಕೆ ಆಗಿದೆ. ನಗರಪ್ರದೇಶಗಳಲ್ಲಿ ಇದು 17%. ರಿಝರ್ವ್ ಬ್ಯಾಂಕ್ ಕೂಡ ಹಣದುಬ್ಬರ ಹತೋಟಿಯಲ್ಲಿದೆ ಎಂಬ ಸರಕಾರೀ ದಾವೆಯನ್ನು ಒಪ್ಪುತ್ತಿಲ್ಲ.

ಈ ಸೂಚ್ಯಂಕಗಳು ಕೂಡ ನಿಜಸ್ಥಿತಿಯುನ್ನು ಸಂಪೂರ್ಣವಾಗಿ ಬಿಂಬಿಸುತ್ತಿಲ್ಲ. ಕಳೆದ ನಾಲ್ಕು ವರ್ಷಗಳಲ್ಲಿ ಕೆಲವು ನಿರ್ದಿಷ್ಟ ಸರಕು–ಸಾಮಗ್ರಿಗಳ ಬೆಲೆಗಳು ವಿಪರೀತವಾಗಿ ಏರಿದವು. ಉದಾ: 2015ರಲ್ಲಿ ತೊಗರಿಬೇಳೆ ಕೆಜಿಗೆ 200ರೂ. ಆಯಿತು, 2017ರಲ್ಲಿ ಸಕ್ಕರೆಗೆ 50ರೂ. ಈರುಳ್ಳಿ ಮೋದಿ ಸರಕಾರದ ಮೊದಲ ವರ್ಷದಲ್ಲೇ 100ರೂ. ದಾಟಿತು. ಈ ನಾಲ್ಕು ವರ್ಷಗಳಲ್ಲಿ ಇಂತಹ ವಿಪರೀತ ಏರಿಕೆಗಳು ಮತ್ತೆ–ಮತ್ತೆ ಬಹಳಷ್ಟು ಬಾಧಿಸಿವೆ. ಇವು ಬೆಲೆ ಸೂಚ್ಯಂಕಗಳಲ್ಲಿ ಕಾಣಿಸುವುದಿಲ್ಲ. ಮೋದಿ ಸರಕಾರದ ಕಟ್ಟಾ ಬೆಂಬಲಿಗರಾದ ಸಂಪನ್ನ ವಿಭಾಗಗಳನ್ನು ಇಂತಹ ಏರಿಕೆಗಳು ಅಷ್ಟಾಗಿ ಬಾಧಿಸುವುದಿಲ್ಲ. ಆದರೆ ಹೇಗೋ ಜೀವನ ಸಾಗಿಸಬೇಕಾದ ದುಡಿಯುವ ಜನಗಳು ಇದನ್ನು ತಡೆದುಕೊಳ್ಳುವುದು ಸಾಧ್ಯವಾಗುವದಿಲ್ಲ, ಅವರು ಅಂತಹ ಸಾಮಗ್ರಿಗಳ ಬಳಕೆಯನ್ನೇ ಕಡಿತ ಮಾಬೇಕಾಗುತ್ತದೆ.

ದೊಡ್ಡ ವಿರೋಧಾಭಾಸ

ಆಗಾಗ ಬಾಧಿಸುತ್ತಿರುವ ಈ ಏರಿಕೆಗಳಿಂದ ರೈತರ ಆದಾಯ ಹೆಚ್ಚುತ್ತಿದ್ದರೆ ಅದು ಬೇರೆ ಮಾತು. ಆದರೆ ನಿಜಸಂಗತಿಯೆಂದರೆ ಬೆಲೆಗಳು ಗಗನ ಮುಟ್ಟುತ್ತಿರುವಾಗಲೇ ರೈತರು ತಮ್ಮ ಬೆಳೆಗಳಿಗೆ ಸರಿಯಾದ ಬೆಲೆಗಳು ಸಿಗುತ್ತಿಲ್ಲ ಎಂದು ಅವನೆಲ್ಲ ರಸ್ತೆಗೆ ಸುರಿಯುವುದನ್ನು ಕಾಣುತ್ತಿದ್ದೇವೆ. ಕಾರಣ ಅವರು ಈ ಬೆಳೆಗಳನ್ನು ಬೆಳೆಯಲು ಬೇಕಾಗುವ ಗೊಬ್ಬರ, ಕೀಟನಾಶಕ, ಡೀಸೆಲ್, ಮೇವು ಇತ್ಯಾದಿಗಳ ಬೆಲೆಗಳು ಸತತವಾಗಿ ಏರುತ್ತಿವೆ.

ಆಹಾರ ಉತ್ಪಾದಿಸುವ ರೈತರಿಗೆ ಫಲದಾಯಕ ಬೆಲೆಗಳು ಸಿಗುತ್ತಿಲ್ಲ, ಅದೇ ವೇಳೆಗೆ ರೈತರೂ ಸೇರಿದಂತೆ ಜನಸಾಮಾನ್ಯರಿಗೆ ಇವನ್ನು ಮಾರುಕಟ್ಟೆಗಳಲ್ಲಿ ಅವುಗಳ ವಿಪರೀತ ಬೆಲೆಗಳಿಂದಾಗಿ ಖರೀದಿಸಲಾಗುತ್ತಿಲ್ಲ ಎಂಬುದೊಂದು ದೊಡ್ಡ ವಿರೋಧಾಭಾಸ.

ಬೆಲೆಯೇರಿಕೆಗಳ ಹಣ ಎಲ್ಲಿಗೆ ಹೋಗುತ್ತದೆ?

ಈ ವಿಪರೀತ ಬೆಲೆಗಳಿಂದ ಸಂಗ್ರಹವಾಗುವ ಹಣ ನಿಜವಾದ ಉತ್ಪಾದಕರಾದ ರೈತರಿಗೆ ಹೋಗದಿದ್ದರೆ ಮತ್ತೆ ಎಲ್ಲಿಗೆ ಹೋಗುತ್ತದೆ? ಕಾರ್ಪೊರೇಟ್‌ಗಳು–ದೊಡ್ಡ ಭೂಮಾಲಕರ ಪ್ರಾಬಲ್ಯ ಇರುವ ದೊಡ್ಡ ವ್ಯಾಪಾರಿಗಳು–ಲೇವಾದೇವಿಗಾರರ ಕೂಟಗಳಿಗೆ.

ದೇಶದ ಮೂರನೇ ಎರಡರಷ್ಟು ಸಣ್ಣ ಮತ್ತು ಅಯಿಚಿನ, ಕೆಲವೊಮ್ಮೆ ಕೆಲವು ಮಧ್ಯಮ ರೈತರಿಗೂ ಕೂಡ ಸಾಂಸ್ಥಿಕ ಸಾಲಗಳು ಸಿಗುವುದಿಲ್ಲ. ಅವರು ಈ ವ್ಯಾಪಾರಿ–ಲೇವಾದೇವಿ ಕೂಟವನ್ನೇ ಅವಲಂಬಿಸಬೇಕು. ಮಾರುಕಟ್ಟೆಗಳ ಹತೋಟಿ ಇವರ ಕೈಗಳಲ್ಲೇ ಇದೆ. ಅವರ ಸಟ್ಟಾವ್ಯವಹಾರಗಳು ಬೆಲೆಯೇರಿಕೆಯ ಒಂದು ಮುಖ್ಯ ಕಾರಣ. ಸರಕಾರ 'ಸುಲಭ ವ್ಯಾಪಾರ'ಕ್ಕೆ ಅನುಕೂಲ ಮಾಡಿಕೊಡುವ ಹೆಸರಿನಲ್ಲಿ ಸಟ್ಟಾಕೋರತನದ ಮೇಲೆ ಹತೋಟಿ ಹಾಕಲು ನಿರಾಕರಿಸುತ್ತದೆ.

ಶಿಕ್ಷಣ ಮತ್ತು ಆರೋಗ್ಯ

ಇವು ಒಂದು ಘನತೆಯ ಮಾನವ ಬದುಕಿಗೆ ಅತ್ಯಗತ್ಯ. ಆದರೆ ಸರಕಾರ ಈ ಕ್ಷೇತ್ರಗಳಲ್ಲಿ

ಪುಟ 10 ಕ್ಕೆ

ಎಲ್ಲರಿಗೂ 18,000ರೂ. ಕನಿಷ್ಟ ಸಂಬಳ ಮತ್ತು ಬೆಲೆ ಸೂಚ್ಯಂಕದೊಡನೆ ಜೋಡಣೆ

2016ರಿಂದಲೂ ಜಂಟಿ ಕಾರ್ಮಿಕ ಆಂದೋಲನ ತಿಂಗಳಿಗೆ 18,000ರೂ.ಗಳ ಕನಿಷ್ಟ ಸಂಬಳವನ್ನು ಆಗ್ರಹಿಸುತ್ತ ಬಂದಿದೆ. ಬೆಲೆಯೇರಿಕೆಗಳು ದುಡಿಮೆಗಾರರ ಆಧಾಯವನ್ನು ಕುಗ್ಗಿಸುತ್ತಲೇ ಇರುವುದರಿಂದ ಈ ಕನಿಷ್ಟ ಸಂಬಳವನ್ನು ಬಳಕೆದಾರರ ಬೆಲೆ ಸೂಚ್ಯಂಕಕ್ಕೆ ಜೋಡಿಸಬೇಕು ಎಂದೂ ಎಲ್ಲ ಕಾರ್ಮಿಕ ಸಂಘಗಳೂ ಆಗ್ರಹಿಸುತ್ತಿವೆ.

ಇದಕ್ಕೆ ಸಮರ್ಥನೆಯೇನು?

ಬಿಜೆಪಿ ನೇತೃತ್ವದ ಸರಕಾರವೇ ನೇಮಿಸಿದ ಏಳನೇ ವೇತನ ಆಯೋಗ 18,000ರೂ. ಕನಿಷ್ಟ ಸಂಬಳದ ಶಿಫಾರಸು ಮಾಡಿದೆ. ಇದು 15ನೇ ಭಾರತೀಯ ಕಾರ್ಮಿಕ ಸಮ್ಮೇಳನ (ಐಎಲ್‌ಸಿ) ಸರ್ವಾನುಮತದಿಂದ ಅಂಗೀಕರಿಸಿದ ಸೂತ್ರವನ್ನು ಮತ್ತು 1992ರ ಸುಪ್ರಿಂ ಕೋರ್ಟ್ ರಫ್ತಕೊಸ್ ಅಂಡ್ ಬ್ರೆಟ್ ಮೊಕದ್ದಮೆಯಲ್ಲಿ ನೀಡಿದ ನಿರ್ದೇಶನಗಳನ್ನು ಆಧರಿಸಿದೆ. 2012ರಲ್ಲಿ ನಡೆದ 44ನೇ ಐಎಲ್‌ಸಿ ಮತ್ತು 2015ರಲ್ಲಿ ನಡೆದ 46ನೇ ಐಎಲ್‌ಸಿ ಇದನ್ನು ಪುನರುಚ್ಚರಿಸಿದವು. ಆ ಸೂತ್ರ ಮತ್ತು ನಿರ್ದೇಶನ ಹೀಗಿದೆ:

1. ಒಂದು ಮೂರು ಘಟಕಗಳ(ಇಬ್ಬರು ವಯಸ್ಕರು ಮತ್ತು ಇಬ್ಬರು ಮಕ್ಕಳು) ಒಂದು ಕಾರ್ಮಿಕ ಕುಟುಂಬಕ್ಕೆ ದಿನಕ್ಕೆ ತಲಾ ಕನಿಷ್ಟ 2700 ಕ್ಯಾಲರಿ ಆಹಾರ ಬೇಕು.
2. ತಲಾಬಟ್ಟೆ ವರ್ಷಕ್ಕೆ 18 ಗಜ ಬೇಕು.
3. ಸರಕಾರ ಕಡಿಮೆ ವರಮಾನದವರಿಗೆ ಕೈಗಾರಿಕಾ ವಸತಿ ಯೋಜನೆಯ ಅಡಿಯಲ್ಲಿ ವಸೂಲಿ ಮಾಡುವ ಕನಿಷ್ಟ ಬಾಡಿಗೆ ಹಣ ಬೇಕು.
4. ಇಂಧನ, ಬೆಳಕುಮತ್ತಿತರ ಖರ್ಚುಗಳಿಗೆಂದು ಒಟ್ಟು

ಪುಟ 10 ಕ್ಕೆ

ಎಲ್ಲ ಕಾರ್ಮಿಕರಿಗೂ, ಅವರು ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ರಿರಲಿ, ಕಚೇರಿಗಳು, ಕೃಷಿ ಗದ್ದೆಗಳು ಆಥವ ಅರಣ್ಯಗಳಲ್ಲಿ ಎಲ್ಲಿಯೇ ಕೆಲಸ ಮಾಡುತ್ತಿದ್ದರೂ, ಕನಿಷ್ಟ ಸಂಬಳಗಳು ಸಿಗಲೇ ಬೇಕು ಎಂಬುದು ಮಜ್ದೂರ್–ಕಿಸಾನ್ ಸಂಘರ್ಷ ರ್‍ಯಾಲಿಯ ಆಗ್ರಹ. ದೊಡ್ಡ ಕಾರ್ಪೊರೇಟ್‌ಗಳ ಹೊಟ್ಟೆ ತುಂಬಿಸಲು ಶ್ರಮಜೀವಿಗಳ ಹೊಟ್ಟೆ ಬಡಿಯುವ ಈ ಧೋರಣೆಗಳನ್ನು ಬದಲಿಸಲಿಸದೆ ದೇಶದ ರೈತರಿಗೆ ಮತ್ತು ಕಾರ್ಮಿಕರಿಗೆ ಘನತೆಯ ಬದುಕು ಅಸಾಧ್ಯ.

ಎಲ್ಲಾ ದುಡಿಯುವ ಜನಗಳಿಗೂ ಪರಿಣಾಮಕಾರಿ ಸಾಮಾಜಿಕ ಭದ್ರತೆ

ಎಲ್ಲ ದುಡಿಯುವ ಜನರಿಗೆ ಅವರು ಎಲ್ಲೇ ದುಡಿಯುತ್ತಿರಲಿ ಅವರಿಗೆ ಸಾಮಾಜಿಕ ಭದ್ರತೆ ಒದಗಿಸುವುದು ಅಗತ್ಯ.

ಇಂದು ದುಡಿಯುವ ವರ್ಗದ ಸ್ವಲ್ಪ ಮಟ್ಟಿನ ಪ್ರಮಾಣದ ಸಂಘಟಿತ ಕ್ಷೇತ್ರದ ನೌಕರರಿಗೆ ಸಾಮಾಜಿಕ ಭದ್ರತಾ ಸೌಲಭ್ಯಗಳಾದ ಭವಿಷ್ಯನಿಧಿ, ಇಎಸ್‌ಐ, ವೈದ್ಯಕೀಯ ಸೌಲಭ್ಯ, ಹೆರಿಗೆ ಸೌಲಭ್ಯ, ಅಪಘಾತ ಪರಿಹಾರ, ಗ್ರಾಚುಯಿಟಿ, ಪೆನ್ಶನ್ ದೊರಕುತ್ತಿದೆ. ಆದರೆ ಇವುಗಳನ್ನು ಜಾರಿಗೊಳಿಸುವ ವ್ಯವಸ್ಥೆ ದುರ್ಬಲವಾಗಿರುವುದರಿಂದ ಹಾಗೂ ಸರ್ಕಾರವೇ ಇವುಗಳನ್ನು ಉತ್ತೇಜಿಸುವುದರಿಂದ ಸಂಘಟಿತ ಕ್ಷೇತ್ರದ 50% ನೌಕರರು ಅದರಲ್ಲೂ ಕಾಂಟ್ರಾಕ್ಟ್ ನೌಕರರು ಕಾನೂನು ಬದ್ಧ ಸಾಮಾಜಿಕ ಭದ್ರತಾ ವ್ಯವಸ್ಥೆಯ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ.

ಜಿಡಿಪಿಗೆ ಶೇ. 60% ಪಾಲು ದುಡಿಯುತ್ತಿರುವ ಅಸಂಘಟಿತ ಕೆಲಸಗಾರರು ಯಾವ ಸಾಮಾಜಿಕ ಭದ್ರತೆಯನ್ನು ಪಡೆದಿಲ್ಲ.ಬೀಡಿ ಕೆಲಸಗಾರರು, ಕಟ್ಟಡ ಕಾರ್ಮಿಕರು, ಸಿನಿಮಾ ಕಾರ್ಮಿಕರು, ಗಣಿ ಕಾರ್ಮಿಕರು ಸ್ವಲ್ಪ ಮಟ್ಟಿನ ಸೌಲಭ್ಯಗಳಿವೆ. ಅದರೆ ಅದೂ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜಾರಿಗೊಳಿಸುವ ವ್ಯವಸ್ಥೆ ದುರ್ಬಲವಾಗಿರುವುದರಿಂದ ಕೇವಲ 30% ಮಂದಿಗೆ ತಲುಪುತ್ತಿದೆ.

ಸುಲಭವಾಗಿ ವ್ಯಾಪಾರ ನಡೆಸಲು ಉದ್ಯಮಿಗಳಿಗೆ ಖಚಿತಪಡಿಸಿಕೊಳ್ಳುವುದೇ ಸರ್ಕಾರ ಅಪ್ಪಿಕೊಂಡಿರುವ ನವ ಉದಾರವಾದದ ಆದ್ಯತೆ. ಕಾರ್ಮಿಕ ಕಾನೂನುಗಳು ಜಾರಿ ಈ ನೀತಿಯ ಮೊದಲ ಬಲಿಪಶು. ಸಾಮಾಜಿಕ ಭದ್ರತಾ ಸಂಹಿತೆ ಮುಖಾಂತರ ಎಲ್ಲ ರಿಕ್ಷಾವಾಲ,

ಪುಟ 10 ಕ್ಕೆ

ಎಲ್ಲರಿಗೂ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಒದಗಿಸುವ ನೈಜ ಉದ್ದೇಶವಿದ್ದರೆ ಅದು ಸಾಧ್ಯವಿದೆ. ಇದಕ್ಕೆ ಸಂಪನ್ಮೂಲ ಲಭ್ಯವಿದೆ. ಈಗ ಬೇಕಿರುವುದು ಕಾರ್ಪೊರೇಟ್–ವ್ಯಾಪಾರೀ ಕೂಟದ ಬದಲು ಜನರ ಹಿತಸಾಧನೆಗಾಗಿ ಧೋರಣೆಗಳನ್ನು ರೂಪಿಸುವ ಇಚ್ಚಾಶಕ್ತಿ ಮಾತ್ರ. ಈಗಿರುವ, ಕಾರ್ಯಗತವಾಗುತ್ತಿರುವ ಸ್ಕೀಂಗಳನ್ನು, ಶಾಸನಗಳನ್ನು ಕಳಚಿ ಹಾಕುವ ಉದ್ದೇಶದ ಧೋರಣೆಗಳನ್ನು ಸಹಿಸುವುದಿಲ್ಲ ಎಂದು ಬಿಜೆಪಿ ಸರಕಾರಕ್ಕೆ ರೈತರು ಕಾರ್ಮಿಕರು ಎಚ್ಚರಿಕೆ ಕೊಡುತ್ತಿದ್ದಾರೆ.

ಪುಟ 9 ರಿಂದ

ಬೆಲೆಗಳ ಮೇಲೆ ಹತೋಟಿ ಸಾಧ್ಯವಿದೆ

ಖಾಸಗಿಯವರ ವಿಸ್ತರಣೆಗೆ ಹೆಚ್ಚು ಒತ್ತು ಕೊಡುತ್ತಿದೆ. ಇದರಿಂದಾಗಿ ಇವು ದಿನೇದಿನೇ ವೆಚ್ಚದಾಯಕವಾಗುತ್ತಿವೆ. ಜನಸಾಮಾನ್ಯರ ಮೇಲಿನ ಸಾಲದ ಹೊರೆಗಳು ಹೆಚ್ಚುತ್ತಿರುವಲ್ಲಿ ಆರೋಗ್ಯಪಾಲನೆಯ ಖರ್ಚುಗಳು ಎರಡನೇ ದೊಡ್ಡ ಕಾರಣ. ಆದರೆ ಮೋದಿ ಸರಕಾರಕ್ಕೆ ಸಾರ್ವಜನಿಕ ಆರೋಗ್ಯಪಾಲನೆ ವ್ಯವಸ್ಥೆಯ ಬದಲು ಪಿಪಿಪಿ(ಸಾರ್ವಜನಿಕ-ಖಾಸಗಿ-ಪಾಲುದಾರಿಕೆ) ಮತ್ತು ಆರೋಗ್ಯವಿಮೆಯ ದಾರಿಯಲ್ಲೇ ಹೆಚ್ಚು ನಂಬಿಕೆ.

ಪೆಟ್ರೋಲ್-ಡೀಸೆಲ್ ಬೆಲೆಗಳು – ಅತಿ ದೊಡ್ಡ ವಿಶ್ವಾಸಘಾತ

ಈ ಸರಕಾರ ಪೆಟ್ರೋಲ್-ಡೀಸೆಲ್ ಬೆಲೆಗಳ ವಿಷಯದಲ್ಲಿ ತಳೆದ ಧೋರಣೆಯಂತೂ ಜನಗಳಿಗೆ ಮಾಡಿರುವ ಅತಿದೊಡ್ಡ ವಿಶ್ವಾಸಘಾತ. ಅಂತರ್ರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಕಚ್ಚಾತೈಲದ ಬೆಲೆಗಳು ಇಳಿಯುತ್ತಿದ್ದಾಗ ಅದರ ಪ್ರಯೋಜನವನ್ನು ಜನಗಳಿಗೆ ಒದಗಿಸುವ ಬದಲು ಸುಂಕಗಳನ್ನು ಹೆಚ್ಚಿಸಿ ತಾನೇ ಅದನ್ನು ಬಾಚಿಕೊಂಡಿತು. ಮೂರೇ ವರ್ಷಗಳಲ್ಲಿ ಪೆಟ್ರೋಲಿಯಂ ಉತ್ಪನ್ನಗಳಿಂದ ಅದು ಪಡೆದ ಆದಾಯ 1.26ಲಕ್ಷ ಕೋಟಿರೂ.ನಿಂದ 2.73ಲಕ್ಷ ಕೋಟಿರೂ.ಗಳಿಗೇರಿತು. ಅಂದರೆ ಪ್ರತಿ ಕುಟುಂಬದಿಂದ ವರ್ಷಕ್ಕೆ 6000ರೂ.ನಷ್ಟು ಹೆಚ್ಚುವರಿ ತೆರಿಗೆಯನ್ನು ಕಸಿದುಕೊಂಡು ಬಡಕುಟುಂಬಗಳ ಆಧಾಯಗಳನ್ನು ಅಷ್ಟು ಪ್ರಮಾಣದಲ್ಲಿ ಕಡಿತ ಮಾಡಿತು. ಕೇಂದ್ರದಲ್ಲಿನ ಸರಕಾರಗಳು ಸತತವಾಗಿ ಈ ಲೂಟಿಯನ್ನು ನಡೆಸುತ್ತಲೇ ಬಂದಿವೆ.

ಒಟ್ಟಾರೆಯಾಗಿ ಹೇಳುವುದಾದರೆ, ಬೆಲೆಗಳು ತಂತಾನೇ ಏರುವುದಿಲ್ಲ. ಅವು ಏರುವಂತೆ ಮಾಡಲಾಗುತ್ತದೆ. ಸರಕಾರ ದೊಡ್ಡ ಬಂಡವಳಿಗರು-ದೊಡ್ಡ ಭೂಮಾಲಕರ ಲಾಭದ ಹಸಿವನ್ನು ಹಿಂಗಿಸಲು ಜನಸಾಮಾನ್ಯರ ಹಿತಗಳನ್ನು ಬಲಿಗೊಟ್ಟು ಈ ಬೆಲೆಯೇರಿಕೆಗಳನ್ನು ಮಾಡಿಸುತ್ತದೆ. ಇದು ನವ-ಉದಾರವಾದಿ ಬಂಡವಾಳಶಾಹಿ ವ್ಯವಸ್ಥೆಯ ಮತ್ತು ಸರಕಾರದಲ್ಲಿರುವ ಅವರ ಸೇವಕರ ನಿಜಸ್ವರೂಪ.

ಬೆಲೆಗಳನ್ನು ಹತೋಟಿಯಲ್ಲಿಡಲು ಸಾಧ್ಯವಿದೆ.

ಅದಕ್ಕೆ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬೇಕು:

* ಆಹಾರ ವಸ್ತುಗಳಲ್ಲಿ ಸಟ್ಟಾ ವ್ಯಾಪಾರವನ್ನು ನಿಷೇಧಿಸಬೇಕು.
* ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಸಾರ್ವತ್ರೀಕರಿಸಬೇಕು, ಅದರಲ್ಲಿ ದೈನಂದಿನ ಅಗತ್ಯದ 14 ಸರಕುಗಳನ್ನು ಸೇರಿಸಬೇಕು.
* ಪೆಟ್ರೋಲ್-ಡೀಸೆಲ್ ಮೇಲೆ ತೆರಿಗೆಗಳನ್ನು ಇಳಿಸಬೇಕು ಮತ್ತು ಅವುಗಳ ಬೆಲೆ ನಿರ್ಧರಿಸುವಲ್ಲಿ ಆಮದು ಸಾಮ್ಯತೆ ವ್ಯವಸ್ಥೆಯನ್ನು ರದ್ದು ಮಾಡಿ ನಿಜವಾದ ವೆಚ್ಚ ಮತ್ತು ತರ್ಕಬದ್ಧ ಪ್ರತಿಫಲ ಆಧರಿತ ವ್ಯವಸ್ಥೆಯನ್ನು ತರಬೇಕು.
* ಶಿಕ್ಷಣ ಮತ್ತು ಆರೋಗ್ಯ ಬಾಬ್ತು ಸರಕಾರದ ವೆಚ್ಚದ ಪ್ರಮಾಣವನ್ನು ಹೆಚ್ಚಿಸಬೇಕು. ಮತ್ತು ಸರಕಾರೀ ಸಂಸ್ಥೆಗಳ ಮೂಲಕ ಅಗತ್ಯವಿರುವ ಎಲ್ಲರಿಗೂ ಮುಕ್ತ ಶಿಕ್ಷಣ ಒದಗಿಸಬೇಕು.

ಐಕ್ಯ ಕಾರ್ಮಿಕ ಆಂದೋಲನ ಈಗಾಗಲೇ ಇಂತಹ ಬೇಡಿಕೆಗಳನ್ನು ಮುಂದಿಟ್ಟಿದೆ. ಆದರೆ ಜನಗಳನ್ನು ಮತ್ತು ದೇಶವನ್ನು ಸುಲಿಯುವ ನವ-ಉದಾರವಾದಿ ಅಜೆಂಡಾಕ್ಕೆ ಬದ್ಧವಾದ ಸರಕಾರಗಳು ಇದಕ್ಕೆ ಸಿದ್ಧವಿಲ್ಲ. ಏಕೆಂದರೆ ಈ ಕ್ರಮಗಳು ದೊಡ್ಡ ಬಂಡವಳಿಗರು ಮತ್ತು ಕಾರ್ಪೊರೇಟ್ ಹಿತಗಳಿಗೆ ಧಕ್ಕೆ ತರುತ್ತವೆ.

ಎಲ್ಲರಿಗೂ 18,000ರೂ. ಕನಿಷ್ಟ ಸಂಬಳ ಮತ್ತು ಬೆಲೆ ಸೂಚ್ಯಂಕದೊಡನೆ ಜೋಡಣೆ

ಪುಟ 9 ರಿಂದ

ಕನಿಷ್ಟ ಸಂಬಳದ 20%

5. ಸುಪ್ರಿಂ ಕೋರ್ಟ್ ನಿರ್ದೇಶನದ ಪ್ರಕಾರ ಶಿಕ್ಷಣ, ವೈದ್ಯಕೀಯ ವೆಚ್ಚ, ಮನರಂಜನೆ, ಮುದಿ ವಯಸ್ಸಿಗಾಗಿ ಮತ್ತು ಮಕ್ಕಳ ಮದುವೆಗಾಗಿ ಒಟ್ಟು ಕನಿಷ್ಟ ಸಂಬಳದ 25% ವನ್ನು ಸೇರಿಸಬೇಕು.

7ನೇ ವೇತನದ ಆಯೋಗದ ಶಿಫಾರಸನ್ನು ಕೇಂದ್ರ ಸರಕಾರದ ನೌಕರರು ಮತ್ತು ಕಾರ್ಮಿಕರ ಮಹಾಒಕ್ಕೂಟ ಕನಿಷ್ಟ ಸಂಬಳ 2015ರ ಬೆಲೆಗಳ ಆಧಾರದಲ್ಲಿ 26,000ರೂ. ಆಗಬೇಕು ಎಂದು ವಾದಿಸುತ್ತ ವಿರೋಧಿಸಿತ್ತು.

ಆದರೆ ಬಿಜೆಪಿ ಸರಕಾರ ವೇತನ ಆಯೋಗದ ಶಿಫಾರಸನ್ನು ಸ್ವೀಕರಿಸಿ ಕೇಂದ್ರ ಸರಕಾರೀ ನೌಕರರ ಕನಿಷ್ಟ ವೇತನ 18,000ರೂ. ಇರಬೇಕು ಎಂಬುದನ್ನು ಒಪ್ಪಿಕೊಂಡಿದೆ.



ಇದು ಎಲ್ಲ ಕಾರ್ಮಿಕರಿಗೂ ಅನ್ವಯವಾಗಬೇಕು, ಏಕೆಂದರೆ ಬೆಲೆಗಳು ಮತ್ತು ಜೀವನ ವೆಚ್ಚ ಎಲ್ಲರಿಗೂ ಒಂದೇ. ಮತ್ತು 2015ರಿಂದ ಎಲ್ಲ ಜೀವನಾವಶ್ಯಕ ವಸ್ತುಗಳ ಬೆಲೆಗಳು ಏರುತ್ತಲೇ ಇವೆ.

ಆದ್ದರಿಂದ 18,000ರೂ. ಕನಿಷ್ಟ ಸಂಬಳದ ಆಗ್ರಹ ಖಂಡಿತವಾಗಿಯೂ ಸಮರ್ಥನೀಯ.

ಆದರೆ ಬಿಜೆಪಿ ಸರಕಾರ ಮಾಡುತ್ತಿರುವುದೇನು?

ಕಾರ್ಮಿಕರ ನ್ಯಾಯಬದ್ಧ ಆಗ್ರಹವನ್ನು ಒಪ್ಪಿಕೊಳ್ಳುವ ಬದಲು ಈ ಸರಕಾರ ಲೋಕಸಭೆಯಲ್ಲಿ 'ವೇತನಗಳ ಸಂಹಿತೆ ಮಸೂದೆ'ಯನ್ನು ಮಂಡಿಸಿದೆ. ಇದು ಕನಿಷ್ಟ ವೇತನ ಕಾಯ್ದೆ, ವೇತನ ಪಾವತಿ ಕಾಯ್ದೆ , ಬೋನಸ್ ಕಾಯ್ದೆ ಮತ್ತು ಸಮಾನ ಪ್ರತಿಫಲ ಕಾಯ್ದೆಗಳನ್ನು ಒಟ್ಟು ಗೂಡಿಸಿರುವ ಸಂಹಿತೆ. ಈ ಮೂಲಕ ಈ ಸರಕಾರ ವೇತನ ನಿಗದಿಯನ್ನು ಕಾರ್ಮಿಕ ಕಾನೂನುಗಳ ವ್ಯಾಪ್ತಿಯಿಂದಲೇ ಹೊರ ಹಾಕುವ ಪ್ರಯತ್ನ ನಡೆಸಿದೆ.

ಈ ವೇತನ ಸಂಹಿತೆ ಕನಿಷ್ಟ ಸಂಬಳದ ನಿಗದಿಯನ್ನು ಕೇಂದ್ರ ಮತ್ತು ರಾಜ್ಯ ಸರಕಾರಗಳ ಮರ್ಜಿಗೆ ಒಳಪಡಿಸಿದೆ. ಕನಿಷ್ಟ ಸಂಬಳ ಸಲಹಾಮಂಡಳಿಯೇನೋ ಇರುತ್ತದೆ. ಆದರೆ ಅದರ ಶಿಫಾರಸಿಗೆ ಸರಕಾರ ಬದ್ಧವಾಗಬೇಕಿಲ್ಲ ಎನ್ನಲಾಗಿದೆ.

ಮೇಲೆ ಹೇಳಿದ ಐಎಲ್‌ಸಿ ಸೂತ್ರ ಮತ್ತು ಸುಪ್ರಿಂ ಕೋರ್ಟ್ ನಿರ್ದೇಶನವನ್ನು ಈ ಸಂಹಿತೆ ಸಂಪೂರ್ಣವಾಗಿ ಉಪೇಕ್ಷಿಸಿದೆ.

ಕನಿಷ್ಟ ಸಂಬಳಗಳ ಜಾರಿಯ ಅಂಶಗಳನ್ನು ಬಹಳಷ್ಟು ದುರ್ಬಲಗೊಳಿಸಲಾಗಿದೆ. ಇದರಿಂದಾಗಿ ಇದಕ್ಕೆ ಸಂಬಂಧಿಸಿದ ಬೇರೆಲ್ಲ ಅಂಶಗಳೂ ಅರ್ಥಹೀನವಾಗಿ ಬಿಟ್ಟಿವೆ. ಮಾಲಕರಿಗೆ ಈ ನಾಲ್ಕೂ ಕಾಯ್ದೆಗಳನ್ನು ಮನಬಂದಂತೆ ಉಲ್ಲಂಘಿಸಲು ಅಧಿಕಾರ ದೊರೆತಂತಾಗುತ್ತದೆ.

ನಾಚಿಕೇಗೇಡಿನ ಸಂಗತಿ

ಕನಿಷ್ಟ ಸಂಬಳ ಕುರಿತ ಐಎಲ್‌ಸಿಯ ಸರ್ವಾನುಮತದ ಶಿಫಾರಸನ್ನು ವೇತನ ಸಂಹಿತೆಯ ಮಸೂದೆಯಲ್ಲಿ ಏಕೆ ಸೇರಿಸಿಲ್ಲ ಎಂಬ ನಿರ್ದಿಷ್ಟ ಪ್ರಶ್ನೆ ಎತ್ತಿದಾಗ ಮೋದಿ ನೇತೃತ್ವದ ಸರಕಾರದ 'ಕಾರ್ಮಿಕ ಮಂತ್ರಾಲಯದ ಉತ್ತರ ಅತ್ಯಂತ ನಾಚಿಕೇಗೇಡಿನದಾಗಿತ್ತು. "ವಿವಿಧ ಭಾಗಗಳ ಗತಿಶೀಲ ಅಗತ್ಯಗಳನ್ನು ಕುರಿತಂತೆ ಸ್ಪಂದನಶೀಲವಾಗಿರಲು, ಹೊಂದಿಕೊಳ್ಳುವಂತಾಗಲು ಮತ್ತು ಅನುಕೂಲಕರವಾಗಿರಲು" ಹೀಗೆ ಮಾಡಲಾಯಿತಂತೆ! ಈ ಸರಕಾರ ಯಾರ ಹಿತಗಳನ್ನು ಈಡೇರಿಸುವ ಆಶಯ ಹೊಂದಿದೆ, ಮಾಲಕರದ್ದೋ. ಅಥವ ಕಾರ್ಮಿಕರದ್ದೋ ಎನ್ನುವುದಕ್ಕೆ ಇದಕಿಂತ ಹೆಚ್ಚಿನ ಪುರಾವೆ ಬೇಕೇ?

ಕಾರ್ಮಿಕರ ಮತ್ತು ಶ್ರಮಜೀವಿಗಳ ಶೋಷಣೆಯನ್ನು ಹೆಚ್ಚಿಸಿ ಸಂಪತ್ತು ಪೇರಿಸಿಕೊಳ್ಳಲು ದೇಶಿ-ವಿದೇಶಿ ಕಾರ್ಪೊರೇಟ್‌ಗಳಿಗೆ ನೆರವಾಗುವಂತಹ ಧೋರಣೆಗಳನ್ನು ರೂಪಿಸುವುದು ನವ-ಉದಾರವಾದಿ ಅಜೆಂಡಾದ ಒಂದು ಪ್ರಮುಖ ಭಾಗ. ಕಳೆದ 25 ವರ್ಷಗಳಿಂದಲೂ ಎಲ್ಲ ಸರಕಾರಗಳೂ ಇದನ್ನೇ ಮಾಡುತ್ತ ಬಂದಿವೆ. ಮೋದಿ ನೇತೃತ್ವದ ಸರಕಾರವಂತೂ ಈ ಅನಾಹುತಕಾರಿ ಧೋರಣೆಯನ್ನು ತ್ವರಿತಗೊಳಿಸಿದೆ ಮತ್ತು 'ಪರಿಪೂರ್ಣ'ಗೊಳಿಸಿದೆ.

ಎಲ್ಲ ಕಾರ್ಮಿಕರಿಗೂ, ಅವರು ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರಲಿ, ಕಚೇರಿಗಳು, ಕೃಷಿ ಗದ್ದೆಗಳು ಅಥವ ಅರಣ್ಯಗಳಲ್ಲಿ ಎಲ್ಲಿಯೇ ಕೆಲಸ ಮಾಡುತ್ತಿದ್ದರೂ, ಕನಿಷ್ಟ ಸಂಬಳಗಳು ಸಿಗಲೇ ಬೇಕು ಎಂಬುದು ಮಜ್ದೂರ್-ಕಿಸಾನ್ ಸಂಘರ್ಷ ರ್ಯಾಲಿಯ ಆಗ್ರಹ. ದೊಡ್ಡ ಕಾರ್ಪೊರೇಟ್‌ಗಳ ಹೊಟ್ಟೆ ತುಂಬಿಸಲು ಶ್ರಮಜೀವಿಗಳ ಹೊಟ್ಟೆ ಬಡಿಯುವ ಈ ಧೋರಣೆಗಳನ್ನು ಬದಲಿಸಬೇಕೆನ್ನುವುದು ಈ ಸಂಘರ್ಷ ರ್ಯಾಲಿಯ ಆಗ್ರಹ.

ಪುಟ 9 ರಿಂದ

ಎಲ್ಲಾ ದುಡಿಯುವ ಜನಗಳಿಗೂ ಪರಿಣಾಮಕಾರಿ ಸಾಮಾಜಿಕ ಭದ್ರತೆ

ಮನೆಗೆಲಸದವರು ಸೇರಿದಂತೆ ಎಲ್ಲ ಕಾರ್ಮಿಕರನ್ನು ತಲುಪಲಾಗುತ್ತಿದೆ ಎಂದು ಬಿಜೆಪಿ ಅಬ್ಬರದ ಪ್ರಚಾರ ನಡೆಸುತ್ತಿದೆ..

ಎಲ್ಲರನ್ನೂ ಏನು ತಲುಪುತ್ತದೆ?

ಉತ್ತರವಿಲ್ಲ. ನಿರ್ದಿಷ್ಟವಾದ ಸಾಮಾಜಿಕ ಭದ್ರತಾ ಯೋಜನೆಯನ್ನು ಪ್ರಕಟಿಸಿರುವುದಿಲ್ಲ. ಈ ಸೌಲಭ್ಯ ಪಡೆಯಲು ಯಾರು ಅರ್ಹರು? ನೌಕರರು ಸೌಲಭ್ಯ ಹೊಂದಲು ರಿಜಿಸ್ಟರ್ ಆಗಿರಬೇಕು. ಅದರಲ್ಲಿ ಇರಬೇಕಾದ ನೌಕರರ ಗರಿಷ್ಟ ಪ್ರಮಾಣ ಸರ್ಕಾರ ನಿರ್ಧರಿಸುತ್ತದೆ. ಬಿಜೆಪಿ ಸರ್ಕಾರ ಗರಿಷ್ಟ ಪ್ರಮಾಣವನ್ನು ಫ್ಯಾಕ್ಟರಿ ಆಕ್ಟ್ ಪ್ರಕಾರ 40 ಕ್ಕೆ ಏರಿಸಿದೆ. ಇದರರ್ಥ 72% ಭಾಗ ಫ್ಯಾಕ್ಟರಿ ಆಕ್ಟ್ ಅಡಿಯಲ್ಲಿ ಕೆಲಸ ಮಾಡುತ್ತಿರುವರು ಇದರಿಂದ ವಂಚಿತರಾಗುತ್ತಾರೆ.. 40ಕ್ಕಿಂತ ಕಡಿಮೆ ಕಾರ್ಮಿಕರು ಕೆಲಸ ಮಾಡುತ್ತಿರುವ ಕಾರ್ಖಾನೆಗಳಿಗೆ ಸಾಮಾಜಿಕ ಭದ್ರತಾ ಸಂಹಿತೆ ಅಡಿಯಲ್ಲಿ ಅರ್ಹತೆ ಇದೆಯೆ? ಮತ್ತು ಇಂತಹ ಕಾರ್ಖಾನೆಗಳ ಕಾರ್ಮಿಕರು ಯಾವ ಸೌಲಭ್ಯಗಳನ್ನು ಪಡೆಯಲು ಅರ್ಹರು – ಇದಕ್ಕೆ ಉತ್ತರವಿಲ್ಲ.

ಸರ್ಕಾರ ಕಾರ್ಮಿಕರ ಸಾಮಾಜಿಕ ಭದ್ರತೆಗಾಗಿ ಒಂದೂ ಪೈಸೆಯನ್ನು ನೀಡದಿರುವುದು ಮಾತ್ರ ನಿಚ್ಚಳವಾಗಿದೆ. ಅಸಂಘಟಿತ ಕಾರ್ಮಿಕರು ಸೌಲಭ್ಯ ಪಡೆಯಲು ಶೇ. 12.5 ವಂತಿಗೆಯನ್ನು ನೀಡಬೇಕು. ಇಲ್ಲಿ ಮಾಲೀಕ ಯಾರೆಂದು ಗುರುತಿಸಲಾಗದಿದ್ದರೆ ನೌಕರರನ್ನು ಸ್ವಯಂ ಉದ್ಯೋಗಿಗಳೆಂದು ಪರಿಗಣಿಸಿ 20% ವಂತಿಗೆ ನೀಡಬೇಕಿರುತ್ತದೆ.

ಸಾಮಾಜಿಕ ಭದ್ರತಾ ಸಂಹಿತೆ
ಸಾಮಾಜಿಕ ರಕ್ಷಣೆಯಲ್ಲ –ಘೋರ ಮೋಸ

ಈಗ 15 ಸಾಮಾಜಿಕ ಭದ್ರತಾ ಕಾನೂನುಗಳು ಜಾರಿಯಲ್ಲಿದೆ. ನೌಕರರ ವಿಮಾ ಯೋಜನೆ, ಭವಿಷ್ಯನಿಧಿ, ಪರಿಹಾರ ಕಾಯ್ದೆ, ಹೆರಿಗೆ ಸೌಲಭ್ಯ ಕಾಯ್ದೆ, ಮತ್ತು ಗ್ರಾಚುಯಿಟಿ ಕಾಯ್ದೆ ಹಾಗೂ ಅಸಂಘಟಿತ ನೌಕರರ ಸಾಮಾಜಿಕ ಭದ್ರತೆ, ಕಟ್ಟಡ ಕಾರ್ಮಿಕರು, ಬೀಡಿ ಕಾರ್ಮಿಕರು, ಕಬ್ಬಿಣ, ಮ್ಯಾಂಗನೀಸ್ ಗಣಿ ಕಾರ್ಮಿಕರು, ಸಿನಿ ನೌಕರರು ಮುಂತಾದ ವಿವಿಧ ಕ್ಷೇತ್ರಗಳ ಕಾರ್ಮಿಕರ ಕಲ್ಯಾಣ ಕಾಯ್ದೆಗಳು. ಇವನ್ನೆಲ್ಲ ಸಾಮಾಜಿಕ ಭದ್ರತಾ ಸಂಹಿತೆಯಲ್ಲಿ ವಿಲೀನಗೊಳಿಸಲಾಗುತ್ತದೆಯಂತೆ.

ಈಗ ಜಾರಿಯಲ್ಲಿರುವ ಭವಿಷ್ಯನಿಧಿ, ವಿಮಾನಿಧಿ, ಕಟ್ಟಡ ಕಾರ್ಮಿಕರ ನಿಧಿಗಳಿಂದ ರೂ. 12 ಲಕ್ಷ ಕೋಟಿ ಕೂಡಿದ್ದು, ಜತೆಗೆ ಅಸಂಘಟಿತ ಕಾರ್ಮಿಕರಿಂದ ಮತ್ತು ಸ್ವಉದ್ಯೋಗಿಗಳಿಂದ ಸಂಗ್ರಹಿಸಿದ ದೊಡ್ಡ ಮೊತ್ತವಿದೆ. ಇವೆಲ್ಲ 'ರಾಷ್ಟ್ರೀಯ ಸಾಮಾಜಿಕ ಭದ್ರತಾ ಮಂಡಳಿ'ಯ ಸುಪರ್ದಿಗೆ ಬರುತ್ತವೆ. ಪ್ರಧಾನಮಂತ್ರಿಯವರು ಇದರ ಅಧ್ಯಕ್ಷರಾಗಿರುತ್ತಾರೆ. ಇದಕ್ಕೆ ಸಲಹಾ ಮಂಡಳಿಯು ಇರುತ್ತದೆ. ಆದರೆ ಇದು ತ್ರಿಪಕ್ಷೀಯ ವ್ಯವಸ್ಥೆ ಆಗಿರುವುದಿಲ್ಲ. ಕಾರ್ಮಿಕ ಸಂಘಟನೆಗಳ ಪಾತ್ರವನ್ನು ಕಡಿಮೆ ಮಾಡುವುದೇ ಇದರ ಉದ್ದೇಶ. ಈ ಅಪಾರ ಸಂಗ್ರಹವನ್ನು ಶೇರ್ ಮಾರುಕಟ್ಟೆಯಲ್ಲಿ ತೊಡಗಿಸುವುದು ತನ್ಮೂಲಕ ಹಣಕಾಸು ಬಂಡವಾಳಿಗರನ್ನು ಮೆಚ್ಚಿಸುವುದು ಈ ಸರಕಾರದ ಗುರಿ.

ಹೀಗೆ ಸಂಗ್ರಹವಾಗಿರುವ ಮೊತ್ತವನ್ನು ಕೈವಶ ಮಾಡಿಕೊಂಡನಂತರ ಈ ಸಂಹಿತೆ ಕಾರ್ಮಿಕರಿಗೆ ಕೊಡುವ ಸಾಮಾಜಿಕ ಭದ್ರತೆಯೇನು ಎಂದು ನಿರ್ದಿಷ್ಟಪಡಿಸಿಲ್ಲ. ಸಂಸತ್ತು ಇದನ್ನು ಅನುಮೋದಿಸಿದ ನಂತರ ಅದನ್ನು ಅಧಿಕಾರಿಶಾಹಿಯ ತೀರ್ಮಾನಕ್ಕೆ ಬಿಡಬಹುದು.

ಇದರ ಒಟ್ಟಾರೆ ಫಲಿತಾಂಶವೆಂದರೆ ಈಗಾಗಲೇ ಖಾತರಿಯಾಗಿ ಸಿಗುತ್ತಿರುವ ಸೌಲಭ್ಯಗಳಿಂದ ಭವಿಷ್ಯನಿಧಿ, ವಿಮಾನಿಧಿ ಮುಂತಾದವು ಕೂಡ ನಿರ್ನಾಮವಾಗಬಲ್ಲವು. ಸರ್ಕಾರ ಉದ್ದೇಶಿಸಲಿರುವ ಸಾಮಾಜಿಕ ಭದ್ರತಾ ಸಂಹಿತೆ ಈ ಸೌಲಭ್ಯಗಳ ಮುಂದುವರಿಕೆಯನ್ನು ಖಾತರಿ ಪಡಿಸುತ್ತಿಲ್ಲ. ಇದು ಮೋಸ ಮತ್ತು ವಂಚನೆಯ ಒಂದು ನವೀನ ಕಸರತ್ತೇ ಆಗಿದೆ.

ಯುಪಿಎ ಸರ್ಕಾರ 2009 ರಲ್ಲಿ ಅಸಂಘಟಿತ ಕಾರ್ಮಿಕರಿಗಾಗಿ ಸಾಮಾಜಿಕ ಭದ್ರತಾ ಕಾನೂನು ಜಾರಿಗೊಳಿಸಿತು. ಆದರೆ ಯುಪಿಎ ಸರ್ಕಾರವಾಗಲಿ ಅಥವಾ ಮೋದಿ ಸರ್ಕಾರವಾಗಲಿ ಹೊಸದಾಗಿ ಯಾವ ಹೊಸ ಸಾಮಾಜಿಕ ಸೌಲಭ್ಯವನ್ನು ರೂಪಿಸಿರುವುದಿಲ್ಲ. ಈ ಕಾನೂನನ್ನು ಜಾರಿಗೊಳಿಸಲು ಬೇಕಾದ ಹಣವನ್ನು ಯೋಜಿಸಿಲ್ಲ. ಈಗಾಗಲೇ ಚಾಲ್ತಿಯಲ್ಲಿರುವ ಸಾಮಾಜಿಕ ಭದ್ರತಾ ಸ್ಕೀಂಗಳು ಬಹುತೇಕ ಬಡತನ ರೇಖೆಗಿಂತ ಕೆಳಗಿರುವವರಿಗೆ ಸಿಗುತ್ತಿದ್ದು ಅವುಗಳನ್ನೆ ಅಸಂಘಟಿತ ಕಾರ್ಮಿಕರಿಗೆ ಅನ್ವಯಿಸಲಾಗಿತ್ತು. ಈಗಿನ ಸರ್ಕಾರ ಅದರಡಿಯಲ್ಲಿ ರಚಿಸಿರುವ ರಾಷ್ಟ್ರೀಯ ಸಾಮಾಜಿಕ ಭದ್ರತಾ ಮಂಡಳಿಯನ್ನು ಕಾರ್ಯ ನಿರ್ವಹಿಸದಂತೆ ಮಾಡಿದೆ. ಕೆಲವು ಹಳೇ ಸ್ಕೀಂಗಳನ್ನು ಮುಂದುವರೆಸದೆ ಹೊಸ ಹೆಸರಿನಿಂದ ಜಾರಿಗೊಳಿಸಲಾಗುತ್ತಿದೆ.

ಮೋದಿ ಸರ್ಕಾರ ಕಾರ್ಪೋರೇಟ್ ಪ್ರಭುಗಳನ್ನು ತೃಪ್ತಿಪಡಿಸಲಿಕ್ಕಾಗಿ ಜನರನ್ನು ಮೋಸಗೊಳಿಸಲು ಯಾವ ಮಟ್ಟಕ್ಕೆ ಇಳಿಯಲೂ ಹಿಂಜರಿಯುವುದಿಲ್ಲ. ಸಾಮಾಜಿಕ ಭದ್ರತಾ ಸಂಹಿತೆ ಆ ನಿಟ್ಟಿನಲ್ಲಿ ಮೋಸದ ಕಸರತ್ತಿನ ಒಂದು ಉದಾಹರಣೆ.

ನಿಜವಾಗಿ ಬೇಕಿರುವುದೇನು?

ಸರ್ಕಾರಕ್ಕೆ ಎಲ್ಲರಿಗೂ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಒದಗಿಸುವ ನೈಜ ಉದ್ದೇಶವಿದ್ದರೆ ಮಾಡಬೇಕಿರುವ ಕ್ರಮಗಳು.

- ಪ್ರಸಕ್ತ ಜಾರಿಯಲ್ಲಿರುವ ಕಾನೂನುಗಳನ್ನು ಗಟ್ಟಿಗೊಳಿಸುವುದು ಮತ್ತು ಅವುಗಳ ಕಟ್ಟುನಿಟ್ಟಾದ ಜಾರಿ.
- ಈಗ 50% ಅರ್ಹರನ್ನೂ ತಲುಪದಿರುವ ಜಾರಿಯಲ್ಲಿರುವ ಭವಿಷ್ಯನಿಧಿ, ವಿಮಾಯೋಜನೆ ಮತ್ತು ಉಳಿದ 13 ಯೋಜನೆಗಳು ಎಲ್ಲರಿಗೂ ತಲುಪುವಂತೆ ವಿಸ್ತರಿಸುವುದು.
- ಕೃಷಿ ಕೂಲಿಕಾರರು, ರೈತರೂ ಸೇರಿದಂತೆ ಇತರ ಎಲ್ಲ ದುಡಿಯುವ ಜನಸಮೂಹಗಳಿಗೆ ಒಂದು ಸರ್ಕಾರ ಹಣ ನೀಡುವ ಒಂದು ಸಮಗ್ರ ಸಾಮಾಜಿಕ ಬದ್ರತಾಯೋಜನೆಯನ್ನು ರೂಪಿಸುವುದು. ಇದು ಹೆರಿಗೆ ಸೌಲಭ್ಯ, ಆರೋಗ್ಯ ರಕ್ಷಣೆ, ಅಫಘಾತ ರಕ್ಷಣೆ, ಪೆನ್ಷನ್, ಮಕ್ಕಳ ವಿದ್ಯಾಭ್ಯಾಸ ಇವೆಲ್ಲವನ್ನೂ ಒಳಗೊಂಡಿರಬೇಕು. ಇದನ್ನು ಸೇರಲು ಅನುಕೂಲವಾಗುವಂತೆ ಒಮ್ಮ ಸಾಂಕೇತಿಕ ವಂತಿಗೆಯನ್ನು ಮಾತ್ರ ವಸೂಲಿ ಮಾಡಬಹುದು.

ಇದು ಸಾಧ್ಯವಿದೆ, ನಮ್ಮಲ್ಲಿ ಇದಕ್ಕೆ ಸಂಪನ್ಮೂಲ ಲಭ್ಯವಿದೆ. ಈಗ ಬೇಕಿರುವುದು ಕಾರ್ಪೋರೇಟ್-ವ್ಯಾಪಾರೀ ಕೂಟದ ಬದಲು ಜನರ ಹಿತಸಾಧನೆಗ ಆಗಿ ಧೋರಣೆಗಳನ್ನು ರೂಪಿಸುವ ಇಚ್ಛಾಶಕ್ತಿ ಮಾತ್ರ.

ಸೆಪ್ಟೆಂಬರ್ 5 ರ ರೈತ ಕಾರ್ಮಿಕ ಸಂಘರ್ಷ ರ್ಯಾಲಿ ನಡೆಯಲಿರುವುದು ಎಲ್ಲ ದುಡಿಯುವ ಜನಗಳಿಗೆ ಇಂತಹ ಪರಿಣಾಮಕಾರಿ ಸಾಮಾಜಿಕ ಭದ್ರತೆ ಬೇಕೆಂದು ಆಗ್ರಹಿಸಲು ಮತ್ತು ಈಗಿರುವ ಮತ್ತು ಕಾರ್ಯಗತವಾಗುತ್ತಿರುವ ಸ್ಕೀಂಗಳನ್ನು, ಶಾಸನಗಳನ್ನು ಕಳಚಿ ಹಾಕುವ ಉದ್ದೇಶದ ಧೋರಣೆಗಳನ್ನು ಸಹಿಸುವುದಿಲ್ಲ ಎಂದು ಬಿಜೆಪಿ ಸರಕಾರಕ್ಕೆ ಎಚ್ಚರಿಕೆ ನೀಡುವುದು.

ಮುಖ್ಯಮಂತ್ರಿಗಳ ಜತೆ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ಭೇಟಿ

ಆದಿವಾಸಿ ಸಮುದಾಯಗಳ ಪ್ರಶ್ನೆಗಳ ಇತ್ಯರ್ಥಕ್ಕೆ ಮನವಿ

ಎಸ್.ವೈ. ಗುರುಶಾಂತ್



ಕರ್ನಾಟಕದ ಆದಿವಾಸಿ ಸಮುದಾಯಗಳ ಸ್ಥಿತಿ–ಗತಿ ಮತ್ತು ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳನ್ನು ಹೊಸ ಸರಕಾರಕ್ಕೆ ಮನವರಿಕೆ ಮಾಡಿ ಅವುಗಳನ್ನು ಬಗೆ ಹರಿಸುವಂತೆ ಒತ್ತಾಯಿಸಲು ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ನಿಯೋಗವು ಇದೇ 2018 ರ ಆಗಸ್ಟ್ 10 ರಂದು ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಯವರನ್ನು ಭೇಟಿ ಮಾಡಿ ಚರ್ಚಿಸಿತು. ಈ ಸಂದರ್ಭದಲ್ಲಿ ಆದಿವಾಸಿ ಅಧಿಕಾರ್ ರಾಷ್ಟ್ರೀಯ ಮಂಚ್ ನ ರಾಷ್ಟ್ರೀಯ ಸಂಚಾಲಕರೂ, ಸಂಸತ್ತಿನಲ್ಲಿ ಸಿಪಿಐ(ಎಂ)ನ ಮುಖ್ಯ ಸಚೇತಕರೂ ಆಗಿರುವ ಜಿತೇಂದ್ರ ಚೌಧುರಿಯವರು ಉಪಸ್ಥಿತರಿದ್ದು ನೇತೃತ್ವ ವಹಿಸಿದ್ದರು.

ಕರ್ನಾಟಕದ ಆದಿವಾಸಿಗಳ ಬಹು ಮುಖ್ಯ ಪ್ರಶ್ನೆಯಾದ ಭೂಮಿಯ ಹಕ್ಕು ಹಾಗೂ ಸಮುದಾಯ ಹಕ್ಕುಗಳ ಬಗ್ಗೆ ನಿಯೋಗ ಚರ್ಚಿಸಿತು. ರಾಜ್ಯವು ಅರಣ್ಯ ಹಕ್ಕುಗಳ ಕಾಯ್ದೆ 2006 ಜಾರಿಯಲ್ಲಿ ತೀರಾ ಹಿಂದುಳಿದಿರುವುದನ್ನು ವಿವರಿಸಲಾಯಿತು. ಆದಿವಾಸಿಗಳ ಬದುಕಿಗೆ ಬಲ ತುಂಬಿ ಪರಿವರ್ತನೆ ತರಬಹುದಾದ ಮಹತ್ವಾಕಾಂಕ್ಷೆಯಲ್ಲಿ ಆರಣ್ಯ ಹಕ್ಕುಗಳ ಕಾಯ್ದೆ 2006 ರನ್ನು ಅಂಗೀಕರಿಸಲಾಯಿತು. ಆದರೆ ಅದರ ಅನುಷ್ಠಾನವನ್ನು ನೋಡಿದರೆ ಈ 12 ವರುಷಗಳಲ್ಲಿ ಮುನ್ನಡೆ ತೀರಾ ಅತೃಪ್ತಿಕರ ಎಂಬುದು ಗೊತ್ತಾಗುತ್ತದೆ. ಇದು ನಮ್ಮ ಆದಿವಾಸಿ ಸಮುದಾಯಗಳನ್ನು ಒಂದು ಹೆಜ್ಜೆ ಮುನ್ನಡೆಸಲು ಆಗಲಿಲ್ಲ. ಉದಾಹರಣೆಗೆ ಕರ್ನಾಟಕದಲ್ಲಿನ ಪ್ರಗತಿ ನೋಡಿದರೆ ಕ್ಲೇಮುಗಳು ವ್ಯಕ್ತಿಗತವಾಗಿ 2,98,795 ಹಾಗೂ ಸಮುದಾಯ ಹಕ್ಕುಗಳಿಗಾಗಿ 5741 ಒಟ್ಟು 3,04,536 ಹಾಕಲಾಗಿದೆ. ಆದರೆ ಪರಿಗಣಿಸಲ್ಪಟ್ಟವು ಕೇವಲ 13,049. ಇವುಗಳಲ್ಲಿ ವೈಯುಕ್ತಿಕ 12,421, ಸಮುದಾಯ–628 ಇವೆ. ವಿತರಿಸಲ್ಪಟ್ಟ ಭೂಮಿಯೂ ಸಹ 16,436 ಎಕರೆ ಮತ್ತು ಸಮುದಾಯ ಹಕ್ಕಿಗೆ ಮೀಸಲಿಡಲಾಗಿರುವುದು 26,465 ಎಕರೆ. ಕರ್ನಾಟಕದಂತಹ ರಾಜ್ಯದಲ್ಲಿ ಇದು ನಿಜಕ್ಕೂ ಗಂಭಿರ ವಿಫಲತೆ ಎಂಬುದನ್ನು ವಿವರಿಸಲಾಯಿತು.

ಅಲ್ಲದೇ ವಿವಿಧ ಭಾಗಗಳಲ್ಲಿ ಬುಡಕಟ್ಟು ಸಮುದಾಯಗಳನ್ನು ಅಭಿವೃದ್ಧಿ ಅಥವಾ ಪರಿಸರ ರಕ್ಷಣೆಯ ಹೆಸರಿನಲ್ಲಿ ಅವರ ನೆಲೆಗಳಿಂದ ಎತ್ತಂಗಡಿ ಮಾಡಿ ಪುನರ್ವಸತಿಯನ್ನೂ ಕಲ್ಪಿಸದೇ ಅತಂತ್ರ ಸ್ಥಿತಿಗೆ ದೂಡಿದ ನಾಗರಹೊಳೆ ರಾಷ್ಟ್ರೀಯ ಉದ್ಯಾನವನ ಪ್ರದೇಶಗಳಾದ ನಾಗಾಪೂರ ಹಾಡಿಗಳು, ಬ್ರಹ್ಮಗಿರಿಪುರ ಅರಣ್ಯ ಪ್ರದೇಶ, ಕುದುರೆಮುಖ ರಾ.ಉದ್ಯಾನವನ, ಪಶ್ಚಿಮ ಘಟ್ಟಗಳ ಉದ್ದಕ್ಕೂ ಕೊಡಗು, ಶಿವಮೊಗ್ಗ, ಉತ್ತರ ಕನ್ನಡ, ದಕ್ಷಿಣ ಕನ್ನಡ, ರಾಮನಗರ ಮುಂತಾದ ನಿರ್ದಿಷ್ಠ ಪ್ರಕರಣಗಳನ್ನು ಅವರೆದುರು ತೆರೆದಿಡಲಾಯಿತು.

ಆದಿವಾಸಿಗಳು ಎದುರಿಸುತ್ತಿರುವ ಮತ್ತೊಂದು ಬಹು ಮುಖ್ಯ ಮನೆ ಪ್ರಶ್ನೆ. ಸ್ವಂತ ನಿವೇಶನ ಅಥವಾ ಮನೆ ಇಲ್ಲವೆಂಬ ಕಾರಣಕ್ಕೇ ಜೀತದಾಳುಗಳಾಗಿ ಬದುಕುತ್ತಿರುವ ಕ್ರೂರ ಸನ್ನಿವೇಶಗಳಿವೆ. ಹೀಗಾಗಿ ಮನೆ ಅಗತ್ಯವಿದೆ ಎಂದು ತಿಳಿಸಲಾಯಿತು. ಆಗ ಮಧ್ಯ ಪ್ರವೇಶಿಸಿದ ಮುಖ್ಯಮಂತ್ರಿಗಳು 'ಮನೆ ನಿರ್ಮಾಣಕ್ಕೆ ಅಗತ್ಯವಾಗಿ ನಿವೇಶನದ ಪ್ರಶ್ನೆಯಿದೆ. ಬಳಿಕ ಮನೆ ನಿರ್ಮಾಣದ್ದು, ಇದನ್ನು ಬಗೆಹರಿಸಬೇಕಿದೆ' ಎಂದರು.

ಸಾಲದ ಪ್ರಶ್ನೆಗಳು, ಅಪೌಷ್ಠಿಕತೆ ಹಾಗೂ ವಿಶೇಷ ಆಹಾರ ನೀಡಿಕೆಯ ಪ್ಯಾಕೇಜ್ ವಿತರಣೆಯಲ್ಲಿನ ಸಮಸ್ಯೆಗಳು, ರೇಷನ್–ಪಡಿತರ ಹಂಚಿಕೆ, ಆಸ್ಪತ್ರೆಗಳ ಸಮಸ್ಯೆಗಳು, ವಿವಿಧ ಜಿಲ್ಲೆಗಳಲ್ಲಿ, ವಿವಿಧ ಸಮುದಾಯಗಳ ಜಾತಿ ಪ್ರಮಾಣ ಪತ್ರ ನೀಡಿಕೆಯಲ್ಲಿರುವ ಸಮಸ್ಯೆಗಳ ಬಗ್ಗೆ ವಿವರಿಸಲಾಯಿತು.

ಈ ಆದಿವಾಸಿ ಸಮುದಾಯಗಳು ಎದುರಿಸುತ್ತಿರುವ ಶಿಕ್ಷಣದ ಪ್ರಶ್ನೆ ಹಾಗೂ ಶಿಕ್ಷಣ, ಉದ್ಯೋಗಗಳಿಂದ ವಂಚಿತರಾಗುತ್ತಿರುವುದನ್ನು ವಿವರಿಸಲಾಯಿತಲ್ಲದೇ ಆದಿವಾಸಿಗಳ ಶೈಕ್ಷಣಿಕ ಹಾಗೂ ಉದ್ಯೋಗದ ಸ್ಥಿತಿ ಗತಿಗಳ ಬಗ್ಗೆ ವಿವರವಾಗಿ ಅಧ್ಯಯನ ಮಾಡಲು ಒಂದು ಅಧ್ಯಯನ ಸಮಿತಿಯನ್ನು ರಚಿಸುವುದು ಅಗತ್ಯವೆಂದು ಪ್ರತಿಪಾದಿಸಲಾಯಿತು.

ರಾಜ್ಯದಲ್ಲಿ ಎಸ್.ಟಿ ಪಟ್ಟಿಗೆ ಕುಣಬಿ, ಹಾಲಕ್ಕಿ, ಗೌಳಿ, ಕುಂಬ್ರಿ ಮರಾಠಿ ಸಮುದಾಯಗಳನ್ನು ಸೇರಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಹಾಗೂ ಈಗಾಗಲೇ ಕೇಂದ್ರಕ್ಕೆ ಶಿಫಾರಸು ಮಾಡಲಾಗಿರುವ ಕುಣಬಿ ಸಮುದಾಯದ ಸೇರ್ಪಡೆಗೆ ಅಂಗೀಕಾರ ನೀಡಲು ಒತ್ತಾಯಿಸಲು ಆಗ್ರಹಿಸಲಾಯಿತು.

ಬೆಳ್ತಂಗಡಿಯ ನೆರಿಯ ಪ್ರದೇಶದ ಸುಂದರ ಮಲೆಕುಡಿಯ ಹಾಗೂ ಅವರ ಕುಟುಂಬದ ಮೇಲೆ ನಡೆದ ದೌರ್ಜನ್ಯ ಪ್ರಕರಣದಲ್ಲಿ ನ್ಯಾಯ ಸಿಗದಿರುವುದು, ವಿಠ್ಠಲ ಮಲೆಕುಡಿಯ ಮತ್ತು ಅವರ ತಂದೆಯವರ ಮೇಲೆ ಹೂಡಲಾಗಿರುವ ಸುಳ್ಳು ಮೊಕದ್ದಮೆಗಳು, ಮೇಲ್ಜಾತಿ ಭೂಮಾಲಿಕರಿಂದ ದೌರ್ಜನ್ಯಕ್ಕೀಡಾದ ನಿಟ್ಟೂರು ಪ್ರದೇಶದ ಹಸಲರು ಸಮುದಾಯದ ಮರಿಯ ಅವರ ಮೇಲೆಯೇ ದೌರ್ಜನ್ಯ ಮೊಕದ್ದಮೆ ಹೂಡಿಕೆ ಮುಂತಾದ ಪ್ರಕರಣಗಳನ್ನು ಗಮನಕ್ಕೆ ತರಲಾಯಿತು.

ಈ ಸಂಧರ್ಭದಲ್ಲಿ ಕಸ್ತೂರಿ ರಂಗನ್ ವರದಿ, ಅದರ ಜಾರಿಯ ಸಮಸ್ಯೆಗಳು, ಪರಿಸರಕ್ಕೆ ಸಂಬಂಧಿಸಿದ ಹಲವು ಯೋಜನೆಗಳು, ವನ್ಯ ಜೀವಿಗಳ ಕಾರಿಡಾರ್ ಪರಿಣಾಮಗಳು ಮುಂತಾಗಿಯೂ ವಿವರಿಸಲಾಯಿತು.

ರಾಜ್ಯ ಮಟ್ಟದ ಒಂದು ಮನವಿಯಲ್ಲದೇ ವಿವಿಧ ಜಿಲ್ಲೆಗಳಲ್ಲಿರುವ ವಿಶೇಷ ಪ್ರಶ್ನೆಗಳ ಮನವಿ ಪತ್ರಗಳನ್ನು ಈ ಸಂದರ್ಭದಲ್ಲಿ ಸಲ್ಲಿಸಲಾಯಿತು. ಈ ಎಲ್ಲಾ ಪ್ರಶ್ನೆಗಳನ್ನು ಪ್ರಮುಖ ಆದ್ಯತೆಯ ಮೇಲೆ ಚರ್ಚಿಸಲು ಸಿ.ಎಂ ರವರ ಅಧ್ಯಕ್ಷತೆ ಹಾಗೂ ಸಂಬಂಧಿಸಿದ ಸಚಿವರ ಸಮ್ಮುಖದಲ್ಲಿ ಉನ್ನತ ಅಧಿಕಾರಿಗಳು ಇರುವ ಸಭೆಯನ್ನು ಕರೆಯಬೇಕೆಂದು ಮನವಿ ಮಾಡಲಾಯಿತು.

ಇದಕ್ಕೆಲ್ಲಾ ಸಕ್ರಿಯ ಹಾಗೂ ಸಕಾರಾತ್ಮಕವಾಗಿ ಸ್ಪಂದಿಸಿದ ಮುಖ್ಯಮಂತ್ರಿಗಳು ಸಚಿವರುಳ್ಳ ಉನ್ನತ ಮಟ್ಟದ ಸಭೆ ಶೀಘ್ರದಲ್ಲೇ ಕರೆಯುವುದಾಗಿ ಭರವಸೆ ನೀಡಿದರಲ್ಲದೇ ಜಿತೇಂದ್ರ ಚೌಧುರಿಯವರೂ ಸಹ ಈ ಸಭೆಗೆ ಆಗಮಿಸಬೇಕು, ತ್ರಿಪುರಾ ಮತ್ತು ದೇಶದ ವಿವಿಧ ಭಾಗಗಳ ಅನುಭವಗಳು ಬೇಕಿದೆ ಎಂದು ಆಹ್ವಾನಿಸಿದರು. ಆದಿವಾಸಿಗಳ ಪ್ರದೇಶಗಳಿಗೆ ಖುದ್ದಾಗಿ ಭೇಟಿ ನೀಡಿ ಜಿಲ್ಲಾಡಳಿತದ ಸಮ್ಮುಖದಲ್ಲೇ ಸಮಸ್ಯೆಗಳನ್ನು ಇತ್ಯರ್ಥಗೊಳಿಸಲು ಯತ್ನಿಸುವುದಾಗಿಯೂ ನುಡಿದರು.

ಒಟ್ಟಾರೆ ಸಭೆಯು ಮುಕ್ತವಾಗಿ ಅಭಿಪ್ರಾಯ ಹಂಚಿಕೊಳ್ಳಲು ಅವಕಾಶ ಕಲ್ಪಿಸಿತ್ತಲ್ಲದೇ ಸೌಹಾರ್ಧಯುತವಾಗಿತ್ತು. ಕಂಡ ಕಾಳಜಿಯಂದ ಭರವಸೆ ಕೊಂಚ ಮೂಡಿಸಿತು. ಈ ನಿಯೋಗದಲ್ಲಿ ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ಸಂಚಾಲಕ ವೈ.ಕೆ.ಗಣೇಶ್, ಸಹ ಸಂಚಾಲಕರಾದ ಎಸ್.ವೈ.ಗುರುಶಾಂತ್, ಎಲ್.ಶೇಖರ್, ಶ್ರೀಧರ ಕೆ.ನಾಡಾ, ರವಿ ಬರಡಿ, ಜಯಾನಂದ ಮಲೆಕುಡಿಯ, ಸುಂದರ ಮಲೆಕುಡಿಯ, ಸುರೇಂದ್ರ. ಹಕ್ಕಿ ಪಿಕ್ಕಿ ಸಮುದಾಯದ ಪ್ರತಿನಿಧಿ, ಕುಣಬಿ ಸಮುದಾಯ ಕ್ಷೇಮಾಭಿವೃದ್ಧಿ ಸಂಘದ ಪ್ರಧಾನ ಕಾರ್ಯದರ್ಶಿ ಲಕ್ಷ್ಮಣ ಗಾಂವ್ಕರ್, ಅಲ್ಲದೇ ಉತ್ತರ ಕನ್ನಡದ ಸಿದ್ದಾಪುರ, ಶಿವಮೊಗ್ಗದ ಹೊಸನಗರ, ಕೊಡಗು, ದ.ಕ.ಬೆಳ್ತಂಗಡಿ, ಸವಣಾಲು, ಉಡುಪಿ ಕುಂದಾಪುರ ಮುಂತಾದ ಪ್ರದೇಶಗಳ ಪ್ರತಿನಿಧಿಗಳು, ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಜಿ.ಸಿ.ಬಯ್ಯಾರೆಡ್ಡಿ ಯವರು ನಿಯೋಗದಲ್ಲಿದ್ದರು.

ಆಂದೋಲನಕ್ಕೆ ನಿರ್ಧಾರ

ಈ ಹಿನ್ನೆಲೆಯಲ್ಲಿ ಅಗಸ್ಟ್ 11 ರಂದು ಸೇರಿದ್ದ ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ರಾಜ್ಯ ಸಂಘಟನಾ ಸಮಿತಿಯ ಸಭೆಯು ಆದಿವಾಸಿಗಳ ಹಕ್ಕೊತ್ತಾಯಗಳಿಗಾಗಿ ಆಂದೋಲನವನ್ನು ನಡೆಸಿ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಲು ನಿರ್ಧರಿಸಿದೆ. ●



ಅಗಸ್ಟ್ 13 : ಸರಕಾರಿ ಶಾಲೆ ಮುಚ್ಚುವುದರ ವಿರುದ್ಧ ಎಸ್.ಎಫ್.ಐ. ಪ್ರತಿಭಟನೆ

ರಾಜ್ಯ ಸರಕಾರ ಸರಕಾರಿ ಶಾಲೆಗಳಿಗೆ ಮೂಲಭೂತ ಸೌಲಭ್ಯಗಳನ್ನು ಕೊಡಲಾರದೆ, ಮಕ್ಕಳ ಸಂಖ್ಯೆ ಕಡಿಮೆ ಇದೇ ಎಂಬ ನೆಪದಲ್ಲಿ ಸರಕಾರಿ ಶಾಲೆಗಳನ್ನುವಿಲೀನ್ ಮಾಡಲು ಮತ್ತು ನಿಜವಾಗಿಯೂ ಮುಚ್ಚಲು ಹೊರಟಿರುವುದನ್ನು ವಿರೋಧಿಸಿ ದಿನಾಂಕ ಅಗಸ್ಟ್ 13ರಂದು ರಂದು ಎಸ್.ಎಫ್.ಐ. ರಾಜ್ಯ ಸಮಿತಿಯ ಕರೆಯ ಮೇರೆಗೆ ರಾಜ್ಯಾದ್ಯಂತ ಶಿಕ್ಷಣ ಇಲಾಖೆಯ ಕಚೇರಿಗಳ ಮುಂದೆ ಪ್ರತಿಭಟನೆ ನಡೆದ ವರದಿಗಳು ಬಂದಿವೆ. ●



"ಸೌಹಾರ್ದತೆಗಾಗಿ ಸಹಪಯಣ.......... ಪುಟ 16 ರಿಂದ

ಚರ್ಚೆಯ ಅಗತ್ಯವಿದೆ. ಬಹುಸಂಖ್ಯಾತರ ರಾಜಕೀಯ ಯಜಮಾನಿಕೆಯ ದಬ್ಬಾಳಿಕೆಗೆ ಹುಟ್ಟಿಕೊಳ್ಳುವ ಒಂದು ಪ್ರಕ್ರಿಯೆ ಕೋಮುವಾದ ಎನ್ನಿಸಿಕೊಳ್ಳುತ್ತದೆ. ಅದನ್ನು ವಿಭಿನ್ನವಾಗಿ ಬಿಡಿಸುವ ಪ್ರಯತ್ನ ಮಾಡಬೇಕು. ಒಂದು ಸಮುದಾಯದ ಬಗ್ಗೆ ಸಿದ್ಧವಾದ ಗ್ರಹಿಕೆಗಳ ಮೂಲಕ ಮಾತನಾಡುವ ಬದಲಿಗೆ, ನೇರವಾಗಿ ಮಾತನಾಡಬೇಕು." ಎಂದು ರಹಮತ್ ತರೀಕೆರೆ ಅಭಿಪ್ರಾಯಪಟ್ಟರು. ವಿಚಾರವಾದಕ್ಕೆ ಸಮುದಾಯದ ಬಗ್ಗೆ ಕಾಳಜಿಯಿದ್ದರೂ ಅದು ಜನರನ್ನು ತಲುಪಲು ಸಾಧ್ಯವಾಗುತ್ತಿಲ್ಲ. ನಮ್ಮ ಮಾತುಗಳನ್ನು ಹೊಸ ಭಾಷೆಯಲ್ಲಿ, ಹೊಸ ಸೈದ್ಧಾಂತಿಕ ಹಿನ್ನೆಲೆಯಲ್ಲಿ ಕಟ್ಟಿಕೊಳ್ಳಬೇಕಿದೆ." ಎಂದು ಅವರು ಸೂಚಿಸಿದರು.

ಎರಡು ದಿನಗಳ ಸಂವಾದದ ಬಗ್ಗೆ ಪ್ರತಿಕ್ರಿಯೆ ನೀಡಿದ ಹಿರಿಯ ಪತ್ರಕರ್ತ ದಿನೇಶ್ ಅಮೀನ್ ಮಟ್ಟು, ಸಮಾಜ ಮತ್ತು ಧರ್ಮವನ್ನು ಹೇಗೆ ಗ್ರಹಿಸಬೇಕು ಎಂಬುದರ ಕುರಿತು ಮಾತನಾಡಿದರು. "ಉತ್ತರ ಪ್ರದೇಶವನ್ನು ಯೋಗಿ ಆದಿತ್ಯನಾಥರ ಮೂಲಕ ನೋಡಬೇಕಿಲ್ಲ. ಅಲ್ಲಿಯ ಜನರ ಮೂಲಕ ನೋಡಿ. ಹಿಂದೂ ಧರ್ಮವನ್ನು ಸಾವರ್ಕರ್ ಮೂಲಕ ಅಲ್ಲ, ಗಾಂಧೀಜಿ ಮೂಲಕ ನೋಡಿ. ಇಸ್ಲಾಂ ಅನ್ನು ಔರಂಗಜೇಬನ ಮೂಲಕ ಅಲ್ಲ, ಅಕ್ಬರನ ಮೂಲಕ ನೋಡಿ. ಆಗ ನಿಮಗೆ ಅವು ಸರಿಯಾಗಿ ಅರ್ಥವಾಗುತ್ತವೆ" ಎಂದು ಅವರು ಸೂಚಿಸಿದರು.

ಎರಡು ದಿನಗಳ ಕಾರ್ಯಾಗಾರದಲ್ಲಿ ಟ್ರೈನ್ ಟು ಪಾಕಿಸ್ತಾನ್ ಪುಸ್ತಕದ ಅನುವಾದಕಾದ ಡಾ.ಬಿ.ಎನ್. ರಾಮಮೂರ್ತಿ, ಸಾಹಿತಿಗಳಾದ ಶ್ರೀಪಾದ್ ಭಟ್, ಡಾ. ಕಿರಣ್ ಗಾಜನೂರು, ಸಂವರ್ಥ ಸಾಹಿಲ್, ಚೇತನಾ ತೀರ್ಥಹಳ್ಳಿ, ಡಿವೈಎಫ್ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಅವರುಗಳೂ ಭಾಗವಹಿಸಿದ್ದರು.

ಧರೆ ಹತ್ತಿ ಉರಿದಾಗ ನಾಟಕ:

ಸದತ್ ಹಸ್ ಮಾಂಟೋರವರ ದೇಶ ವಿಭಜನೆಯ ಮೂರು ಕಥೆಗಳನ್ನಾಧರಿಸಿದ "ಧರೆ ಹತ್ತಿ ಉರಿದಾಗ" ಎಂಬ ನಾಟಕವನ್ನು ಮಂಗಳೂರಿನ ರಂಗನಿರ್ದೇಶಕರಾದ ವಿದು ಉಚ್ಚಿಲ್ ನಿರ್ದೇಶಿಸಿದ್ದರು. ಈ ಓದು ಅಭಿಯಾನದಲ್ಲಿ ಭಾಗವಹಿಸಿದ್ದ ಮಂಗಳೂರಿನ ಸಂಗಾತಿಗಳು ಈ ನಾಟಕದಲ್ಲಿ ಅತ್ಯುತ್ತಮವಾಗಿ ಅಭಿನಯಿಸಿದ್ದರು. ಸುಮಾರು ಒಂದು ಗಂಟೆಗಳ ಕಾಲ ನಡೆದ ಈ ನಾಟಕದಲ್ಲಿ ಮಾಂಟೋ ತನ್ನ ಕಥೆಗಳಲ್ಲಿ ಪಾತ್ರಗಳಿಗೆ ತುಂಬಿದ ಜೀವಂತಿಕೆಯನ್ನು, ಆ ಎಲ್ಲಾ ಪಾತ್ರಗಳು, ಘಟನೆಗಳು ನಮ್ಮ ಕಣ್ಣಮುಂದೆಯೇ ನಡೆಯುತ್ತಿರುವಂತೆ ನಾಟಕದ ಪಾತ್ರದಾರಿಗಳು ಚಿತ್ರಿಸಿದರು. ಇವರ್‍ಯಾರು ತರಬೇತಿ ಹೊಂದಿದ ಕಲಾವಿದರಲ್ಲದಿದ್ದರೂ ಕಥೆಯನ್ನು ತಮ್ಮೊಳಗೆ ಇಳಿಸಿಕೊಂಡು ಪಾತ್ರಗಳಲ್ಲಿ ಲೀನವಾಗಿದ್ದರು. ನಾಟಕ ನೋಡಿದ ಮೇಲಂತು ಮಾಂಟೋರವರ ಕಥೆಗಳು ಇನ್ನಷ್ಟು ಕಾಡಲು ಪ್ರಾರಂಭವಾಗಿವೆ. ಇದೇ ಈ ನಾಟಕದ ಯಶಸ್ಸು ಎಂದರೆ ತಪ್ಪಾಗಲಾರದು.

ಅಂತಿಮವಾಗಿ ವರ್ಷಕ್ಕೆ ಕನಿಷ್ಟ ಮೂರು ಬಾರಿ ನಿರ್ಧಿಷ್ಟ ಪುಸ್ತಕಗಳ ಆಯ್ಕೆ, ಅವುಗಳ ಓದು/ಮರುಓದು ಮತ್ತು ಅವುಗಳನ್ನು ಮತ್ತಷ್ಟು ಅರ್ಥಮಾಡಿಕೊಳ್ಳಲು ಪ್ರವಾಸ ಅಥವ ಕಾರ್ಯಾಗಾರಗಳು, ಸಂವಾದಗಳನ್ನು ನಡೆಸಲು ತೀರ್ಮಾನಿಸಲಾಯಿತು. ●

ನಿರುದ್ಯೋಗ–ಮೀಸಲಾತಿ–ಲಿಂಚಿಂಗ್ ಕೊಂಡಿಗಳು ಮತ್ತು ಕೆಂಪುಕೋಟೆ ಮಂತ್ರದಲ್ಲಿ 'ಎಲ್ಲರಿಗೂ ಉದ್ಯೋಗ' ಕಾಣೆ !



ಮೀಸಲಾತಿಗೆ ಉದ್ಯೋಗಗಳಾದರೂ ಎಲ್ಲಿದೆ?– ಇದು ಮರಾಠಾ ಮೀಸಲಾತಿ ಚಳುವಳಿ ಬಗ್ಗೆ ಒಬ್ಬ ಪ್ರತಿಷ್ಠಿತರನ್ನು ಕೇಳಿದಾಗ ಅವರ ಮರುಪ್ರಶ್ನೆ. "ಉದ್ಯೋಗಗಳಿಲ್ಲ. ಏಕೆಂದರೆ ಬ್ಯಾಂಕುಗಳಲ್ಲಿ ಉದ್ಯೋಗಗಳು ಕುಗ್ಗಿವೆ, ಏಕೆಂದರೆ ಐಟಿಯಿಂದಾಗಿ ಉದ್ಯೋಗಗಳು ಕುಗ್ಗಿವೆ. ಸರಕಾರೀ ನೇಮಕಾತಿ ಸ್ಥಗಿತಗೊಂಡಿದೆ". ಇದರಲ್ಲಿ ವಿಶೇಷವೇನು, ಇದು ಎಲ್ಲರಿಗೂ ಗೊತ್ತಿರುವ ಸಂಗತಿಯೇ ಅಲ್ಲವೇ ಎಂದು ಕೇಳಬಹುದು. ನಿಜ, ಆದರೆ ಈ ಪ್ರತಿಷ್ಠಿತರು ವರ್ಷಕ್ಕೆ 2 ಕೋಟಿ ಉದ್ಯೋಗಗಳನ್ನು ನಿರ್ಮಿಸಲಾಗುವುದು ಎಂದು ಆಶ್ವಾಸನೆ ನೀಡಿ ಅಧಿಕಾರ ಪಡೆದಿರುವ ಕೇಂದ್ರ ಸರಕಾರದ ಮಂತ್ರಿಗಳು ಮತ್ತು ಈ ಹಿಂದೆ ಆಳುವ ಪಕ್ಷದ ರಾಷ್ಟ್ರೀಯ ಅಧ್ಯಕ್ಷರೂ ಆಗಿದ್ದವರು. ಇತ್ತೀಚೆಗಷ್ಟೇ ಈ ಪಕ್ಷದ ಹಾಲಿ ರಾಷ್ಟ್ರೀಯ ಅಧ್ಯಕ್ಷರು ತಮ್ಮ ಪಕ್ಷದ ನೇತೃತ್ವದ ಸರಕಾರ ಈ ಆಶ್ವಾಸನೆಯನ್ನು ಈಡೇರಿಸಿದೆ ಎಂದಿರುವ ಹಿನ್ನೆಲೆಯಲ್ಲಿ ಕೇಂದ್ರ ಮಂತ್ರಿಗಳ ಈ ಉವಾಚದಲ್ಲಿ ವಿಶೇಷವೇನೂ ಇಲ್ಲವೇ? ಇಂಗ್ಲಿಷ್ ಪದಪುಂಜವೊಂದು ಹೇಳುವಂತೆ 'ಕುದುರೆಯ ಮುಖ'ದಿಂದಲೇ ಸತ್ಯ ಕೊನೆಗೂ ಹೊರಬಿದ್ದಿದೆ ಎಂಬುದೇ ಆ ವಿಶೇಷ.

ಈ ಸತ್ಯವನ್ನು ಆಳುವ ಮಂದಿ ಹೆಚ್ಚೆಚ್ಚಾಗಿ ಒಪ್ಪಿಕೊಳ್ಳಲೇಬೇಕಾದಂತಹ ಪರಿಸ್ಥಿತಿ ಉಂಟಾಗಿದೆಯೇ? ಏಕೆಂದರೆ ಲಿಂಚಿಂಗ್ ಅಂದರೆ ಜನಜಂಗುಳಿ ಸಾಯಬಡಿಯುವ ಪ್ರವೃತ್ತಿ ಕಣ್ಣಿಗೆ ರಾಚುವಂತೆ ಕಾಣುವ ರಾಜಸ್ಥಾನದ ಅದೇ ಆಳುವ ಪಕ್ಷದ ಸರಕಾರದ ಮುಖ್ಯಮಂತ್ರಿಗಳೂ ಈ ಬಗ್ಗೆ ಕೇಳಿದಾಗ ಯುವಜನರಲ್ಲಿ ನಿರುದ್ಯೋಗವೇ ಇದಕ್ಕೆ ಕಾರಣ ಎಂದಿರುವುದಾಗಿಯೂ ವರದಿಯಾಗಿದೆ. ಇದೂ ನಿಜವೇ, ಭಾಗಶಃವಾದರೂ. ಭಾಗಶಃ ಏಕೆಂದರೆ, ನಿರುದ್ಯೋಗಿ ಯುವಜನರನ್ನು ಈ 'ಉದ್ಯೋಗ'ಕ್ಕೆ ಹಚ್ಚಿದವರು ಯಾರು ಎಂದು ಅವರು ಹೇಳಲಿಲ್ಲ.

ಅದಿರಲಿ, ಯುವಜನರಿಗೆ ಪ್ರತಿ ವರ್ಷ ಎರಡು ಕೋಟಿ ಉದ್ಯೋಗದ ಆಶ್ವಾಸನೆ ನೀಡಿದ್ದ ಪ್ರಧಾನ ಮಂತ್ರಿಗಳು ಖಾಸಗಿ ನಿರ್ವಹಣೆಯ ಕೆಂಪು ಕೋಟೆಯಿಂದ ಭಾಷಣ ಮಾಡಿದ ಮೊತ್ತಮೊದಲ ಪ್ರಧಾನಿ ಎಂಬ 'ಹೆಗ್ಗಳಿಕೆ'ಯನ್ನು ಸ್ವತಃ ನಿರ್ಮಿಸಿಕೊಂಡು ಮಾಡಿದ **ಈ ವರ್ಷದ ಸ್ವಾತಂತ್ರ್ಯ ದಿನದ ಭಾಷಣದಲ್ಲಿ ಎಲ್ಲರಿಗೂ ಮನೆ, ಎಲ್ಲರಿಗೂ ವಿದ್ಯುತ್, ಎಲ್ಲರಿಗೂ ಅಡುಗೆ ಅನಿಲ, ಎಲ್ಲರಿಗೂ ನೀರು, ಎಲ್ಲರಿಗೂ ಶುಚಿತ್ವ, ಎಲ್ಲರಿಗೂ ಕೌಶಲ, ಎಲ್ಲರಿಗೂ ಆರೋಗ್ಯ, ಎಲ್ಲರಿಗೂ ವಿಮೆ, ಎಲ್ಲರಿಗೂ ಇಂಟರ್ನೆಟ್ ಸಂಪರ್ಕ ಎಂಬ ಮಂತ್ರ**ದೊಂದಿಗೆ ದೇಶವನ್ನು ಮುಂದೊಯ್ಯ ಬಯಸುತ್ತೇವೆ ಎಂದು ಸಾರಿದ್ದಾರೆ.

ಆದರೆ ಇಲ್ಲಿ ದೇಶ ಮುಂದೆ ಸಾಗಲು ಬಹಳ ಮುಖ್ಯವಾದ ಯಾವುದೋ ಎರಡು ಕಾಣೆಯಾಗಿವೆ ಎಂದು ಅನಿಸುತ್ತಿಲ್ಲವೇ ಎಂದೊಬ್ಬ ವಿಶ್ಲೇಷಕರು ಪ್ರಶ್ನಿಸಿದ್ದಾರೆ(ಸುಬೋಧ್ ವರ್ಮ, ನ್ಯೂಸ್‌ಕ್ಲಿಕ್, ಆಗಸ್ಟ್ 16). ಹೌದು, **ಪ್ರಧಾನ ಮಂತ್ರಿಗಳೇ ನೀವು ಎಲ್ಲರಿಗೂ ಉದ್ಯೋಗ ಎಂದು ಉಚ್ಚರಿಸಲು ಮರೆತಿದ್ದೀರಿ, ಎಲ್ಲರಿಗೂ ಶಿಕ್ಷಣ ಎಂದು ಹೇಳಲೂ ಮರೆತಿದ್ದೀರಿ** ಎಂದು ಅವರು ಈ ಲೇಖನದ ಶಿರೋನಾಮೆಯಲ್ಲೇ ಹೇಳುತ್ತಾರೆ.

ನಿಜವಾಗಿಯೂ ಪ್ರಧಾನಿಗಳು ಇದನ್ನು ಮರೆತಿದ್ದಾರೋ ಅಥವ ಎಲ್ಲರಿಗೂ ಉದ್ಯೋಗ, ಎಲ್ಲರಿಗೂ ಶಿಕ್ಷಣ ಸಿಕ್ಕಿರುವ 'ಅಚ್ಛೇ ದಿನ್'ಗಳು ಬಂದೇ ಬಿಟ್ಟಿವೆ' ಎಂಬ ಬಾಲಿವುಡ್ ಬದಲೀ ಹಾಡನ್ನು ಇವರೂ ನಂಬಿದ್ದಾರೆಯೇ? ಬೀದಿ ಬದಿಯಲ್ಲಿ ಪಕೋಡಾ ತಯಾರಿಸಿ ಮಾರುವುದೂ ಉದ್ಯೋಗವಲ್ಲವೇ ಎಂದು ಅವರು ಕೇಳಿದಾಗ ಅದರ ಅರ್ಥ ಎಲ್ಲರಿಗೂ ಉದ್ಯೋಗ ಆಗಲೇ ಸಿಕ್ಕಿದೆ ಎಂದೇ ಅರ್ಥವಿರಬಹುದೇ?

ಹಾಗಿದ್ದರೆ ಅವರ ಸಂಪುಟದ ಹಿರಿಯ ಮಂತ್ರಿಗಳ, ಒಂದು ದೊಡ್ಡ ರಾಜ್ಯದ ಅವರ ಪಕ್ಷದ ಮುಖ್ಯಮಂತ್ರಿಗಳ ಬಾಯಿಂದ ನಿರುದ್ಯೋಗದ ಮಾತೇಕೆ?

ಅಂಕಿ–ಅಂಶಗಳು ಈ ಮಂತ್ರಿಗಳ ಮಾತುಗಳಲ್ಲಿ ಸತ್ಯಾಂಶ ಇದೆ ಎಂದೇ ತೋರಿಸುತ್ತಿವೆ. ಆದರೆ ಏಕೆ ಹೀಗೆ ಎಂದು ಮಾತ್ರ ಅವರುಗಳು ಹೇಳಿಲ್ಲ ಎಂಬುದು ಬೇರೆ ಮಾತು.

* ಬ್ಯಾಂಕುಗಳಲ್ಲಿ 2015ರಲ್ಲಿ 9.47 ಲಕ್ಷ ಉದ್ಯೋಗಗಳಿದ್ದು, 2017ರಲ್ಲಿ ಅದು 9.12 ಲಕ್ಷಕ್ಕೆ ಇಳಿಯಿತು. ಅಂದರೆ 2 ವರ್ಷಗಳಲ್ಲಿ 35,000 ಉದ್ಯೋಗಗಳ ಕಡಿತ.
* 2014ರಲ್ಲಿ ಕೇಂದ್ರ ಸರಕಾರದ ಇಲಾಖೆಗಳು/ಸಂಸ್ಥೆಗಳಲ್ಲಿ ಇದ್ದ ನೌಕರರ ಸಂಖ್ಯೆ 33.28ಲಕ್ಷ, 2017ರಲ್ಲಿ 32,53 ಲಕ್ಷ, ಅಂದರೆ 3ವರ್ಷಗಳಲ್ಲಿ 75,00 ಉದ್ಯೋಗಗಳ ಕಡಿತ.
* 330ಕ್ಕೂ ಹೆಚ್ಚು ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ 2014ರಲ್ಲಿ 16.91ಲಕ್ಷ ನೌಕರರು ಕೆಲಸ ಮಾಡುತ್ತಿದ್ದರು. 2017ರಲ್ಲಿ ಇದು 15.24 ಲಕ್ಷ ಆಗಿದೆ, ಅಂದರೆ 3 ವರ್ಷಗಳಲ್ಲಿ 1,67,000 ಉದ್ಯೋಗಗಳ ಕಡಿತ.
* 2016ರಲ್ಲಿ 15ವರ್ಷ ವಯಸ್ಸು ದಾಟಿರುವ ಜನಸಂಖ್ಯೆಯ 43% ಮಂದಿ ಉದ್ಯೋಗ ಮಾಡುತ್ತಿದ್ದರು, 2018ರಲ್ಲಿ ಅದು 40%ಕ್ಕೆ ಇಳಿದಿದೆ, ಅಂದರೆ 2 ವರ್ಷಗಳಲ್ಲಿ 1.43 ಕೋಟಿ ಉದ್ಯೋಗ ನಷ್ಟ.
* ಜನವರಿ 2017ರಲ್ಲಿ ದೇಶದಲ್ಲಿನ ಒಟ್ಟು ಉದ್ಯೋಗಗಳ ಸಂಖ್ಯೆ 40.84 ಕೋಟಿ, ಈ ವರ್ಷದ ಜೂನ್‌ನಲ್ಲಿ ಅದು 39.75 ಕೋಟಿಗೆ ಇಳಿದಿದೆ. ಅಂದರೆ ಕೇವಲ 18ತಿಂಗಳಲ್ಲೇ 1.09 ಕೋಟಿ ಉದ್ಯೋಗಗಳ ನಷ್ಟ. ಈ ಹಿಂದೆ 2015 ಮತ್ತು 2016ರಲ್ಲೂ ಹೀಗೆಯೇ ಆಗಿದೆ ಎಂದು ಅಂಕಿ–ಅಂಶಗಳು ಹೇಳುತ್ತವೆ.
* ದೇಶದಲ್ಲಿನ ನಿರುದ್ಯೋಗ ದರ ಈಗಲೂ 5%, ಅಂದರೆ ಸುಮಾರು 2 ಕೋಟಿ.

ಹೌದು ಕೇಂದ್ರದ ಹಿರಿಯ ಮಂತ್ರಿಗಳು ಮತ್ತು ಒಂದು ದೊಡ್ಡ ರಾಜ್ಯದ ಮುಖ್ಯಮಂತ್ರಿಗಳು ಹೇಳಿರುವುದರಲ್ಲಿ ಸತ್ಯಾಂಶ ಇದೆ. ಆದರೆ ದೇಶದ ಪ್ರಧಾನಿಗಳು ಇದನ್ನು ಮರೆತಿದ್ದಾರೆಯೇ, ಅಥವ ಮರೆಮಾಚುತ್ತಿದ್ದಾರೆಯೇ ಎಂಬ ಪ್ರಶ್ನೆ ಉಳಿದೇ ಉಳಿಯುತ್ತದೆ. ಎರಡಕ್ಕೂ ಏಕೆ ಎಂಬ ಪ್ರಶ್ನೆಯೂ ತಂತಾನೇ ಸೇರಿಕೊಳ್ಳುತ್ತದೆ.

'ಅವಹೇಳನಕಾರಿ'ಯೆಂದಾದ ಪ್ರಧಾನಿಗಳ ಮಾತು 'ನಂಬಲನರ್ಹ'ವೆನಿಸಿದ ಆಳುವ ಪಕ್ಷದ ಅಧ್ಯಕ್ಷರ ಮಾತು

ಅಚ್ಛೇ ದಿನ್‌ಗಳು ನಿರ್ಮಿಸಿರುವ ದಾಖಲೆಗಳ ಪಟ್ಟಿಯಲ್ಲಿ ಈಗ ಇನ್ನು ಮೂರು ಸೇರಿಕೊಂಡಿವೆ.

ಮೊದಲನೆಯದು, ರಾಜ್ಯಸಭಾ ಕಲಾಪದ ಕಡತದಿಂದ ಸ್ವತಃ ಪ್ರಧಾನ ಮಂತ್ರಿಗಳ ಉದ್ಗಾರವನ್ನು ತೆಗೆದು ಹಾಕಿದ ಪ್ರಕರಣ. ರಾಜ್ಯಸಭೆಯ ಉಪ ಸಭಾಧ್ಯಕ್ಷರ ಚುನಾವಣೆಯ ನಂತರ ಗೆದ್ದ ಜೆಡಿ(ಯು) ಅಭ್ಯರ್ಥಿಯನ್ನು ಅಭಿನಂದಿಸುತ್ತ ಪ್ರಧಾನಿಗಳು ಸೋತ ಕಾಂಗ್ರೆಸ್ ಅಭ್ಯರ್ಥಿಯ ಹೆಸರಿನಲ್ಲಿನ ಮೊದಲ ಅಕ್ಷರಗಳನ್ನು ತಿರುಚಿ ಅವರಿಗೆ ಅವಮಾನವಾಗುವ ರೀತಿಯಲ್ಲಿ ಉದ್ದೇಶಪೂರ್ವಕವಾಗಿ ಮಾತಾಡಿದ್ದಾರೆ ಎಂದು ದಿಲ್ಲಿ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದ ಆರ್‌ಜೆಡಿ ಸದಸ್ಯರು ಆಕ್ಷೇಪ ಎತ್ತಿದರು. ರಾಜ್ಯಸಭಾಧ್ಯಕ್ಷರು ಇದನ್ನು ಗಮನಕ್ಕೆ ತಗೊಳ್ಳಲೇ ಬೇಕಾಗಿ ಬಂತು. ಮರುದಿನ ಈ ಭಾಗವನ್ನು ಕಡತದಿಂದ ತೆಗೆದು ಹಾಕಲಾಯಿತು ಎಂದು ಆಆರ್‌ಜೆಡಿ ಸದಸ್ಯರಿಗೆ ತಿಳಿಸಲಾಯಿತಂತೆ.

ಸದನದ ಸದಸ್ಯರೊಬ್ಬರ ಬಗ್ಗೆ ಅವಹೇಳನ ಮಾಡಿದ್ದಕ್ಕೆ ಒಬ್ಬ ಪ್ರಧಾನ ಮಂತ್ರಿಯ ಮಾತನ್ನು ಕಡತದಿಂದ ತೆಗೆದಯ ಹಾಕಿರುವುದು ಇದೇ ಮೊದಲ ಬಾರಿ ಎನ್ನಲಾಗಿದೆ.(ಹಿಂದು ಬಿಸಿನೆಸ್‌ಲೈನ್, ಆಗಸ್ಟ್ 10).

ಎರಡನೆಯದಾಗಿ, ಇದಕ್ಕೆ ಕೆಲವು ದಿನಗಳ ಮೊದಲು ರಾಜ್ಯಸಭೆಯನ್ನು ಇತ್ತೀಚೆಗೆ ಪ್ರವೇಶಿಸಿರುವ ಬಿಜೆಪಿಯ ಅಧ್ಯಕ್ಷರು ನಿರ್ದೇಶಕರಾಗಿರುವ ಅಹಮದಾಬಾದ್ ಅಭಿವೃದ್ಧಿ ಸಹಕಾರಿ ಬ್ಯಾಂಕ್ ಸಂಗ್ರಹಿಸಿದ ರದ್ದಾದ ನೋಟುಗಳ ಮೊತ್ತದ ಬಗ್ಗೆ ಸಮಾಜವಾದಿ ಪಕ್ಷದ ಸದಸ್ಯರೊಬ್ಬರು ಪ್ರಶ್ನೆ ಕೇಳಿದ್ದರು. ಅದಕ್ಕೆ ಉತ್ತರಿಸುತ್ತ ಸಂಬಂಧಪಟ್ಟ ಮಂತ್ರಿಗಳು ನೋಟುರದ್ದತಿ ಪ್ರಕಟಣೆ ಮೊದಲ 5ದಿನಗಳಲ್ಲೇ ಈ ಸಹಕಾರಿ ಬ್ಯಾಂಕ್ 745.5 ಕೋಟಿ ರೂ.ಗಳ ಮೊತ್ತದ ರದ್ದಾದ ನೊಟುಗಳನ್ನು ಸಂಗ್ರಹಿಸಿದ್ದು ಇದು ಅತ್ಯಂತ ಹೆಚ್ಚಿನ ಮೊತ್ತ ಎಂದು ಉತ್ತರಿಸಿದರು. ಸಾಮಾನ್ಯವಾಗಿ ಮಂತ್ರಿಗಳು ನೀಡಿದ ಉತ್ತರವನ್ನು ಪ್ರಶ್ನೆಯೊಂದಿಗೆ ರಾಜ್ಯ ಸಭೆಯ ವೆಬ್‌ಸೈಟಿನಲ್ಲಿ ಹಾಕಲಾಗುವುದು. ಆದರೆ ಈ ಉತ್ತರವನ್ನು ಹಾಕಲಿಲ್ಲ, ಮಾತ್ರವಲ್ಲ, ಪ್ರಶ್ನೆಯೂ ವೆಬ್‌ಸೈಟಿನಿಂದ ಕಾಣೆಯಾಯ್ತು. ಆದರೆ ಈ ಬಗ್ಗೆ ಪ್ರಶ್ನಿಸಿದಾಗ ಪ್ರಶ್ನೆ–ಉತ್ತರ ಎರಡೂ ಹಾಜರಾದವು.(ಸಬ್‌ರಂಗಿಂಡಿಯಾ, ಜುಲೈ31)

ಮೂರನೆಯದಾಗಿ, 2002ರ ನರೋದ ಗಾಮ್ ಹತ್ಯಾಕಾಂಡದ ಮೊಕದ್ದಮೆಯಲ್ಲಿ ಆರೋಪಿಯಾದ ಆಗಿನ ಮೋದಿ ರಾಜ್ಯಸಂಪುಟದ ಮಂತ್ರಿ ಮಾಯಾ ಕೊಡ್ನಾನಿಯವರ ಪರವಾಗಿ ಬಿಜೆಪಿ ಅಧ್ಯಕ್ಷರು ನೀಡಿದ ಸಾಕ್ಷ್ಯ ನಂಬಲರ್ಹವಲ್ಲ ಎಂದು ಈ ಬಗ್ಗೆ ತನಿಖೆ ಮಾಡುತ್ತಿರುವ ಸುಪ್ರಿಂ ಕೋರ್ಟ್ ನೇಮಿತ ಎಸ್‌ಐಟಿ ವಿಶೇಷ ನ್ಯಾಯಾಲಯದ ಮುಂದೆ ಹೇಳಿರುವುದಾಗಿ ವರದಿಯಾಗಿದೆ(ಪಿಟಿಐ, ಆಗಸ್ಟ್ 2)

ಅಚ್ಛೇದಿನ್ ಎಂದು ಹೇಳಿಕೊಳ್ಳಲು 4880 ಕೋಟಿ ರೂ. ವೆಚ್ಚ


ಏಪ್ರಿಲ್ 2014ರಿಂದ ಜುಲೈ 2018ರ ವರೆಗಿನ 52 ತಿಂಗಳಲ್ಲಿ ಅಚ್ಛೇದಿನ್ ಸರಕಾರ ಜಾಹೀರಾತಿಗಾಗಿ 4880 ಕೋಟಿ ರೂ. ಖರ್ಚು ಮಾಡಿದೆ ಎಂದು ರಾಜ್ಯ ಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತ ಸುದ್ದಿ–ಪ್ರಸಾರ ರಾಜ್ಯಮಂತ್ರಿಗಳು ಹೇಳಿದ್ದಾರೆ.

ಅಚ್ಛೇದಿನ್ ಆಳ್ವಿಕೆಯ ವರ್ಷಗಳಲ್ಲೇ ಇದು ಸತತವಾಗಿ ಏರುತ್ತ ಬಂದಿದೆ. ಒಟ್ಟು 34% ದಷ್ಟು ಏರಿಕೆಯಾಗಿದೆ. 2014–15ರಲ್ಲಿ 980 ಕೋಟಿರೂ. ಖರ್ಚು ಮಾಡಿದ್ದರೆ 2017–18ರಲ್ಲಿ ಇದು 1314 ಕೋಟಿ ರೂ.ಗೆ ಏರಿದೆ.

ಮಾರ್ಚ್ 2011ರಿಂದ ಮಾರ್ಚ್ 2014ರ 37 ತಿಂಗಳಲ್ಲಿ ಹಿಂದಿನ ಯುಪಿಎ–2 ಸರಕಾರ ಒಟ್ಟು 2018 ಕೋಟಿ ರೂ. ಖರ್ಚು ಮಾಇಡಿತ್ತು ಎಂದು ಆರ್‌ಟಿಐ ಮಾಹಿತಿ ತಿಳಿಸುತ್ತದೆ. ಅಂದರೆ ತಿಂಗಳಿಗೆ ಸರಾಸರಿ 54 ಕೋಟಿರೂ. ಅಚ್ಛೇದಿನ್ ಸರಕಾರದ ತಿಂಗಳ ಸರಾಸರಿ 94 ಕೋಟಿರೂ. ಆಗುತ್ತದೆ.


ಇವುಗಳಲ್ಲೆಲ್ಲ ಪ್ರಧಾನ ಮಂತ್ರಿಗಳ ಭಾವಚಿತ್ರವೇ ಪ್ರಧಾನವಾಗಿರುತ್ತದೆ ಎಂಬುದು ಈಗ ಸಾಮಾನ್ಯ ಸಂಗತಿ. ಈಗ ಚಿರಪರಿಚಿತರಾಗಿರುವ ಪ್ರಧಾನಿಗಳ ಜಾಹೀರಾತಿನ ಬದಲು ಈ ಹಣದಿಂದ ಏನೆಲ್ಲ ನಿಜವಾದ ಜನಕಲ್ಯಾಣ ಮಾಡಬಹುದಿತ್ತು ಎಂದು 'ಇಂಡಿಯಾಸ್ಪೆಂಡ್'ನ ಶ್ರೇಯಾ ರಾಮನ್ ಮಾಡಿರುವ ಲೆಕ್ಕಾಚಾರ ನೋಡಿ:

* 4.57 ಕೊಟಿ ಮಕ್ಕಳಿಗೆ ಮಧ್ಯಾಹ್ನದ ಊಟ ಒದಗಿಸಬಹುದಿತ್ತು.
* ಮನರೇಗ ದ ಅಡಿಯಲ್ಲಿ 20 ಕೋಟಿ ಕಾರ್ಮಿಕರಿಗೆ ಒಂದು ದಿನದ ಕೆಲಸ ಒದಗಿಸಬಹುದಿತ್ತು.
* 60 ಲಕ್ಷ ಹೊಸ ಶೌಚಾಲಯಗಳನ್ನು ಕಟ್ಟಬಹುದಿತ್ತು.
* ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗಳನ್ನು ನಿರ್ಮಿಸಲು ಬಳಸಿದ್ದರೆ ಇನ್ನೂ 6 ಸಂಸ್ಥೆಗಳನ್ನು ಪೂರ್ಣಗೊಳಿಸಬಹುದಿತ್ತು.ಈಗ ಪ್ರಸ್ತಾವಿತ 20 ಸಂಸ್ಥೆಗಳಲ್ಲಿ ಕೇವಲ 6 ಪೂರ್ಣಗೊಂಡು ಕೆಲಸ ಮಾಡುತ್ತಿವೆ.
* ರಾಷ್ಟ್ರೀಯ ಹೆದ್ದಾರಿಗಳ ನಿರ್ವಹಣೆಗೆ 67% ಹೆಚ್ಚು ಹಣ ಒದಗಿಸಬಹುದಿತ್ತು.
* ಇನ್ನೂ 10 ಮಂಗಳಯಾನಗಳನ್ನು ಕಳಿಸಬಹುದಿತ್ತು.



ಮಲಗಿದ್ದ ಆನೆ ಎದ್ದು ಓಡುವಂತೆ ಭಾರತದ ಅರ್ಥವ್ಯವಸ್ಥೆ ವೇಗವಾಗಿ ಪ್ರಗತಿ ಸಾಧಿಸುತ್ತಿದೆ
–ಕೆಂಪುಕೋಟೆಯಲ್ಲಿ ಪ್ರಧಾನಿ, ಆಗಸ್ಟ್ 15
ರೂಪಾಯಿ ಬೆಲೆ ಕುಸಿತದಲ್ಲಿ ಹೊಸ ದಾಖಲೆ, ಡಾಲರಿಗೆ ರೂ.70.40
–ಸುದ್ದಿ . ಆಗಸ್ಟ್ 16
ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ, ಸಿಫಿ. ಕಾಂ

ಮಾಧ್ಯಮ ವ್ಯಕ್ತಿ ಗಳನ್ನು ಮಣಿಸುವ ಆಳುವ ಮಂದಿಯ ಪ್ರಯತ್ನಗಳ ಸರಣಿಯಲ್ಲಿ ಇತ್ತೀಚೆಗೆ ಎಬಿಪಿ ಟಿವಿ ವಾಹಿನಿಯ ಇಬ್ಬರು ಪ್ರಮುಖ ಪತ್ರಕರ್ತರು ರಾಜೀನಾಮೆ ನೀಡಬೇಕಾಗಿ ಬಂದ ಪ್ರಸಂಗದ ನಂತರ ಪ್ರಸಿದ್ಧ ವ್ಯಂಗ್ಯಚಿತ್ರಕಾರರಾದ ಸತೀಶ್ ಆಚಾರ್ಯ ಅವರು ತಮ್ಮ ಚಿತ್ರಗಳಲ್ಲಿ ಪ್ರಧಾನಿಗಳ ಚಿತ್ರವನ್ನು ಕೈಬಿಡಬೇಕೆಂಬ 'ಮೇಲ್ ಟುಡೇ' ಸಂಪಾದಕರ 'ಸಲಹೆ'ಯನ್ನು ಒಪ್ಪದ್ದರಿಂದ ಅವರ ವ್ಯಂಗ್ಯಚಿತ್ರ ಇರುವ ಜಾಗದಲ್ಲಿ ಫೋಟೋ ಹಾಕಿದ್ದನ್ನು ಪ್ರತಿಭಟಿಸಿ ಹೊರಬಂದಿರುವ ಘಟನೆ ನಡೆದಿದೆ. ಇದಕ್ಕೆ ಕರ್ನಾಟಕದ ಇನ್ನೊಬ್ಬ ವ್ಯಂಗ್ಯಚಿತ್ರಕಾರರ ಪ್ರತಿಕ್ರಿಯೆ.



ವ್ಯಂಗ್ಯಚಿತ್ರ: ಪಿ.ಮಹಮ್ಮದ್

“ಅನ್ನ, ಉದ್ಯೋಗ ಒದಗಿಸಲು ಸರ್ಕಾರ ಅಸಮರ್ಥವಾಗಿರುವ ದೇಶದಲ್ಲಿ”

ತಿರುಪೆ ಎತ್ತುವುದು ಒಂದು ಅಪರಾಧವೇ?



ಭಾರತದಲ್ಲ ಅಧಿಕಾರದ ಚುಕ್ಕಾಣಿ ಹಿಡಿದವರು, ಅತಿ ವೇಗದ ಬೆಳವಣಿಗೆ ಸಾಧಿಸುವುದರಲ್ಲಿ ನಾವು ಚೀನಾವನ್ನು ಹಿಂದಿಕ್ಕಿದ್ದೇವೆ ಎಂದು ಮಾಳಿಗೆ ಮೇಲೆ ನಿಂತು ಕೂಗುತ್ತಿರುವ ಸನ್ನಿವೇಶದಲ್ಲಿ, ರಾಜಧಾನಿಯಲ್ಲಿ ತಿರುಪೆ ಎತ್ತುವುದು ಅಪರಾಧವಲ್ಲ ಎನ್ನುವ ದಿಲ್ಲಿ ಹೈಕೋರ್ಟ್ ತೀರ್ಪು “ಸ್ವಾಗತಾರ್ಹ” ಎಂದು ಹೇಳುವುದು ಒಂದು ಅಣಕವಾಗಿ ಕಾಣುತ್ತದೆ. ವ್ಯಕ್ತಿಯ ನಿರ್ಗತಿಕತನದ ಹೊಣೆ ಸಮಾಜದ ಮೇಲಿರುತ್ತದೆ. ಸಾಮಾಜಿಕ ವ್ಯವಸ್ಥೆಯ ಪರವಾಗಿ, ಅದರ ಉಸ್ತುವಾರಿ ವಹಿಸಿಕೊಂಡಿರುವ ಪ್ರಭುತ್ವವು ಪ್ರತಿಯೊಬ್ಬ ವ್ಯಕ್ತಿಗೂ ಉದ್ಯೋಗ ಒದಗಿಸಬೇಕು. ತಪ್ಪಿದರೆ, ಜೀವನಾಧಾರ ಮಟ್ಟದ ಕೂಲಿ ಕೊಡಬೇಕು. ಈ ಬೀಜರೂಪದ ವಿಚಾರವನ್ನು ನಮ್ಮ ಸಮಾಜದಲ್ಲಿ ಬಿತ್ತಬೇಕು..

ಪ್ರೊ.ಪ್ರಭಾತ್ ಪಟ್ನಾಯಕ್ ಅನು:ಕೆ.ಎಂ.ನಾಗರಾಜ್

ರಾಜಧಾನಿಯಲ್ಲಿ ತಿರುಪೆ ಎತ್ತುವುದು ಅಪರಾಧವಲ್ಲ ಎಂಬುದಾಗಿ ದಿಲ್ಲಿ ಹೈಕೋರ್ಟ್ ಆಗಸ್ಟ್ 8ರಂದು ತೀರ್ಪು ನೀಡಿದೆ. ಸಾಮಾಜಿಕ ಕಾರ್ಯಕರ್ತ ಹರ್ಷ್ ಮಂದರ್ ಹೂಡಿದ್ದ ಒಂದು ದಾವೆ ಪ್ರಕರಣದ ವಿಚಾರಣೆಯ ಭಾಗವಾಗಿ ವಾದ-ಪ್ರತಿವಾದಗಳು ಮಂಡನೆ ಯಾಗುತ್ತಿದ್ದಾಗ, ಹೈಕೋರ್ಟ್ ಒಂದು ಪ್ರಶ್ನೆ ಕೇಳಿತ್ತು: ಅನ್ನ, ಉದ್ಯೋಗ ಒದಗಿಸಲು ಸರ್ಕಾರ ಅಸಮರ್ಥವಾಗಿರುವ ದೇಶದಲ್ಲಿ, ತಿರುಪೆ ಎತ್ತುವುದು ಒಂದು ಅಪರಾಧವೇ? ಹೊರ ಬಂದ ತೀರ್ಪು ಈ ಅಭಿಪ್ರಾಯಕ್ಕೆ ತಕ್ಕನಾಗಿಯೇ ಇದೆ. ತಿರುಪೆ ಸಂಬಂಧಿಸಿ ದೇಶವ್ಯಾಪಿಯಾದ ಒಂದು ಕೇಂದ್ರ ಶಾಸನ ಇರಲಿಲ್ಲ. ತಿರುಪೆ ಎತ್ತುವುದನ್ನು ಅಪರಾಧವೆಂದು ಸಾರಿದ್ದ 1959ರ ಬೊಂಬೈ ತಿರುಪೆ ತಡೆ ಕಾಯ್ದೆಯನ್ನು ದೇಶದ ರಾಜಧಾನಿ ಪ್ರದೇಶ ಸೇರಿದಂತೆ ಎಲ್ಲಾ ರಾಜ್ಯಗಳೂ ನಿರ್ಗತಿಕರನ್ನು ಶಿಕ್ಷಿಸಲು ಬಳಸಿದವು.

ತಿರುಪೆಗೆ ಸಂಬಂಧಿಸಿ ಹೇಳುವುದಾದರೆ, 21ನೇ ಶತಮಾನದಲ್ಲೂ ಭಾರತದ ನಿರ್ಗತಿಕರ ಪರಿಸ್ಥಿತಿ 17ನೇ ಶತಮಾನದ ಇಂಗ್ಲೆಂಡಿನಲ್ಲಿ ಇದ್ದದ್ದಕ್ಕಿಂತಲೂ ಹೀನಾಯವಾಗಿದೆ. ಆಗ, ಇಂಗ್ಲೆಂಡಿನಲ್ಲಿ, ಬಂಡವಾಳದ ಆದಿಮ ಶೇಖರಣೆಯ ಪರಿಣಾಮವಾಗಿ ನಿರ್ಗತಿಕರಾದ ಅಪಾರ ಮಂದಿ ತಿರುಪೆ ಎತ್ತುವ ದೃಶ್ಯ ಸಾಮಾನ್ಯವಾಗಿತ್ತು. ಬೃಹದಾಕಾರವಾಗಿ ಬೆಳೆದ ನಿರ್ಗತಿಕತನದ ಹಿಂದೆ ಅನೇಕ ಬೇರೆ ಬೇರೆ ಕಾರಣಗಳಿದ್ದವು. ಸಣ್ಣ ಸಣ್ಣ ರೈತರು ಅನುಭೋಗಿಸುತ್ತಿದ್ದ ತುಂಡು ತುಂಡು ಭೂಮಿಯನ್ನು ಸುತ್ತುಗಟ್ಟಿ ಬೇಲಿ ಹಾಕಿ ದೊಡ್ಡ ಜಮೀನ್ದಾರರು ಏಕಾಏಕಿಯಾಗಿ ವಶಪಡಿಸಿಕೊಂಡರು. ಜಮೀನು ಕಳೆದುಕೊಂಡ ರೈತರು ನಿರ್ಗತಿಕರಾದರು. ಬೆಳ್ಳಿ ಬಂಗಾರ ಮುಂತಾದ ಬೆಲೆಬಾಳುವ ಲೋಹಗಳನ್ನು ಅಮೇರಿಕಾದಿಂದ ಆಮದು ಮಾಡಿಕೊಂಡ ಪರಿಣಾಮವಾಗಿ ಹಣದುಬ್ಬರ ಉಂಟಾಯಿತು. ನೈಜ ಕೂಲಿಗಳು ಇಳಿದವು. ಅದರಿಂದಾಗಿ, ಎಂದಿನಂತೆ ಅವರು ಜೀವನ ನಿರ್ವಹಿಸುವುದು ದುರ್ಭರವಾಯ್ತು. ಅನೇಕರು ನಿರ್ಗತಿಕರಾದರು. ನಿರ್ಗತಿಕತನ ಹೆಚ್ಚುತ್ತಿದ್ದಂತೆಯೇ ತಿರುಪೆ ಎತ್ತುವುದೂ ಹೆಚ್ಚಿತು. ತಿರುಪೆ ಎತ್ತುವುದರಲ್ಲಿ ಎರಡು ಪದ್ಧತಿಗಳಿದ್ದವು.


ಉದ್ಯೋಗವಿಲ್ಲದ ನಿರ್ಗತಿಕರನ್ನು, ಗಟ್ಟಿಮುಟ್ಟಾಗಿದ್ದವರು ಮತ್ತು ಅಶಕ್ತರು ಎಂಬುದಾಗಿ ಎರಡು ಗುಂಪುಗಳಾಗಿ ವಿಂಗಡಿಸಲಾಯ್ತು. ಗಟ್ಟಿಮುಟ್ಟಾಗಿದ್ದವರನ್ನು “ಕೆಲಸದ ಮನೆ”ಗಳಲ್ಲಿಟ್ಟು, ಅವರಿಗೆ ಕಚ್ಚಾ ಸಾಮಗ್ರಿಗಳನ್ನು ಒದಗಿಸಿ ದುಡಿಮೆಗೆ ಹಚ್ಚಲಾಯ್ತು. “ಅನುಕೂಲ”ವಾಗಿದ್ದ ಸ್ಥಳೀಯರಿಂದ ವಸೂಲು ಮಾಡಿದ ತೆರಿಗೆಯ ಹಣದಲ್ಲಿ ಕೆಲಸಮಾಡಲಾಗದ ಅಶಕ್ತರಿಗೆ – ಮುದುಕರು ಮತ್ತು ಮಕ್ಕಳು – ಅವರ ಮನೆಗಳಿಗೇ ಪರಿಹಾರ ತಲುಪಿಸುವ ವ್ಯವಸ್ಥೆ ಕಲ್ಪಿಸಲಾಯ್ತು. 1776ರ ಹೊತ್ತಿಗೆ, ಇಂಗ್ಲೆಂಡ್ ಮತ್ತು ವೇಲ್ಸ್‌ನಲ್ಲಿ ಸುಮಾರು ಒಂದು ಲಕ್ಷ ಮಂದಿ “ಕೆಲಸದ ಮನೆ”ಗಳಲ್ಲಿ ದುಡಿಯುತ್ತಿದ್ದರು. ಸುಮಾರು ಹತ್ತು ಲಕ್ಷ ಮಂದಿ ಅಶಕ್ತರು ಸ್ಥಳೀಯವಾಗಿ ಪರಿಹಾರ ಪಡೆಯುತ್ತಿದ್ದರು ಎಂದು ಅಂದಾಜು ಮಾಡಲಾಗಿದೆ.

ಈ ಎರಡು ಗುಂಪಿನ ಸಂಖ್ಯೆಗಳನ್ನು ಸೇರಿಸಿದರೆ ಅದು ಆ ಹೊತ್ತಿನ ಇಂಗ್ಲೆಂಡ್ ಮತ್ತು ವೇಲ್ಸ್‌ನಲ್ಲಿದ್ದ ಜನಸಂಖ್ಯೆಯ ಶೇ.10ರಷ್ಟಾಗುತ್ತದೆ. ಈ ಕ್ರಮವು, ಬಂಡವಾಳಶಾಹಿಯು ತಾನು ಬೆಳೆಯುವ ಸಲುವಾಗಿ ಎಂತಹ ಅಮಾನುಷ ರೀತಿಯಲ್ಲಿ ಬಂಡವಾಳ ಸಂಗ್ರಹಿಸಿಕೊಂಡಿತು (ಆದಿಮ ಶೇಖರಣೆ) ಮತ್ತು ಪರಿಣಾಮವಾಗಿ ಅದೆಷ್ಟು ಮಂದಿಯ ಜೀವನವನ್ನು ಧ್ವಂಸ ಮಾಡಿತು ಎಂಬುದನ್ನು ತಿಳಿಸುವುದರ ಜೊತೆಗೆ, ಹಾನಿಗೊಳಗಾದ ನಿರ್ಗತಿಕರಿಗೆ ಅದು ಸ್ವಲ್ಪ ಮಟ್ಟಿನ ಪರಿಹಾರ ಒದಗಿತ್ತು ಎಂಬುದನ್ನೂ ತಿಳಿಸುತ್ತದೆ.

ಭಾರತದಂತಹ ದೇಶಗಳಲ್ಲಿ, ವಸಾಹತುಶಾಹಿಗಳು ಚಾರಿತ್ರಿಕವಾಗಿ ಅನುಸರಿಸಿದ “ಸಂಪತ್ತನ್ನು ಬರಿದು ಮಾಡು”ವ ಹಾಗೂ “ಅಕೈಗಾರಿಕಾರಣ” ಕ್ರಮಗಳ ಮೂಲಕ ನಡೆಸಿದ ಬಂಡವಾಳದ ಆದಿಮ ಶೇಖರಣೆಯ ಪರಿಣಾಮವಾಗಿ ನಿರ್ಗತಿಕರಾದ ಲಕ್ಷ ಲಕ್ಷ ಮಂದಿಗೆ ಯಾವ ರೀತಿಯ ಪರಿಹಾರವೂ ಸಿಗಲಿಲ್ಲ. ಈ ಆದಿಮ ಶೇಖರಣೆಯ ಪ್ರಕ್ರಿಯೆಯು ನಮ್ಮ ದೇಶದಲ್ಲಿ ರಾಶಿ ರಾಶಿಯಾಗಿ ಬಡತನ ಉಂಟಾಗುವುದಕ್ಕೆ ಮೂಲ ಕಾರಣವಾಗಿರುವುದಷ್ಟೇ ಅಲ್ಲ, ಗಟ್ಟಿಮುಟ್ಟಾಗಿದ್ದವರೂ ದೊಡ್ಡ ಪ್ರಮಾಣದಲ್ಲಿ ತಿರುಪೆಗೆ ಇಳಿಯಲು ಮೂಲ ಕಾರಣವಾಗಿದೆ. ಹಾಗಾಗಿ, ನಮ್ಮ ದೇಶದಲ್ಲಿ, ಅಭದ್ರತೆಯಿಂದ ಕೂಡಿದ ಬಡತನವು ಯಾವುದೇ ಪ್ರಕೃತಿ ವಿಕೋಪದಿಂದ ಉಂಟಾದದ್ದಲ್ಲ. ಅಥವಾ, ಕಾರ್ಮಿಕರ ಉತ್ಪಾದಕತೆಯ ಮಟ್ಟದ ಕಾರಣದಿಂದ ಉಂಟಾದದ್ದೂ ಅಲ್ಲ.

ಸ್ವಾತಂತ್ರ್ಯಾನಂತರದ ನಿಯಂತ್ರಣ ನೀತಿಗಳ ಆಳ್ವಿಕೆಯ (ಅಂದರೆ, 1991ರ ಉದಾರ ನೀತಿಗಳ ಆಳ್ವಿಕೆಗೆ ಮೊದಲು) ಅವಧಿಯಲ್ಲಿ ಬಂಡವಾಳಶಾಹಿ ಅಭಿವೃದ್ಧಿಯು ನಿರ್ಗತಿಕತನವನ್ನು ನಿವಾರಿಸಲಿಲ್ಲ. ಅದನ್ನು ಶಮನ ಮಾಡಬಹುದಾಗಿದ್ದ ಭೂಮಿ ಮರುಹಂಚಿಕೆ ಕೈಗೊಳ್ಳುವುದರ ಬದಲು, ಮನಬಂದಂತೆ ಗೇಣಿದಾರರನ್ನು ಒಕ್ಕಲೆಬ್ಬಿಸುವ ಭೂಮಾಲಕರನ್ನು ಬೆಂಬಲಿಸಿತು, ಸರ್ಕಾರ. ಬದಲಾದ ಪರಿಸ್ಥಿತಿಯಲ್ಲಿ, ಈ ಭೂಮಾಲಕರು ಭಾರಿ ಪ್ರಮಾಣದ ಜಮೀನು ಹೊಂದಿ ಅದನ್ನು ಬಂಡವಾಳಶಾಹಿ ಶೈಲಿಯ ಕೃಷಿ ನಡೆಸಲು ಆಸಕ್ತರಾದರು. ನವ-ಉದಾರ ನೀತಿಯ ಆಳ್ವಿಕೆಯಲ್ಲಿ, ಕಿರು ಉತ್ಪಾದಕರ ಚಟುವಟಿಕೆಗಳನ್ನು ನಾಶಪಡಿಸುವ ಮೂಲಕ ಬಂಡವಾಳ ಶೇಖರಿಸುವ ಕ್ರಮವು ಹೆಚ್ಚು ಹೆಚ್ಚು ಮಂದಿ ನಿರ್ಗತಿಕರನ್ನು ಸೃಷ್ಟಿಸಿದೆ.

ನಿರ್ಗತಿಕರಿಗೆ ಪರಿಹಾರದ ವ್ಯವಸ್ಥೆಯೇ ದೇಶದಲ್ಲಿ ಇಲ್ಲದಿರುವ ಅಂಶವು ಗಮನಾರ್ಹವಾಗಿದೆ. ಪರಿಹಾರದ ವ್ಯವಸ್ಥೆ ಇಂಗ್ಲೆಂಡ್‌ನಲ್ಲಿ ಇತ್ತೆಂಬುದನ್ನು ಗಮನಿಸಿದ್ದೇವೆ. ಅದು ನಗಣ್ಯವಾಗಿತ್ತು ಎನ್ನುವಂತಿಲ್ಲ. ಏಕೆಂದರೆ, ಅಂತಹ ಅನುಭವ ಆಧರಿಸಿಯೇ, ಹತ್ತೊಂಭತ್ತನೇ ಶತಮಾನದಲ್ಲಿ, ಶ್ರಮಿಕ ಮೀಸಲು ಪಡೆಯ (ನಿರುದ್ಯೋಗಿಗಳು) ಜೀವನ ಮಟ್ಟವನ್ನು ಒಂದು “ಹದವಾದ” ದಾರಿದ್ರ್ಯದ ಮಟ್ಟದಲ್ಲಿ ಇಟ್ಟಿರುವಂತಹ ವ್ಯವಸ್ಥೆಯನ್ನು ಪ್ರಜ್ಞಾಪೂರ್ವಕವಾಗಿ ಮಾಡಲಾಗಿತ್ತು. ಅದರ ಉದ್ದೇಶವೂ ಸ್ಪಷ್ಟವಾಗಿಯೇ ಇತ್ತು. ಉದ್ಯೋಗದಲ್ಲಿದ್ದವರ ಕೂಲಿಯನ್ನು ಆದಷ್ಟು ಕೆಳ ಮಟ್ಟದಲ್ಲಿಡಲು ಈ ವ್ಯವಸ್ಥೆ ಸಹಕಾರಿಯಾಗಿತ್ತು. ಆದರೆ, ಭಾರತದಲ್ಲಿ, ನಿರ್ಗತಿಕರಿಗೆ ಪರಿಹಾರದ ವ್ಯವಸ್ಥೆ ಮುಂದೆಯಾದರೂ ಬರುವ ಸೂಚನೆಯೂ ಇಲ್ಲ.



ವಸಾಹತುಶಾಹಿಗಳು ದೇಶದ ಆಢಳಿತ ನಡೆಸುತ್ತಿದ್ದ ಸಮಯದಲ್ಲಿ ನಿರ್ಗತಿಕರಿಗೆ ಪರಿಹಾರದ ಯಾವ ವ್ಯವಸ್ಥೆಯೂ ಇಲ್ಲದಿದ್ದುದು ಅರ್ಥವಾಗುವಂತಹ ವಿಷಯ. “ಸ್ಥಳೀಯ” ಜನರ ಸ್ಥಿತಿ-ಗತಿಗಳ ಬಗ್ಗೆ ಅವರಿಗೆ ಕಾಳಜಿ ಇರಲಿಲ್ಲ. ಆದರೆ, ಸ್ವಾತಂತ್ರ್ಯ ಬಂದು 71 ವರ್ಷಗಳ ಬಳಿಕವೂ ನಿರ್ಗತಿಕರಿಗೆ ಪರಿಹಾರ ಒದಗಿಸುವ ವ್ಯವಸ್ಥೆಯೇ ಇಲ್ಲದಿರುವುದು ಒಂದು ಒಗಟಿನ ವಿದ್ಯಮಾನವಾಗಿದೆ. ಇದು, ನಮ್ಮ ಸಮಾಜದಲ್ಲಿ ನಿರ್ಗತಿಕರ ಬಗ್ಗೆ ಶ್ರೀಮಂತರಿಗಿರುವ ಅಸಹನೆ, ಅಸಡ್ಡೆ ಮತ್ತು ತಿರಸ್ಕಾರವನ್ನು ಸೂಚಿಸುತ್ತದೆ. ಬಹುಷಃ, ಇಂತಹ ಅಸಹನೆ, ಅಸಡ್ಡೆ ಮತ್ತು ತಿರಸ್ಕಾರ ಭಾವನೆಗಳ ಮೂಲವು, ಸಾವಿರಾರು ವರ್ಷಗಳಿಂದಲೂ ಆಚರಣೆಯಲ್ಲಿರುವ ಅಮಾನುಷ ಜಾತಿ-ದಬ್ಬಾಳಿಕೆಯ ವ್ಯವಸ್ಥೆಯಲ್ಲಿ ಬೇರೂರಿವೆ ಎನಿಸುತ್ತದೆ.

ಅಮಾನುಷ ಜಾತಿ-ದಬ್ಬಾಳಿಕೆಯ ಸಮಾಜದಲ್ಲಿ ನೆಲಸಿರುವ ಅಸಹನೆ, ಅಸಡ್ಡೆ ಮತ್ತು ತಿರಸ್ಕಾರಗಳ ಹಿನ್ನೆಲೆಯಲ್ಲಿ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಜಾರಿಯಾದದ್ದು ಒಂದು ಗಮನಾರ್ಹ ಬೆಳವಣಿಗೆಯಾಗಿತ್ತು. ಗ್ರಾಮೀಣ ಭಾರತದಲ್ಲಿ ಬಡವರಿಗೆ ಮತ್ತು ನಿರ್ಗತಿಕರಿಗೆ ಸ್ವಲ್ಪ ಮಟ್ಟಿನ ಪರಿಹಾರ ಒದಗಿಸುವ ಮೊದಲ ಪ್ರಯತ್ನವಾಗಿ ಈ ಯೋಜನೆಯನ್ನು ಎಡ ಪಕ್ಷಗಳ ಒತ್ತಾಯದಿಂದಾಗಿ ಯುಪಿಎ-1 ಸರ್ಕಾರ ಜಾರಿಮಾಡಿತ್ತು. ಯುಪಿಎ-1 ಸರ್ಕಾರದ ಅಸ್ತಿತ್ವ ಎಡ ಪಕ್ಷಗಳ ಬೆಂಬಲದ (ಬಾಹ್ಯ ಬೆಂಬಲ) ಮೇಲೆ ನಿಂತಿದ್ದರಿಂದ ಈ ಯೋಜನೆಯನ್ನು ಜಾರಿಮಾಡುವುದು ಸರ್ಕಾರಕ್ಕೆ ಅನಿವಾರ್ಯವಾಗಿತ್ತು. ನಂತರ ಅಧಿಕಾರ ಹಿಡಿದ ಯುಪಿಎ-2 ಸರ್ಕಾರದ ಅವಧಿಯಲ್ಲೇ ಈ ಯೋಜನೆಯನ್ನು ದುರ್ಬಲಗೊಳಿಸಲಾಗಿತ್ತು. ಮೋದಿ ಸರ್ಕಾರವು ಅದನ್ನು ಜಾರಿ ಮಾಡಲಾರದ ಮಟ್ಟಕ್ಕೆ ಕ್ಷುಲ್ಲಕಗೊಳಿಸಿದೆ. ಅದರ ಗಂಭೀರ ಪರಿಣಾಮಗಳನ್ನು ಬಡವರು ಎದುರಿಸುತ್ತಿದ್ದಾರೆ. ಕೆಲಸ ಮಾಡಿದವರಿಗೆ ಕೊಡಬೇಕಿರುವ ಕೂಲಿಯ ಬಾಕಿ ಬೆಟ್ಟದಷ್ಟು ಎತ್ತರಕ್ಕೆ ಬೆಳೆದಿದೆ. ಅದರಿಂದಾಗಿ, ಯೋಜನೆಯಡಿಯಲ್ಲಿ ಹೆಸರು ದಾಖಲು ಮಾಡಿಕೊಳ್ಳುವ ಆಸಕ್ತಿಯನ್ನೇ ಬಡವರು ಕಳೆದುಕೊಂಡಿದ್ದಾರೆ.

ಅಸಹ್ಯ ಹುಟ್ಟಿಸುವ ಮಟ್ಟದಲ್ಲಿ ದೇಶದಲ್ಲಿ ಶೋಷಣೆ ಹೆಚ್ಚುತ್ತಿರುವ ಲಕ್ಷಣವನ್ನು ಈ ಪರಿಸ್ಥಿತಿ ಸೂಚಿಸುತ್ತದೆ. ವ್ಯಕ್ತಿ ವ್ಯಕ್ತಿಗಳ ನಡುವೆ ವರಮಾನಗಳ ಅಸಮಾನತೆ ಮತ್ತು ಸಂಪತ್ತಿನ ಅಸಮಾನತೆಗಳು ಹಿಂದೆಂದೂ ಇಲ್ಲದಷ್ಟು ಎತ್ತರದಲ್ಲಿವೆ. ಬಡವರಿಗೆ ಮತ್ತು ನಿರ್ಗತಿಕರಿಗೆ ಅಲ್ಪ ಸ್ವಲ್ಪ ಪರಿಹಾರ ಒದಗಿಸುತ್ತಿದ್ದ ಯೋಜನೆಯನ್ನು ಹಂತ ಹಂತವಾಗಿ ಮುಗಿಸಲಾಗುತ್ತಿದೆ. ಅಶಕ್ತ ವೃದ್ಧರಿಗೆ ದೊರೆಯುವ ಮಾಸಾಶನ ನಂಬಲಾರದಷ್ಟು ಕಡಿಮೆ ಇದೆ. ತಿರುಪೆ ಎತ್ತುವುದನ್ನು ಅಪರಾಧೀಕರಣಗೊಳಿಸುವ ಮೂಲಕ ದಾರಿದ್ರ್ಯದ ಸಮಸ್ಯೆಯನ್ನು ಚಾಪೆ ಕೆಳಗೆ ತಳ್ಳಲಾಗಿದೆ. ಕೊನೆಯ ಪಕ್ಷ, ಮುನ್ನೂರು ವರ್ಷಗಳ ಹಿಂದೆ ಬಂಡವಾಳಶಾಹಿ ಇಂಗ್ಲೆಂಡ್ ನಿರ್ಗತಿಕರಿಗೆ ಒದಗಿಸಿದ್ದ ಪರಿಹಾರದ ರೀತಿಯ ವ್ಯವಸ್ಥೆ ಈ ವರೆಗೂ ಬಂದಿಲ್ಲ.

ಪರಿಹಾರ ಒದಗಿಸುವ ಮೂಲಕ ತಿರುಪೆಯಲ್ಲಿ ತೊಡಗದಂತೆ ನಿರ್ಗತಿಕರನ್ನು ತಡೆಯುವುದು ಸಂಬಂಧಪಟ್ಟವರಿಗೆ ಬೇಕಾಗಿಲ್ಲ. ಅವರ ದೃಷ್ಟಿಯಲ್ಲಿ, ನಿರ್ಗತಿಕರು ತಿರುಪೆಯಲ್ಲಿ ತೊಡಗಿ ನಗರಗಳ ಘನತೆ ಗೌರವಗಳಿಗೆ, ಅಂದ ಚೆಂದಗಳಿಗೆ ಅಡ್ಡಿಯಾಗುತ್ತಾರೆ. ನಗರಗಳನ್ನು ಹೊಲಗೆಡುಸುತ್ತಾರೆ. ನಿರ್ಗತಿಕರ ಮುಖ ನೋಡಿದರೆ ಕೆಲವರಿಗೆ ಮುಜುಗರವಾಗುತ್ತದೆ. ಆದ್ದರಿಂದ ನಿರ್ಗತಿಕರು ಯಾರ ಕಣ್ಣಿಗೂ ಬೀಳಬಾರದು ಎಂಬುದೇ ಇವರ ಕಾಳಜಿ. ನಿರ್ಗತಿಕರು ಬದುಕುಳಿಯುವ ಯಾವ ಅವಕಾಶವನ್ನೂ ಕಲ್ಪಿಸಿಲ್ಲ. ಅತ್ಯಂತ ಅವಮಾನಕರವಾಗಿದ್ದರೂ ಸರಿಯೇ, ತಿರುಪೆ ಮಾತ್ರ ಅವರಿಗೆ ಉಳಿದ ದಾರಿ. ತಿರುಪೆಯನ್ನು ಅಪರಾಧೀಕರಣಗೊಳಿಸುವ ಮೂಲಕ ಅವರು ತಿರುಪೆ ಎತ್ತದಂತೆ ತಡೆಯಲಾಗಿತ್ತು. ದೇಶದ ರಾಜಧಾನಿಯ ಈ ಮಾದರಿಯನ್ನು ಎಲ್ಲ ರಾಜ್ಯಗಳೂ ಅನುಸರಿಸಿದವು. ನಿರ್ಗತಿಕರಿಗೆ ನಿಲ್ಲಲು ನೆಲೆಯೇ ಇಲ್ಲ. ಟ್ಯೂಡರ್ ವಂಶದ ರಾಜರ ಆಳ್ವಿಕೆಯ ಇಂಗ್ಲೆಂಡ್‌ನಲ್ಲೂ ಕೆಲವು ಗೊತ್ತುಪಡಿಸಿದ ಜಾಗಗಳಲ್ಲಿ ತಿರುಪೆ ಎತ್ತುವ ಅವಕಾಶ ಕಲ್ಪಿಸಲಾಗಿತ್ತು. ಅಷ್ಟನ್ನಾದರೂ ಮಾಡಲು ಕೃಪೆ ತೋರದ ಇಪ್ಪತ್ತೊಂದನೇ ಶತಮಾನದ ಭಾರತದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದವರು, ಅತಿ ವೇಗದ ಬೆಳವಣಿಗೆ ಸಾಧಿಸುವುದರಲ್ಲಿ ನಾವು ಚೀನಾವನ್ನು ಹಿಂದಿಕ್ಕಿದ್ದೇವೆ ಎಂದು ಮಾಳಿಗೆ ಮೇಲೆ ನಿಂತು ಕೂಗುತ್ತಾರೆ.

ಈ ಸನ್ನಿವೇಶದಲ್ಲಿ, ರಾಜಧಾನಿಯಲ್ಲಿ ತಿರುಪೆ ಎತ್ತುವುದು ಅಪರಾಧವಲ್ಲ ಎನ್ನುವ ದಿಲ್ಲಿ ಹೈಕೋರ್ಟ್ ತೀರ್ಪು “ಸ್ವಾಗತಾರ್ಹ” ಎಂದು ಹೇಳುವುದು ಒಂದು ಅಣಕವಾಗಿ ಕಾಣುತ್ತದೆ. “ಸಮಾನ ನಾಗರಿಕರ ಸೋದರಿಕೆ”ಯ ಆಳ್ವಿಕೆಯ ಪ್ರತೀಕವಾಗಿರುವ ಪ್ರಜಾಪ್ರಭುತ್ವದಲ್ಲಿ ಅವಶ್ಯವಾಗಿ ಇರಲೇಬೇಕಾದ ಒಂದು ಲಕ್ಷಣ ಎಂದರೆ, ಅಲ್ಲಿ, ನಿರ್ಗತಿಕತನ ಇರಲೇ ಕೂಡದು. ಅಂತಹ ಪರಿಸ್ಥಿತಿ ನೆಲೆಗೊಳ್ಳಬೇಕಾದರೆ, ಎಲ್ಲರಿಗೂ “ಉದ್ಯೋಗದ ಹಕ್ಕು” ಇರುವಂತಹ ಶಾಸನ ಮಾಡಬೇಕಾಗುತ್ತದೆ. ಯಾರಿಗಾದರೂ ಉದ್ಯೋಗ ಒದಗಿಸಲು ಒಂದು ವೇಳೆ ಸರಕಾರ ವಿಫಲವಾದರೆ, ಅಂತಹ ವ್ಯಕ್ತಿಗೆ ಜೀವನಾಧಾರ ಮಟ್ಟದ ಕೂಲಿ ಕೊಡಬೇಕು.

ನಿರುದ್ಯೋಗಿಯಾಗಿ ಅಥವಾ ನಿರ್ಗತಿಕನಾಗಿ ಉಳಿಯುವುದು ವ್ಯಕ್ತಿಯ ತಪ್ಪಲ್ಲ. ಏಕೆಂದರೆ, ವ್ಯಕ್ತಿಯ ಇಡೀ ಸಾಮಾಜಿಕ ವ್ಯವಸ್ಥೆಯ ಮೂಲಾಂಶ. ಅವನಾಗಲಿ/ಅವಳಾಗಲಿ ಸಾಮಾಜಿಕ ವ್ಯವಸ್ಥೆಯಿಂದ ಹೊರಗುಳಿಯುವ ಆಯ್ಕೆ ಸಾಧ್ಯವೇ ಇಲ್ಲ. ಆದ್ದರಿಂದ, ಅವನ/ಅವಳ ನಿರ್ಗತಿಕತನದ ಹೊಣೆ ಸಮಾಜದ ಮೇಲಿರುತ್ತದೆ. ಸಾಮಾಜಿಕ ವ್ಯವಸ್ಥೆಯ ಪರವಾಗಿ, ಅದರ ಉಸ್ತುವಾರಿ ವಹಿಸಿಕೊಂಡಿರುವ ಪ್ರಭುತ್ವವು ಪ್ರತಿಯೊಬ್ಬ ವ್ಯಕ್ತಿಗೂ ಉದ್ಯೋಗ ಒದಗಿಸಬೇಕು. ತಪ್ಪಿದರೆ, ಜೀವನಾಧಾರ ಮಟ್ಟದ ಕೂಲಿ ಕೊಡಬೇಕು. ಈ ಬೀಜರೂಪದ ವಿಚಾರವನ್ನು ನಮ್ಮ ಸಮಾಜದಲ್ಲಿ ಬಿತ್ತಬೇಕು.

ಎಲ್ಲರಿಗೂ ಉದ್ಯೋಗ ಒದಗಿಸುವ ಸಾಮಾಜಿಕ ಹೊಣೆಗಾರಿಕೆಯನ್ನು ನಮ್ಮ ಇಂದಿನ ಸಾಮಾಜಿಕ ಏರ್ಪಾಡುಗಳು ಮಾನ್ಯಮಾಡುವುದಿಲ್ಲ, ಆದ್ದರಿಂದ, ಇದನ್ನು ಕಾರ್ಯರೂಪಕ್ಕೆ ತರಲಾಗದು ಎಂದು ಹೇಳುವುದು, ವಿಚಾರಗಳನ್ನು ತಲೆ-ಕೆಳಗೆ ಮಾಡಿದಂತಾಗುತ್ತದೆ. ಸಾಮಾಜಿಕ ಏರ್ಪಾಡುಗಳು ಬಯಕೆಗಳಿಗೆ ತಕ್ಕಂತೆ ಹೊಂದಿಕೊಳ್ಳುವ ಅವಶ್ಯಕತೆ ಜನರಿಗಿಲ್ಲ. ಜನರ ಅಗತ್ಯಗಳಿಗೆ ತಕ್ಕಂತೆ ಹೊಂದಿಕೊಳ್ಳುವ ಅವಶ್ಯಕತೆ ಸಾಮಾಜಿಕ ಏರ್ಪಾಡುಗಳಿಗಿರುತ್ತದೆ. ಪ್ರಜಾಪ್ರಭುತ್ವವು ಹಾನಿಗೊಳಗಾಗಿರುವ ಸಧ್ಯದ ಪರಿಸ್ಥಿತಿಯಲ್ಲಿ, ಹಿಂದುತ್ವ ಶಕ್ತಿಗಳ ಹಲ್ಲೆಯಿಂದ ಕಾಪಾಡಿ ಅದನ್ನು ಮರು ಚೈತನ್ಯಗೊಳಿಸುವ ಕರ್ತವ್ಯದಲ್ಲಿ ನಿರತರಾಗಿರುವ ಪರಿಸ್ಥಿತಿಯಲ್ಲಿ, ಆ ಮರು ಚೈತನ್ಯಗೊಳಿಸುವಿಕೆಯ ಭಾಗವಾಗಿ, ಎಲ್ಲರಿಗೂ ಉದ್ಯೋಗದ ಹಕ್ಕಿನ ಅಂಶವನ್ನು ರಾಜಕೀಯ ಅಜೆಂಡಾದಲ್ಲಿಡಲು ಇದುವೇ ಸರಿಯಾದ ಸಮಯ.

ಮಹಾರಾಷ್ಟ್ರ ಎಟಿಎಸ್ ನಿಂದಲೂ ಮೂವರು ಶಂಕಿತ ಹಿಂದುತ್ವ ಉಗ್ರರ ಬಂಧನ



ಸಿಮಿ, ಝಕೀರ್ ನಾಯಕ್ ನಿಷೇಧಿಸಿದಂತೆ 'ಸನಾತನ್ ಸಂಸ್ಥಾ'ವನ್ನೂ ನಿಷೇಧಿಸುತ್ತಿಲ್ಲವೇಕೆ?–ಪತ್ರಕರ್ತ ನಿಖಿಲ್ ವಾಗ್ಲೆ

ಮಹಾರಾಷ್ಟ್ರದ ಭಯೋತ್ಪಾದನೆ–ನಿರೋಧಕ ತಂಡ ಅಥವ ಎಟಿಎಸ್ ಮುಂಬೈಯ ಒಂದು ಮಧ್ಯಮವರ್ಗದ ಮನೆಗೆ ದಾಳಿಮಾಡಿ ಗೋವಾದ ಸನಾತನ ಸಂಸ್ಥಾಕ್ಕೆ ಸೇರಿದವನೆನ್ನಲಾದ ವೈಭವ್ ರಾವುತ್ ಎಂಬಾತನನ್ನು ಬಂಧಿಸಿದ್ದಾರೆ. ಆತನ ಮನೆಯಿಂದ 8 ಬಾಂಬುಗಳು, ಗನ್ ಪೌಡರ್, ಸ್ಫೋಟಕಗಳನ್ನು ವಶಪಡಿಸಿಕೊಂಡಿದ್ದಾರೆ ಎಂದು ವರದಿಯಾಗಿದೆ. ಎಟಿಎಸ್ ಇನ್ನೂ ಇಬ್ಬರನ್ನು ಬಂಧಿಸಿದೆ ಎನ್ನಲಾಗಿದೆ. ಇವರೆಲ್ಲರೂ ಶಂಕಿತ ಹಿಂದುತ್ವ ಉಗ್ರರು.

ನರೇಂದ್ರ ಧಭೋಲ್ಕರ್ ಕೊಲೆಯಾಗಿ 5 ವರ್ಷ ಗಳಾಗುತ್ತಿವೆ(ಆಗಸ್ಟ್20,2013). ನಂತರ ಗೋವಿಂದ ಪನ್ಸರೆ ಕೊಲೆಯಾಯಿತು. ಆದರೆ ಕೊಲೆಗಡುಕರನ್ನು ಪತ್ತೆ ಹಚ್ಚಲು ಮಹಾರಾಷ್ಟ್ರದ ಪೋಲಿಸರಿಗೆ ಇನ್ನೂ ಆಗಿಲ್ಲ. ಮುಂಬೈ ಹೈಕೋರ್ಟ್ ಮಹಾರಾಷ್ಟ್ರ ಸರಕಾರವನ್ನು ಮತ್ತು ಪೋಲಿಸರನ್ನು ತರಾಟೆಗೆ ತೆಗೊಂಡು ತನ್ನ ಉಸ್ತುವಾರಿಯಲ್ಲಿ ತನಿಖೆ ಆರಂಭಿಸಿದ ನಂತರ ಮೊದಲ ಬಾರಿಗೆ ಎಟಿಎಸ್ ತಂಡ ಈಗ ಈ ಮೂವರು ಶಂಕಿತ ಹಿಂದುತ್ವ ಉಗ್ರರನ್ನು ಬಂಧಿಸಿದಂತಾಗಿದೆ. ಇವರು ಸ್ವಾತಂತ್ರ್ಯ ದಿನ, ಈದ್ ಮತ್ತು ಮರಾಠಾ ಚಳುವಳಿ ಹಿನ್ನೆಲೆಯಲ್ಲಿ ಪಿತೂರಿಗಳನ್ನು ನಡೆಸಿದ್ದಾರೆ ಎಂದು ಎಟಿಎಸ್ ಶಂಕೆಪಡುತ್ತಿದೆಯಂತೆ.

ಹಿಂದುತ್ವದ ಮಂದಿ 'ಜಿಹಾದೀ ಭಯೋತ್ಪಾದಕರು' ಎನ್ನುವವರು ಮಾತ್ರವಲ್ಲ, ಸ್ವತಃ ಅವರದ್ದೇ ಆದ 'ಹಿಂದುತ್ವ ಉಗ್ರರು/ಭಯೋತ್ಪಾದಕರು'ಎಂಬವರೂ ಇದ್ದಾರೆ ಅವರು ಮದ್ದುಗುಂಡುಗಳನ್ನು ಸಂಗ್ರಹಿಸಿದ್ದಾರೆ, ಕೊಲೆ/ಭಯೋತ್ಪಾದನೆ ಪಿತೂರಿಗಳನ್ನು ನಡೆಸುತ್ತಿದ್ದಾರೆ ಎಂಬ ಸುದ್ದಿಯೇನೂ ತಮಗೆ ಆಶ್ಚರ್ಯ ತಂದಿಲ್ಲ, ಆದರೆ ಅವರನ್ನು ಹಾಡುಹಗಲೇ ಬಂಧಿಸುವ ಧೈರ್ಯವನ್ನು ಮಹಾರಾಷ್ಟ್ರದ ಎಟಿಎಸ್ ತಂಡ ತೋರಿಸಿದೆಯೆಂಬುದು ಆಶ್ಚರ್ಯದ ಸಂಗತಿ ಎನ್ನುತ್ತಾರೆ ಮಹಾರಾಷ್ಟ್ರದ ಪ್ರಖ್ಯಾತ ಪತ್ರಕರ್ತ ನಿಖಿಲ್ ವಾಗ್ಲೆ. ಇವರು ಈಗಾಗಲೇ ಸಂಘ ಪರಿವಾರದ ಕೆಂಗಣ್ಣಿಗೆ ಗುರಿಯಾಗಿರುವ ಬುದ್ಧಿಜೀವಿಗಳ ಪಟ್ಟಿ ಸೇರಿದ್ದಾರೆ ಎಂಬುದನ್ನು ಇಲ್ಲಿ ಗಮನಿಸಬಹುದು.

ಕರ್ನಾಟಕ ಎಸ್‌ಐಟಿ ಈ ಸರಣಿಯಲ್ಲಿ ನಾಲ್ಕನೆಯದಾದ ಗೌರಿ ಲಂಕೇಶ್‌ರವರ ಕೊಲೆಯ ಸಂಬಂಧ 12 ಶಂಕಿತ ಹಿಂದುತ್ವ ಉಗ್ರರನ್ನು ಬಂಧಿಸಿದ ನಂತರ ಮಹಾರಾಷ್ಟ್ರದ ಎಟಿಎಸ್ ಮೂವರು ಹಿಂದುತ್ವ ಉಗ್ರರನ್ನು ಬಂಧಿಸಿರುವ ಈ ಸುದ್ದಿ ಬರುತ್ತಿದೆ ಎಂದೂ ನಿಖಿಲ್ ವಾಗ್ಲೆ ನೆನಪಿಸುತ್ತಾರೆ.

ವೈಭವ್ ರಾವುತ್ ತಮ್ಮ ಸದಸ್ಯ ಅಲ್ಲ ಎಂದು ಸನಾತನ ಸಂಸ್ಥಾ ಹೇಳಿದೆ, ಆತ ಹಿಂದೂ ಜನಜಾಗೃತಿ ಸಮಿತಿ(ಹೆಚ್‌ಜೆಎಸ್) ಸದಸ್ಯ ಎಂದು ಹೇಳುತ್ತಲೇ ಆತನ ಪರವಾಗಿ ಕಾನೂನು ಸಮರ ನಡೆಸಲು ತಾವು ಸಿದ್ಧ ಎಂದೂ ತಿಳಿಸಿದೆ ಎಂಬ ಸಂಗತಿಯತ್ತ ಗಮನ ಸೆಳೆಯುವ ನಿಖಿಲ್ ವಾಗ್ಲೆ ಹೆಚ್‌ಜೆಎಸ್ ಎಲ್ಲ ಹಿಂದುತ್ವ ಉಗ್ರ ಸಂಘಟನೆಗಳಿಗೆ ಕೊಡೆಯಿದ್ದಂತೆ, ಸನಾತನ ಸಂಸ್ಥಾ, ರಾಮಸೇನೆ, ಹಿಂದೂ ರಾಷ್ಟ್ರ ಸೇನಾ ಇತ್ಯಾದಿಗಳು ಹೆಚ್‌ಜೆಎಸ್‌ನ ಪೋಷಣೆಗೆ ಒಳಗಾದವುಗಳು ಎನ್ನುತ್ತಾರೆ.

ಗೋವಾದಿಂದ ಕಾರ್ಯಾಚರಿಸುವ ಸನಾತನ ಸಂಸ್ಥಾ ಒಂದು ಉಗ್ರ/ಭಯೋತ್ಪಾದಕ ಸಂಘಟನೆ, ಇದರ ಇಬ್ಬರು ಸದಸ್ಯರು ಈ ಹಿಂದೆ ಮಡಗಾಂವ್ ಮತ್ತು ಥಾಣೆ ಸ್ಫೋಟಗಳ ಮೊಕದ್ದಮೆಗಳಲ್ಲಿ ಶಿಕ್ಷೆಗೆ ಒಳಗಾದವರು, ಸದ್ಯ ಜಾಮೀನಿನಲ್ಲಿ ಹೊರಗಿದ್ದಾರೆ. ದಭೋಲ್ಕರ್ ಮತ್ತು ಪನ್ಸರೆ ಕೊಲೆಗಳಲ್ಲಿ ಈ ಸಂಸ್ಥಾದ ಸದಸ್ಯರೇ ಶಂಕಿತರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಇವರಿಬ್ಬರ ಕೊಲೆಗಳ ಮೊದಲೇ ಈ ಸಂಸ್ಥಾದ ವೆಬ್‌ಸೈಟಿನಲ್ಲಿ ಅವರ ಫೋಟೋಗಳ ಮೇಲೆ x ಚಿಹ್ನೆಯೇ ಇದಕ್ಕೆ ಸಾಕ್ಷಿ ಎನ್ನುತ್ತಾರೆ ನಿಖಿಲ್ ವಾಗ್ಲೆ. ಆದರೆ ಮಹಾರಾಷ್ಟ್ರದ ಈಗಿನ ಎಟಿಎಸ್‌ಗೆ ಇನ್ನೂ ಇವರನ್ನು ಪತ್ತೆ ಹಚ್ಚಲಾಗಿಲ್ಲ.

ಈಗ ಕಲ್ಬುರ್ಗಿಯವರು ಮತ್ತು ಗೌರಿ ಲಂಕೇಶ್ ಕೊಲೆಗೂ ಈ ಸಂಸ್ಥಾಕ್ಕೂ ಇರುವ ಕೊಂಡಿ ಕರ್ನಾಟಕದ ಎಸ್‌ಐಟಿ ತನಿಖೆಯಿಂದ ಸ್ಪಷ್ಟಗೊಳ್ಳುತ್ತಿದೆ.

ಭಾರತ ಸರಕಾರ 'ಸಿಮಿ'ಯನ್ನು, ಝಕೀರ್ ನಾಯಕ್‌ನ್ನು ನಿಷೇಧಿಸಬಹುದಾದರೆ ಅದೇ ಕಾನೂನು–ಸುವ್ಯವಸ್ಥೆಗಾಗಿ ಈ 'ಸನಾತನ್ ಸಂಸ್ಥಾ'ವನ್ನು ಏಕೆ ನಿಷೇಧಿಸಬಾರದು ಎಂದು ವಾಗ್ಲೆ ಪ್ರಶ್ನಿಸುತ್ತಾರೆ. .

2011ರಲ್ಲಿ ಮಹಾರಾಷ್ಟ್ರ ಎಟಿಎಸ್ ಈ ಸಂಸ್ಥಾದ ಬಗ್ಗೆ ವಿವರವಾದ ವರದಿಯನ್ನು ತಯಾರಿಸಿ ಆಗಿನ ಮಹಾರಾಷ್ಟ್ರ ಮುಖ್ಯಮಂತ್ರಿಗಳಿಗೆ ಕಳಿಸಿತ್ತಂತೆ. ಅದನ್ನು ಅವರು ಆಗ ಆಳ್ವಿಕೆ ನಡೆಸುತ್ತಿದ್ದ ಯುಪಿಎ–2 ಕೇಂದ್ರ ಸರಕಾರಕ್ಕೆ ಈ ಸಂಸ್ಥಾವನ್ನು ನಿಷೇಧಿಸಬೇಕೆಂಬ ಶಿಫಾರಸಿನೊಂದಿಗೆ ಕಳಿಸಿದರು. ಆಗಿನ ಕೇಂದ್ರ ಸರಕಾರ ನಿರ್ಧಾರ ಕೈಗೊಳ್ಳಲಿಲ್ಲ. 2014ರಲ್ಲಿ ಮೋದಿ ಸರಕಾರ ಬಂದ ಮೇಲಂತೂ ಈ ಬಗ್ಗೆ ನಿರೀಕ್ಷೆ ಇಟ್ಟುಕೊಳ್ಳುವಂತಿರಲಿಲ್ಲ. ಏಕೆಂದರೆ 2013ರಲ್ಲಿ ಸ್ವತಃ ಮೋದಿಯವರೇ ಈ ಸಂಸ್ಥಾ ಪ್ರತಿವರ್ಷ ಗೋವಾದಲ್ಲಿ ನಡೆಸುವ ಹಿಂದು ಜನಜಾಗೃತಿ ಸಮ್ಮೇಳನಕ್ಕೆ ಶುಭಾಶಯ ಕಳಿಸಿದ್ದರು. ಅಲ್ಲದೆ ಈ ಮೊದಲು ಹಿಂದುತ್ವ ಭಯೋತ್ಪಾದನೆಯ ತನಿಖೆ ನಡೆಸುವಲ್ಲಿ ಅಪಾರ ಧೈರ್ಯ ತೋರಿದ್ದ ಮಹಾರಾಷ್ಟ್ರ ಎಟಿಎಸ್ ನ ಹಿಂದಿನ ಮುಖ್ಯಸ್ಥ ಹೇಮಂತ ಕರ್ಕರೆಯವರು ಮಲೆಗಾಂವ್, ಮಕ್ಕಾ–ಮಸೀದಿ ಮತ್ತು ಸಮಝೌತ ಎಕ್ಸ್‌ಪ್ರೆಸ್ ಸ್ಫೋಟಗಳ ತನಿಖೆಗಳಲ್ಲಿ ಕಲೆ ಹಾಕಿದ ಮಾಹಿತಿಗಳನ್ನು ತಲೆಕೆಳಗು ಮಾಡಿ ಶಂಕಿತ ಆರೋಪಿಗಳು ಒಬ್ಬೊಬ್ಬರಾಗಿ ಬಿಡುಗಡೆ ಪಡೆದಿರುವುದು ಅವರ ಆಳ್ವಿಕೆಯಲ್ಲೇ ತಾನೇ ಎಂದೂ ನಿಖಿಲ್ ವಾಗ್ಲೆ ನೆನಪಿಸುತ್ತಾರೆ.

ಹಾಪುರ್ ಲಿಂಚಿಂಗ್ ಘಟನೆ: ಉತ್ತರಪ್ರದೇಶ ಸರಕಾರಕ್ಕೆ ಸುಪ್ರಿಂ ಕೋರ್ಟ್ ನೋಟೀಸ್

ಜೂನ್ 18 ರಂದು ಉತ್ತರಪ್ರದೇಶದ ಹಾಪುರ್‌ನಲ್ಲಿ ಇಬ್ಬರನ್ನು ಹೊಡೆದು ಸಾಯಿಸಲಾಯಿತು ಎಂಬ ವರದಿ ಈ ಹಿಂದೆ ಬಂದಿತ್ತು. 64 ವರ್ಷದ ಸಮಿಯುದ್ದೀನ್ ಮತ್ತು 45 ವರ್ಷದ ಮಾಂಸದ ವ್ಯಾಪಾರಿ ಕಾಸಿಂ ಖುರೇಶಿ ಗೋವಧೆಯಲ್ಲಿ ತೊಡಗಿದ್ದಾರೆ ಎಂದು ಒಂದು ಜನಜಂಗುಳಿ ಸಿಕ್ಕಾಪಟ್ಟೆ ಥಳಿಸಿತು. ಸಮಿಯುದ್ದೀನ್ ತೀವ್ರವಾಗಿ ಗಾಯಗೊಂಡರು. ಖುರೇಶಿ ನಂತರ ಸತ್ತರು.

ಪೋಲಿಸ್ ಇದನ್ನು ಸಾಯ ಬಡಿದ ಪ್ರಕರಣ ಎಂದು ದಾಖಲು ಮಾಡದೆ ರಸ್ತೆಯಲ್ಲಿ ವಾಹನ ಚಾಲಕರ ನಡುವಿನ ಹೊಡೆದಾಟ ಎಂದು ದಾಖಲು ಮಾಡಿಕೊಂಡು ಈ ಪ್ರಕರಣದಲ್ಲಿ ಬಂಧಿತರಿಗೆ ಜಾಮೀನು ದೊರೆಯಿತು.

ಆದರೆ ಈ ಜಾಮೀನು ಪಡೆದವರಲ್ಲಿ ಪ್ರಮುಖ ವ್ಯಕ್ತಿ ಒಂದು ಕುಟುಕು ಕಾರ್ಯಾಚರಣೆಯಲ್ಲಿ ಸಿಕ್ಕಿಬಿದ್ದ. ತಾವೇ ಎಲ್ಲರೂ ಸೇರಿ ಈ ಕೊಲೆ ಮಾಡಿದ್ದು ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿರುವ ವೀಡಿಯೋವನ್ನು ಎನ್‌ಡಿಟಿವಿ ತನ್ನ ತನಿಖೆಯೊಂದಿಗೆ ಪ್ರಸಾರ ಮಾಡಿತು.

ಇದರ ಆಧಾರದಲ್ಲಿ ಸಮಿಯುದ್ದೀನ್ ವಕೀಲರು ಈ ಬಗ್ಗೆ 'ತುರ್ತು ವಿಚಾರಣೆ' ನಡೆಯಬೇಕೆಂದು ಕೋರಿ ಮತ್ತು ಈ ಪ್ರಕರಣದ ಬಗ್ಗೆ ಒಂದು ಸ್ವತಂತ್ರ ಎಸ್‌ಐಟಿಯಿಂದ ತನಿಖೆಯಾಗಬೇಕು, ಈ ತನಿಖೆ ಮತ್ತು ನಂತರ ಅದರ ವಿಚಾರಣೆಯನ್ನು ಉತ್ತರಪ್ರದೇಶ ರಾಜ್ಯದ ಹೊರಗೆ ವರ್ಗಾಯಿಸಬೇಕು ಹಾಗೂ ಸಮಿಯುದ್ದೀನ್‌ಗೆ ರಕ್ಷಣೆ ನೀಡಬೇಕು ಎಂದು ಸುಪ್ರಿಂ ಕೋರ್ಟಿಗೆ ಅರ್ಜಿ ಹಾಕಿದರು.

ಆಗಸ್ಟ್ 13 ರಂದು ಇದರ ವಿಚಾರಣೆಯನ್ನು ಕೈಗೆತ್ತಿಕೊಂಡ ಮುಖ್ಯ ನ್ಯಾಯಾಧೀಶರ ನೇತೃತ್ವದ ಮೂವರು ನ್ಯಾಯಾಧೀಶರ ಪೀಠ ಈ ಬಗ್ಗೆ ತನಿಖೆ ನಡೆಸಿ ಎರಡು ವಾರಗಳ ಒಳಗೆ ವರದಿ ಸಲ್ಲಿಸಬೇಕು ಎಂದು ಮೀರತ್ ರೇಂಜಿನ ಐಜಿಯವರಿಗೆ ನಿರ್ದೇಶನ ನೀಡಿದೆ ಹಾಗೂ ಉತ್ತರಪ್ರದೇಶ ರಾಜ್ಯ ಸರಕಾರಕ್ಕೆ ಸಮಿಯುದ್ದೀನ್ ಕೋರಿಕೆಯ ಬಗ್ಗೆ ನೋಟೀಸ್ ಜಾರಿ ಮಾಡಿದೆ. ಮತ್ತು ಸಮಿಯುದ್ದೀನ್‌ಗೆ ಪೋಲಿಸ್ ರಕ್ಷಣೆ ನೀಡುವ ಬಗ್ಗೆ ಪರಿಶೀಲಿಸಬೇಕು ಎಂದು ಹಾಪುರ್ ಜಿಲ್ಲೆಯ ಪೋಲೀಸ್ ಸೂಪರಿಂಟೆಂಡೆಂಟ್‌ರಿಗೆ ನಿರ್ದೇಶನ ನೀಡಿದೆ.

ಕೇರಳಕ್ಕೆ ಅಪ್ಪಳಿಸಿರುವ ವಿಧ್ವಂಸಕಾರಿ ನೈಋತ್ಯ ಮನ್ಸೂನ್: ಅಂದಾಜು ನಷ್ಟ 8000 ಕೋಟಿ ರೂ.–ಕೇಂದ್ರದ ತುರ್ತು ಪರಿಹಾರ 100 ಕೋಟಿ ರೂ.!

ಕಳೆದ ಕೆಲವು ದಿನಗಳಿಂದ ನೈಋತ್ಯ ಮನ್ಸೂನ್ ಮಳೆ ಕೇರಳದಲ್ಲಿ ತಾಂಡವ ನಡೆಸಿದೆ. 1924ರಿಂದೀಚೆಗೆ ಎಂದೂ ಕಂಡಿರದ ಪ್ರವಾಹಕ್ಕೆ ಈಗಾಗಲೇ 265 ಜನ ಬಲಿಯಾಗಿದ್ದಾರೆ. 50ಸಾವಿರ ಮನೆಗಳು ನೆಲಸಮವಾಗಿವೆ ಹಾಗೂ ಒಂದೂವರೆ ಲಕ್ಷ ಮಂದಿ ಎಲ್‌ಡಿಎಫ್ ಸರಕಾರ ಏರ್ಪಡಿಸಿರುವ ಪರಿಹಾರ ಶಿಬಿರಗಳಲ್ಲಿ ಆಶ್ರಯ ಪಡೆದಿದ್ದಾರೆ. 10,000 ಕಿ.ಮೀ.ನಷ್ಟು ಸಾರ್ವಜನಿಕ ರಸ್ತೆಗಳು ಹಾನಿಗೊಳಗಾಗಿವೆ.

ರಾಜ್ಯ ಸರಕಾರ ಒಟ್ಟು ನಷ್ಟ 8316ಕೋಟಿ ರೂ. ಎಂದು ಲೆಕ್ಕ ಹಾಕಿದೆ. ಮಳೆಯ ಅಬ್ಬರ ಇನ್ನೂ ಕಡಿಮೆಯಾಗದಿರುವುದರಿಂದ ಇದು ಇನ್ನೂ ಹೆಚ್ಚಾಗಬಹುದು. ಆದರೂ ಈ ಆಧಾರದಲ್ಲಿ ಅದು ಕೇಂದ್ರ ಸರಕಾರದಿಂದ 1220 ಕೋಟಿ ರೂ. ತಕ್ಷಣದ ಪರಿಹಾರ ಕೇಳಿದೆ. ಆದರೆ ಪ್ರವಾಹ ಪರಿಸ್ಥಿತಿಯನ್ನು ಕೇಂದ್ರ ಗೃಹಮಂತ್ರಿಗಳು ಕಣ್ಣಾರೆ ಕಂಡು ಹೋದ ಮೇಲೆ ಕೇಂದ್ರ ಸರಕಾರ ಪ್ರಕಟಿಸಿರುವುದು ಕೇವಲ 100 ಕೋಟಿ ತಕ್ಷಣದ ನೆರವು. ವಾಸ್ತವವಾಗಿ ಈ ಮಳೆಗಾಲದ ಆರಂಭದಲ್ಲಿ ಆದ ನಷ್ಟಕ್ಕೆ ಈ ಮೊದಲೇ 160.50 ಕೋಟಿ ರೂ. ನೀಡುವುದಾಗಿ ಕೇಂದ್ರ ಸರಕಾರ ಹೇಳಿತ್ತು. ಈಗ ಪ್ರಕಟಿಸಿರುವ 100 ಕೋಟಿ ರೂ. ತುರ್ತು ಪರಿಹಾರ ಅದರ ಭಾಗವೋ, ಅಥವ ಈಗ ಎರಡನೇ ಹಂತದಲ್ಲಿ ಆಗಿರುವ ಹಾನಿಗಾಗಿಯೋ ಸ್ಪಷ್ಟವಾಗಿಲ್ಲ.

ಎನ್‌ಡಿಆರ್‌ಎಫ್(ರಾಷ್ಟ್ರೀಯ ಅನಾಹುತ ಪರಿಹಾರ ನಿಧಿ) ಮಾರ್ಗದರ್ಶಕ ಸೂತ್ರಗಳಂತೆ 820 ಕೋಟಿ ರೂ.ಗಳನ್ನು ರಾಜ್ಯ ಸರಕಾರಕ್ಕೆ ಒದಗಿಸಬೇಕು ಎಂದು ಕೇಂದ್ರದಿಂದ ಬಂದ ತಂಡ ತನ್ನ ಪರೀಕ್ಷಣೆಯ ನಂತರ ಶಿಫಾರಸು ಮಾಡಿರುವುದಾಗಿ ತಿಳಿದು ಬಂದಿದೆ. ಈ ಎರಡನೇ ಹಂತದ ವಿನಾಶದ ನಂತರ ಕೇಂದ್ರದ ಇನ್ನೊಂದು ತಂಡ ಬಂದು ಹಾನಿಯ ಅಂದಾಜು ಮಾಡಬೇಕು ಎಂದು ಕೇರಳ ಮುಖ್ಯಮಂತ್ರಿಗಳು ಕೋರಿದ್ದಾರೆ.

ಎಲ್‌ಡಿಎಫ್ ಸರಕಾರದ ಅಡಿಯಲ್ಲಿ ರಾಜ್ಯ ಸರಕಾರೀ ಯಂತ್ರ ಮತ್ತು ಪ್ರತಿಪಕ್ಷಗಳ ಸಹಕಾರದಿಂದ ಜನಗಳ ಜೀವರಕ್ಷಣೆಗೆ ಸಕಲ ಪ್ರಯತ್ನಗಳೂ ನಡೆದಿವೆ. ಸಶಸ್ತ್ರ ಪಡೆಗಳು ಮತ್ತು ಇತರ ಕೇಂದ್ರೀಯ ಪಡೆಗಳ ನೆರವೂ ಬಂದಿದೆ. ಆದರೆ ಹಣಕಾಸು ನೆರವಿನ ವಿಷಯದಲ್ಲಿ ಕೇಂದ್ರ ಸರಕಾರ ಈಗಲೂ ಪಕ್ಷಪಾತ ತೋರುತ್ತಿರುವಂತೆ ಕಾಣುತ್ತಿದೆ.

ಕಳೆದ ಡಿಸೆಂಬರ್ 2017ರಲ್ಲಿ ಓಖ್ಖಿ ಸುಂಟರಗಾಳಿಯ ಸಂದರ್ಭದಲ್ಲಿ ಅತಿ ಹೆಚ್ಚು ಹಾನಿಗೊಳಗಾದ ಕೇರಳ ಮತ್ತು ತಮಿಳುನಾಡನ್ನು ಅದು ನಿರ್ಲಕ್ಷಿಸಿತ್ತು. ಕೇರಳ ಎನ್‌ಡಿಆರ್‌ಎಫ್‌ನಿಂದ 422 ಕೋಟಿ ರೂ.ಕೇಳಿದ್ದರೆ, ಕೊಟ್ಟದ್ದು 133 ಕೋಟಿ ರೂ. ಮಾತ್ರ. ಅಲ್ಲದೆ ಕೇರಳ ಸರಕಾರ 7340 ಕೋಟಿ ರೂ. ಮರುವಸತಿ ಮೊತ್ತ ಕೇಳಿತ್ತು. ಅದನ್ನು ನಿರ್ಲಕ್ಷಿಸಲಾಯಿತು. ಆದರೆ ಅದೇ ಸುಂಟರಗಾಳಿ ಗುಜರಾತ್ ತಲುಪುವ ವೇಳೆ ದುರ್ಬಲಗೊಂಡು ಅಲ್ಲಿ ಅಷ್ಟೇನೂ ಹಾನಿಯಾಗದಿದ್ದರೂ ಆ ರಾಜ್ಯಕ್ಕೆ 1055 ಕೋಟಿ ರೂ. ಪ್ರವಾಹ ಪರಿಹಾರವಾಗಿ ಕೊಡಲಾಗಿತ್ತು.

ಈಗ ಕೇರಳ ಎದುರಿಸುತ್ತಿರುವ ಭಾರೀ ದೊಡ್ಡ ಹಾನಿಯ ಸಂದರ್ಭದಲ್ಲಿಯೂ ಇದೇ ರಾಜಕೀಯ ಪಕ್ಷಪಾತ ಮುಂದುವರೆಯುತ್ತದೆಯೇ ಎಂಬ ಆತಂಕ ಉಂಟಾಗಿದೆ.

ನಗರವಾಸಿ ಜನಸಮೂಹಗಳ ಸಮಸ್ಯೆಗಳ ಮೇಲೆ ಬೃಹತ್ ಹೋರಾಟಕ್ಕೆ ಪಂಜಾಬ್ ಸಿಪಿಐ(ಎಂ) ಸಿದ್ಧತೆ

ಅಕ್ಟೋಬರ್ ತಿಂಗಳ ಕೊನೇ ವಾರದಲ್ಲಿ ಪಂಜಾಬಿನ ಎಲ್ಲ ನಗರಗಳಲ್ಲಿ ಜನಗಳ ಜ್ವಲಂತ ಸಮಸ್ಯೆಗಳ ಮೇಲೆ ಒಂದು ಬೃಹತ್ ಹೋರಾಟ ಸಂಘಟಿಸಲು ಸಿಪಿಐ(ಎಂ) ಪಂಜಾಬ್ ರಾಜ್ಯಸಮಿತಿ ನಿರ್ಧರಿಸಿದೆ.

ಇದಕ್ಕೆ ಸಿದ್ಧತೆಯಾಗಿ ಚಂಡೀಗಢದಲ್ಲಿ ಆಗಸ್ಟ್ 12 ರಂದು ಪ್ರಮುಖ ಕಾರ್ಯಕರ್ತರ ಒಂದು ರಾಜ್ಯ ಮಟ್ಟದ ಸಭೆ ನಡೆಯಿತು. ಇದರಲ್ಲಿ ಎಲ್ಲ ಜಿಲ್ಲೆಗಳಿಂದ ಬಂದ 65 ಜಿಲ್ಲಾ ಮುಖಂಡರುಗಳು ಭಾಗವಹಿಸಿದರು.

ಸಭೆಯನ್ನುದ್ದೇಶಿಸಿ ರಾಜ್ಯ ಕಾರ್ಯದರ್ಶಿ ಸುಖ್ವಿಂದರ್‌ಸಿಂಗ್ ಸೆಖೋನ್, ಕಾರ್ಯದರ್ಶಿ ಮಂಡಳಿ ಸದಸ್ಯರಾದ ಲೆಂಬರ್‌ಸಿಂಗ್ ಟಗ್ಗರ್ ಮತ್ತು ರಘುನಾಥ್ ಸಿಂಗ್ ಮಾತಾಡಿದರು. ರಾಜ್ಯ ಕಾರ್ಯದರ್ಶಿಗಳು ನಗರವಾಸಿಗಳ ಶಿಕ್ಷಣ, ಆರೋಗ್ಯ, ವಿದ್ಯುತ್, ಕುಡಿಯುವ ನೀರು, ಚರಂಡಿ ವ್ಯವಸ್ಥೆ ಮತ್ತು ಅಭಿವೃದ್ಧಿಯ ಪ್ರಶ್ನೆಗಳ ಮೇಲೆ ಹೋರಾಟಕ್ಕೆ ಸ್ಥಳೀಯ ಸಮಿತಿಗಳನ್ನು ರಚಿಸಲಾಗುವುದು ಎಂದರು.

ನಗರ ವ್ಯವಹಾರಗಳನ್ನು ಕುರಿತಂತೆ ಒಂದು ರಾಜ್ಯಮಟ್ಟದ ಸಮಿತಿಯನ್ನು ರಚಿಸಲಾಯಿತು. ಸೂಚಾಸಿಂಗ್ ಅಜನಾಲ ಮತ್ತು ಆರ್.ಎಲ್.ಮೌದ್ಗಿಲ್ ಇದರ ಸಂಯೋಜಕರಾಗಿ ಆಯ್ಕೆಯಾದರು. ಈ ಸಮಿತಿಯ ನೇತೃತ್ವದಲ್ಲಿ ನಗರವಾಸಿಗಳ ಹೋರಾಟಗಳನ್ನು ಸಂಘಟಿಸಲು ನಿರ್ಧರಿಸಲಾಗಿದೆ.

ಉಮರ್ ಖಾಲಿದ್ ಹತ್ಯೆ ಪ್ರಯತ್ನ: ಎಸ್‌ಎಫ್‌ಐ ಖಂಡನೆ

ಆಗಸ್ಟ್ 13 ರಂದು ದಿಲ್ಲಿಯಲ್ಲಿ ಸಂಸತ್ತಿನ ಬಳಿಯೇ ಇರುವ ಕನ್ಸ್ಟಿಟ್ಯೂಶನ್ ಕ್ಲಬ್ ಸಮೀಪ ಜೆಎನ್‌ಯು ವಿದ್ಯಾರ್ಥಿ ಚಳುವಳಿಯ ಒಬ್ಬ ಮುಖಂಡರಾದ ಉಮರ್ ಖಾಲಿದ್ ಮೇಲೆ ಹಲ್ಲೆ ನಡೆದಿರುವುದನ್ನು ಎಸ್‌ಎಫ್‌ಐ ಖಂಡಿಸಿದೆ. ಒಬ್ಬ ಅಪರಿಚಿತ ಬಂದೂಕುಧಾರಿ ವ್ಯಕ್ತಿ ಖಾಲಿದ್ ಮೇಲೆ ಗುಂಡು ಹಾರಿಸಲು ಪ್ರಯತ್ನಿಸಿದ ಎಂದು ಅದನ್ನು ಕಣ್ಣಾರೆ ಕಂಡವರು ಹೇಳಿರುವುದಾಗಿ ವರದಿಯಾಗಿದೆ. ಜನಗಳ ಪ್ರತಿರೋಧದಿಂದಾಗಿ ಓಡಿ ಹೋದ ಆತ ದೂರದಿಂದ ಗುಂಡು ಹಾರಿಸಿದ.

ಉಮರ್ ಖಾಲೀದ್‌ಗೆ ದೈಹಿಕ ತೊಂದರೆಯೇನೂ ಆಗಿಲ್ಲ. ಆದರೆ ಇಂತಹ ಭಾರೀ ಪೋಲೀಸ್ ಕಣ್ಗಾವಲು ಇರುವ ಈ ಪ್ರದೇಶದಲ್ಲಿ ಇಂತಹ ಪ್ರಯತ್ನ ನಡೆಯಲು ಸಾಧ್ಯವಾಗಿರುವುದು ದಿಲ್ಲಿ ಪೋಲೀಸರ ನಿರ್ಲಕ್ಷ್ಯದಿಂದಾಗಿಯೇ ಎಂದು ಎಸ್‌ಎಫ್‌ಐ ಬಲವಾಗಿ ಖಂಡಿಸಿದೆ. ಇದಕ್ಕೆ ಹಿಂದಿನ ದಿನ ಭಾರತೀಯ ಸಂವಿಧಾನದ ಪ್ರತಿಕೃತಿಯನ್ನು ಒಂದು ಬಲಪಂಥೀಯ ಹಿಂದೂ ಗುಂಪಿನ ಸದಸ್ಯರು ಬಹಿರಂಗವಾಗಿ ಸುಡುತ್ತಿದ್ದಾಗಲೂ ದಿಲ್ಲಿ ಪೋಲೀಸರು ಮೂಕಪ್ರೇಕ್ಷಕರಾದ್ದರು.

ಎರಡು ವರ್ಷಗಳ ಹಿಂದೆ ಜೆಎನ್‌ಯು ವಿದ್ಯಾರ್ಥಿಗಳ ಪ್ರತಿಭಟನಾ ಮೆರವಣಿಗೆಯನ್ನು ತಡೆಯುವಲ್ಲಿ ಬಹಳ ಸಕ್ರಿಯರಾಗಿದ್ದ ಪೋಲೀಸರು ಇಂದು ನಿಷ್ಕ್ರಿಯರಾಗಿದ್ದಾರೆ ಎಂದು ಖಂಡಿಸಿರುವ ಎಸ್‌ಎಫ್‌ಐ ಕೇಂದ್ರೀಯ ಕಾರ್ಯಕಾರಿ ಸಮಿತಿ ತಕ್ಷಣವೇ ತಪ್ಪಿತಸ್ಥರನ್ನು ಬಂಧಿಸಬೇಕು, ಮತ್ತು ಉಮರ್ ಖಾಲಿದ್ ಮತ್ತಿತರರಿಗೆ ಪೂರ್ಣ ರಕ್ಷಣೆ ಒದಗಿಸಬೇಕು ಎಂದು ಆಗ್ರಹಿಸಿದೆ.

ನ್ಯೂಯಾರ್ಕ್ ಡೆಮಾಕ್ರಟಿಕ್ ಪ್ರಾಥಮಿಕ ಚುನಾವಣೆ ಡೆಮಾಕ್ರಟಿಕ್ ಸೋಶಲಿಸ್ಟ್ ಅಲೆಕ್ಸಾಂಡ್ರಿಯ ಗೆಲುವು: ಹೊಸ ಮೈಲಿಗಲ್ಲು

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಅಮೆರಿಕದ ಅಧ್ಯಕ್ಷ ಟ್ರಂಪ್ ರ ಆಡಳಿತದ 'ಹುಚ್ಚಾಟ'ಗಳ ಬಗ್ಗೆ ಸತತವಾಗಿ ವರದಿಯಾಗುತ್ತಿದೆ. ಆದರೆ ಯು.ಎಸ್. ಒಳಗೆ ಮತ್ತಷ್ಟು ಪ್ರಮುಖವಾದ ಬೆಳವಣಿಗೆಗಳು ಹೆಚ್ಚಾಗಿ ಜಗತ್ತಿಗೆ ಗೊತ್ತಾಗದಿರುವುದು ಒಂದು ರೀತಿಯ ವಿಪರ್ಯಾಸವೇ. ಆದರೂ, ಯು.ಎಸ್.ನ ನ್ಯೂಯಾರ್ಕ್ ಡೆಮಾಕ್ರಾಟಿಕ್ ಪ್ರಾಥಮಿಕ ಚುನಾವಣೆಯಲ್ಲಿ ಡೆಮಾಕ್ರಟಿಕ್ ಸೋಷಿಯಲಿಸ್ಟ್ ಅಭ್ಯರ್ಥಿ ಅಲೆಕ್ಸಾಂಡ್ರಿಯಾ ಒಕಾಸಿಯೋ ಕೊರ್ಟೆಜ್ ರ ಗೆಲುವು ಅತ್ಯಂತ ಮಹತ್ವದ ಬೆಳವಣಿಗೆಯಾಗಿದೆ ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ. 'ದಿ ಮಿಲೆನ್ನಿಯಲ್ ಸೋಷಿಯಲಿಸ್ಟ್ ಆರ್ ಕಮಿಂಗ್' ಅಂದರೆ, 'ಸಹಸ್ರಮಾನ ಸಮಾಜವಾದಿಗಳು ಆಗಮಿಸುತ್ತಿದ್ದಾರೆ' – ಈ ರೀತಿಯ ತಲೆಬರಹದೊಂದಿಗೆ ಅಲೆಕ್ಸಾಂಡ್ರಿಯಾ ಮತ್ತು ಇವರೊಂದಿಗೆ ಗೆದ್ದಿರುವ ಡೆಮಾಕ್ರಟಿಕ್ ಸೋಷಿಯಲಿಸ್ಟ್ ಅಭ್ಯರ್ಥಿಗಳ ಕುರಿತಂತೆ ಟೈಮ್ಸ್ ವರದಿ ಮಾಡಿರುವುದು, ಪ್ರಮುಖವಾಗಿ ರಿಪಬ್ಲಿಕನ್ ಹಾಗೂ ಡೆಮಾಕ್ರಟಿಕ್ ಪಕ್ಷಗಳಿಗೆ ಕಿರಿಕಿರಿ ತಂದಿದೆ.

ಅಮೆರಿಕದಲ್ಲಿ ಮುಂದಿನ ನವೆಂಬರ್ ನಲ್ಲಿ ನಡೆಯಲಿರುವ ಪಾರ್ಲಿಮೆಂಟ್ (ಕಾಂಗ್ರೆಸ್ ಮತ್ತು ಸೆನೆಟ್) ಚುನಾವಣೆಗಳಲ್ಲಿ 'ಕೆಂಪು ಅಲೆ' (ಇದು 'ಎಡ ಅಲೆ' ಬಗ್ಗೆ ಹೇಳಿದ್ದಲ್ಲ. ಯು.ಎಸ್.ನಲ್ಲಿ ಕೆಂಪು ಬಣ್ಣ ರಿಪಬ್ಲಿಕ್ ಪಕ್ಷವನ್ನು ಮತ್ತು ನೀಲಿ ಬಣ್ಣ ಡೆಮೊಕ್ರಾಟಿಕ್ ಪಕ್ಷವನ್ನೂ ಪ್ರತಿನಿಧಿಸುತ್ತವೆ.) ದೇಶವನ್ನು ಆವರಿಸುತ್ತದೆ ಎಂದು ಕೆಲವು ದಿನಗಳ ಹಿಂದೆಯಷ್ಟೇ ಅಧ್ಯಕ್ಷ ಟ್ರಂಪ್ ಹೇಳಿದ್ದನ್ನು ಇಲ್ಲಿ ನೆನಪು ಮಾಡಿಕೊಳ್ಳಬೇಕು. ಇತ್ತೀಚಿನ ಒಂದು ಸಮೀಕ್ಷೆಯ ಪ್ರಕಾರ ಟ್ರಂಪ್ ನ 'ವ್ಯಾಪಾರ ಸಮರಗಳು' ಮತ್ತು 'ವಲಸಿಗರ ವಿರುದ್ಧದ ಸಮರ' ನೀತಿಗಳನ್ನು ಅಮೆರಿಕದ ಶೇಕಡ 41.5 ಪ್ರತಿಶತ ದಷ್ಟು ಜನರು ಅನುಮೋದಿಸಿದ್ದಾರೆ. ಅಧ್ಯಕ್ಷ ಚುನಾವಣೆಯ ನಂತರ ಸರಾಸರಿ ಶೇ.39 ರಷ್ಟು ಇದ್ದ ರೇಟಿಂಗ್, ಇದೀಗ ಶೇಕಡಾವಾರು ಎರಡರಷ್ಟು ಹೆಚ್ಚಾಗಿದೆ ಎಂಬ ಅಶಾವಾದ ಟ್ರಂಪ್ ರಲ್ಲಿ ಮೂಡಿದೆ. ಆದರೆ ನಿಜವಾಗಿಯೂ, ಶೇ.52.7 ಪ್ರತಿಶತದಷ್ಟು ಅಮೆರಿಕನ್ ನಾಗರೀಕರು ಟ್ರಂಪ್ ಮತ್ತು ಅವರ ನೀತಿಗಳನ್ನು ನಿರಾಕರಿಸಿದ್ದಾರೆ ಎಂದಲ್ಲವೇ?! ಟ್ರಂಪ್ ವಿರುದ್ಧ ಜನರ ಕೋಪದ ರಾಜಕೀಯ ಪ್ರತಿಫಲನ ಕಂಡು ಬರುತ್ತಿದೆ.

'ಸಮಾಜವಾದಿ ಕೆಂಪು ಅಲೆ'

ನವೆಂಬರ್ ನಲ್ಲಿ ನಡೆಯುವ ಪಾರ್ಲಿಮೆಂಟ್ ಚುನಾವಣೆಗಳಿಗೆ ಡೆಮೊಕ್ರಾಟಿಕ್ ಮತ್ತು ರಿಪಬ್ಲಿಕನ್ ಪಕ್ಷದ ಒಳಗಿನ 'ಪ್ರಾಥಮಿಕ ಚುನಾವಣೆಗಳು' ನಡೆಯುತ್ತಿವೆ. ಅಲೆಕ್ಸಾಂಡ್ರಿಯ ಒಕಾಸಿಯೊ ಕೊರ್ಟೆಜ್ ರವರು, ಡೆಮಾಕ್ರಾಟಿಕ್ ಪಕ್ಷದೊಳಗೆ ಕೆಲಸ ಮಾಡುವ 'ಅಮೆರಿಕದ ಡೆಮಾಕ್ರಟಿಕ್ ಸಮಾಜವಾದಿಗಳು' (ಡಿ.ಎಸ್.ಎ.) ಸಂಘಟನೆಯ ಸದಸ್ಯರಾಗಿದ್ದಾರೆ. ಇವರು ಈ ಸ್ಥಾನವನ್ನು ಪ್ರತಿನಿಧಿಸುತ್ತಿದ್ದ ಡೆಮಾಕ್ರಟಿಕ್ ಪಕ್ಷದ ನಾಯಕನನ್ನು ಸೋಲಿಸಿದ್ದಾರೆ. ಇದು ಕೇವಲ ಅಲೆಕ್ಸಾಂಡ್ರಿಯ ರವರ ಗೆಲುವು ಮಾತ್ರವಲ್ಲದೆ ಲಭ್ಯವಿರುವ ವರದಿಯ ಪ್ರಕಾರ, ಅನೇಕರು ಅಂದರೆ ಸುಮಾರು 22 ಪ್ರತಿಶತ ದಷ್ಟು ಡಿ.ಎಸ್.ಎ. ಸದಸ್ಯರು ಮತ್ತು ಪ್ರಗತಿಪರರು ಇವರೊಂದಿಗೆ ಜಯಿಸಿದ್ದಾರೆ. ಇದೊಂದು ರೀತಿಯ "ಕೆಂಪು ಅಲೆ" ಎಂದು ಗುರುತಿಸುವುದಾದರೆ, ಟ್ರಂಪ್ ಹೇಳುವಂತೆ, ಅದು ರಿಪಬ್ಲಿಕನ್ ರ ಪರವಾದ ಅಲೆ ಖಂಡಿತ ಅಲ್ಲ, ಬದಲಿಗೆ ಇದೊಂದು "ವ್ಯವಸ್ಥೆಯ ವಿರೋಧಿ ಅಲೆ" ಹಾಗೂ "ಸಮಾಜವಾದಿಗಳ ಪರವಾದ ಅಲೆ" ಎಂಬ ಅಭಿಪ್ರಾಯಗಳನ್ನು ರಾಜಕೀಯ ವೀಕ್ಷಕರು ವ್ಯಕ್ತಪಡಿಸಿದ್ದಾರೆ.

ಕಳೆದ ಎರಡು ವರ್ಷಗಳ ಅಮೆರಿಕದ ರಾಜಕೀಯದಲ್ಲಿ, ಎಡ ಪಂಥೀಯ ರಾಜಕೀಯ



ಚಟುವಟಿಕೆಗಳು ಗಮನಾರ್ಹವಾಗಿ ಹೆಚ್ಚಾಗಿವೆ. ಡೆಮೊಕ್ರಾಟಿಕ್ ಪಕ್ಷದ ಅಧ್ಯಕ್ಷೀಯ ಅಭ್ಯರ್ಥಿಯಾಗಿ ಪ್ರಾಥಮಿಕ ಚುನಾವಣೆಗಳಲ್ಲಿ ಬರ್ನೀ ಸ್ಯಾಂಡರ್ಸ್ ಅವರ ರಾಜಕೀಯ ಪ್ರಚಾರ, ಹಿಲರಿ ಕ್ಲಿಂಟನ್ ವಾಲ್ ಸ್ಟ್ರೀಟ್ ಸಮೀಪವರ್ತಿಯಾಗಿರುವುದು, ಟ್ರಂಪ್ ನೀತಿಗಳಿಗೆ ಅಧ್ಯಕ್ಷೀಯ ಚುನಾವಣೆಗಳಲ್ಲಿ ಸಿಕ್ಕಿದ ಜಯ, ಟ್ರಂಪ್ ನೀತಿಗಳ ದಿವಾಳಿತನ – ಇವೆಲ್ಲವೂ ಎಡ ಪಂಥೀಯ ರಾಜಕೀಯ ಚಟುವಟಿಕೆಗಳನ್ನು ಇನ್ನಷ್ಟು ಬಿರುಸುಗೊಳಿಸಿದೆ. ಆದರೆ, ಸ್ಯಾಂಡರ್ಸ್ ವಾದದಂತೆ, ಚುನಾವಣೆ ಸಂದರ್ಭದಲ್ಲಿ ಟ್ರಂಪ್ ಮತ್ತು ಅವರು ಅನುಸರಿಸಿದ ನೀತಿಗಳನ್ನು ಸೋಲಿಸುವಷ್ಟು, ಡೆಮಾಕ್ರಟಿಕ್ ಪಕ್ಷ ತಯಾರಿ ನಡೆಸಿರಲಿಲ್ಲ. ಮೂಲತಃ ಡೆಮಾಕ್ರಟಿಕ್ ಪಾರ್ಟಿಯು ಕಾರ್ಮಿಕ ವರ್ಗ, (ಕರಿಯ, ಲ್ಯಾಟಿನೊ ಮತ್ತಿತರ) ಅಲ್ಪಸಂಖ್ಯಾತರ ಜನರನ್ನು ಸಾಮಾನ್ಯವಾಗಿ ಪ್ರತಿನಿಧಿಸುವ ಪಕ್ಷವಾಗಿತ್ತು. ಆದರೆ ಎಲ್ಲಿ ಎಡ ಚಿಂತನೆಗಳ ಕಡೆ ರಾಜಕೀಯ ತಿರುಗಿ ಬಿಡಬಹುದೆಂಬ ಆತಂಕದಿಂದಾಗಿ, ಸ್ಥಾಪಿತ ಹಿತಾಸಕ್ತಿಯ ಹಿನ್ನೆಲೆಯಿಂದ ಕೆಲಸ ನಿರ್ವಹಿಸಿದ ಕಾರಣ, ಡೆಮಾಕ್ರಟಿಕ್ ಪಾರ್ಟಿಯ ನಾಯಕತ್ವವು ನವ ಉದಾರವಾದ ನೀತಿಯನ್ನೇ ಅನುಸರಿಸುತ್ತಾ, ಅವರದ್ದೇ ಪಕ್ಷದ ಹಲವು ಸದಸ್ಯರ ಮತ್ತು ಬೆಂಬಲಿಗರ ಮಾತನ್ನು ಕೇಳಲು ನಿರಾಕರಿಸಿತು. ಇದು ಅಪಾರ ಜನಸಮೂಹದ ನಡುವೆ ಭ್ರಮೆ ಮತ್ತು ನಿರಾಸಕ್ತಿಗೆ ಕಾರಣವಾಯಿತು. ಜನರ ನಿರಾಸಕ್ತಿಯನ್ನು ರಿಪಬ್ಲಿಕನ್ ರು ಚೆನ್ನಾಗಿ ಬಳಸಿಕೊಂಡರು. ಇದು ಕೇವಲ ಅಮೆರಿಕಾದ ಡೆಮಾಕ್ರಾಟಿಕ್ ರಿಗೆ ಮಾತ್ರ ಅನ್ವಯಿಸಿದ್ದಲ್ಲ, ಬದಲಿಗೆ, ಇಡೀ ವಿಶ್ವದ ಎಲ್ಲಾ ನಡುಪಂಥೀಯ ಮತ್ತು 'ಸೋಶಿಯಲ್ ಡೆಮಾಕ್ರಾಟಿಕ್' ಪಕ್ಷಗಳ ವಿದ್ಯಮಾನವು ಇದೇ ಆಗಿದೆ, ಇದರಿಂದ ಅವೆಲ್ಲವೂ ಸಹಾ ತಮ್ಮ ಮೂಲ ಜನಸಮೂಹಗಳ ಬೆಂಬಲವನ್ನು ಕಳೆದುಕೊಳ್ಳುತ್ತಿವೆ.

ನವ ಉದಾರವಾದ ನೀತಿಯ ಸಮರ್ಥನೆ

ಸೋವಿಯತ್ ಒಕ್ಕೂಟದ ಕುಸಿತದ ನಂತರ, ನವ ಉದಾರವಾದದ ಟೊಳ್ಳುತನದ ಹೆಚ್ಚಳದಿಂದಾಗಿ 'ಸೋಶಿಯಲ್ ಡೆಮಾಕ್ರಾಟಿಕ್' ಪಕ್ಷಗಳ ಅವನತಿ ಎದ್ದುಕಾಣುತ್ತಿದೆ. ಅವರು "ರಾಷ್ಟ್ರೀಯ ಹಿತಾಸಕ್ತಿ ರಕ್ಷಣೆ"ಯ, "ವಾಸ್ತವಿಕವಾದ" ಮತ್ತು "ಮುಕ್ತ ವ್ಯಾಪಾರ ಬಗ್ಗೆ ವಿಶ್ವಾಸ" ಗಳ ಹೆಸರಿನಲ್ಲಿ ಸಾಮಾಜಿಕ ಕಲ್ಯಾಣ ನೀತಿ ಗಳನ್ನು ಅಳಿಸಿ ಹಾಕುವ ಹಾಗೂ ಸುಧಾರಣೆ ಯ ಮಂತ್ರ ಜಪಿಸುತ್ತಾ, ತಮ್ಮ ನವ ಉದಾರವಾದದ ನೀತಿಗಳನ್ನು ಸಮರ್ಥಿಸಲು ಆರಂಭಿಸಿದರು. ಇಂತಹ ವಿಫಲ ಆರ್ಥಿಕ ನೀತಿಗಳಿಂದಾಗಿ ಬೆಳೆಯುತ್ತಿರುವ ಜನರ ಅಸಮಾಧಾನವನ್ನು ಬೇರೆ ಕಡೆ ತಿರುಗಿಸಲು ಬೇರೆ ಏನೂ ಇಲ್ಲದಿರುವುದರಿಂದ, ಚುನಾವಣೆಗಳನ್ನು ಗೆಲ್ಲುವ ದೃಷ್ಟಿಯಿಂದ ವರ್ಣಭೇದ ನೀತಿ, ವಲಸೆ ನೀತಿ ಹಾಗೂ ಬಂದೂಕು ನಿಯಂತ್ರಣ, ಮುಂತಾದ ಸಮಸ್ಯೆಗಳಿಗೆ ಹೆಚ್ಚು ಒತ್ತು ನೀಡಿ 2006 ರಲ್ಲಿ ರಿಪಬ್ಲಿಕನ್ ರು ಚುನಾವಣೆ ಗೆದ್ದಿದೆ ಎನ್ನುತ್ತಾರೆ ಬರ್ನೀ ಸ್ಯಾಂಡರ್ಸ್ ರವರು. ಹೀಗೆ ಜನರ ಭಾವನೆಗಳೊಂದಿಗೆ ಆಟವಾಡುತ್ತಾ, ತಮ್ಮ ರಾಜಕೀಯ ಲಾಭಕ್ಕಾಗಿ ಸಮಾಜವನ್ನು ವಿಭಜನೆ ಮಾಡಲು ಕೂಡಾ ಇವರು ಹಿಂಜರಿಯುವುದಿಲ್ಲ. ಇದನ್ನೇ ಟ್ರಂಪ್ ರ ಆಡಳಿತದಲ್ಲಿ ಕಾಣುತ್ತಿರುವುದು. (ಇದೇ ರೀತಿಯ ರಾಜಕೀಯ ನಮ್ಮ ದೇಶದಲ್ಲಿಯೂ ನಡೆಯುತ್ತಿರುವುದನ್ನು ನಾವು ಗಮನಿಸ ಬಹುದಾಗಿದೆ.)

2008 ರ ಜಾಗತಿಕ ಬಿಕ್ಕಟ್ಟಿಗೆ ಅಮೆರಿಕ ಅಧಿ–ಕೇಂದ್ರವಾಗಿತ್ತು. ಎರಡು ಅಂಕಿಯ ನಿರುದ್ಯೋಗ, ಸಾಮೂಹಿಕ ಸ್ವತ್ತು ಮರು–ಸ್ವಾಧೀನತೆ, ಅಸಾಧಾರಣ ಬಾಡಿಗೆ, ವಿದ್ಯಾರ್ಥಿಗಳ ಮೇಲಿನ ಹೇರಳವಾದ ಸಾಲ, ಆರ್ಥಿಕ ಅಸಮಾನತೆ, ಬ್ಯಾಂಕುಗಳನ್ನು ನುಂಗಿದ ಶತ ಕೋಟ್ಯಾಧಿಪತಗಳಿಗೆ ಬೇಲ್ ಔಟ್ ಪ್ಯಾಕೇಜುಗಳು – ಇವೆಲ್ಲಾ ಜನರ ಅತೃಪ್ತಿಗೆ ಕಾರಣವಾಗಿತ್ತು. ಈ ಬಂಡವಾಳಶಾಹಿ ವ್ಯವಸ್ಥೆಯಡಿಯಲ್ಲಿ ಸಮಾಜದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಜನರು ಅರ್ಥ ಮಾಡಿಕೊಳ್ಳಲು ಆರಂಭಿಸಿದರು. ಈ ಹದಗೆಟ್ಟ ವ್ಯವಸ್ಥೆ ಗೆ ಪರ್ಯಾಯವಾದ ಸಮಾಜವಾದ ವ್ಯವಸ್ಥೆಯ ಬಗ್ಗೆ ಕಾಳಜಿ ಮೂಡಲು ಅವಕಾಶವನ್ನು ಪರಿಸ್ಥಿತಿ ಒದಗಿಸಿಕೊಟ್ಟಿತು. ಇಂತಹ ಸಂದರ್ಭದಲ್ಲಿ, ಕಾರ್ಮಿಕ ವರ್ಗದ ಮತ್ತು ಮಧ್ಯಮ ವರ್ಗದ ಕಾಳಜಿಗಳನ್ನು ಎತ್ತಿ ಹಿಡಿಯಲು ಡೆಮಾಕ್ರಟಿಕ್ ಪಕ್ಷ ವಿಫಲವಾಗಿತ್ತು. ಬದಲಿಗೆ ಶ್ರೀಮಂತ ಮತ್ತು ಶಕ್ತಿಯುತವಾದ, ಸಾಂಸ್ಥಿಕ ಹಣದ ಮೂಲಕ ಜನರನ್ನು ಮುಟ್ಟಲು ಸಜ್ಜುಗೊಂಡಿತು. ಇಂತಹ "ಚುನಾವಣಾ ಕಾರ್ಪೊರೇಟೈಸೇಷನ್".ನಿಂದಾಗಿ ಅದು ತನ್ನ ಮೂಲ ನೆಲೆಯನ್ನು ಕಳೆದುಕೊಳ್ಳಲಾರಂಭಿಸಿತು. ಇದರ ಪ್ರತಿ ಬಿಂಬವು ಸೆನೆಟ್ ಪ್ರಾತಿನಿಧ್ಯದಲ್ಲಿ ಕಾಣುತ್ತಿದೆ. ಯು.ಎಸ್. ಪ್ರಜೆಯ ಸರಾಸರಿ ಆಸ್ತಿ ಮೌಲ್ಯವು ವಾರ್ಷಿಕ 45 ಸಾವಿರ ಡಾಲರ್ ಇದ್ದರೆ, ಸೆನೆಟರ್ ಆಸ್ತಿ ಮೌಲ್ಯವು 31 ಲಕ್ಷ ಡಾಲರ್ ಆಗಿದೆ. ಇಂತಹ ಅಸಂಬದ್ಧ ಆರ್ಥಿಕ ಅಸಮಾನತೆಯಿಂದ ಜನರಲ್ಲಿ ತೀವ್ರ ಅಸಮಾಧಾನದ ಮಂಥನ ಆರಂಭವಾಯಿತು. ಜನ–ಸಮುದಾಯಗಳ ಮೇಲೆ ಎಲ್ಲಾ ಕಡೆಗಳಿಂದ ದಾಳಿ ನಡೆಸಲಾಗುತ್ತದೆ ಎಂಬ ಭಾವನೆ ಜನರಲ್ಲಿ ಮೂಡಿತು. ಇದರ ವಿರುದ್ಧ ಹೋರಾಡಲು ಒಬ್ಬರು ರಾಜಕೀಯ ಅಧಿಕಾರದ ಸ್ಥಾನ ಹೊಂದಿರುವವರನ್ನು ಆಯ್ಕೆ ಮಾಡುವ ಅಗತ್ಯತೆಯನ್ನು ಮನವರಿಕೆ ಮಾಡಿಕೊಂಡರು. ಇದರ ಹಿನ್ನೆಲೆಯಲ್ಲಿಯೇ, 'ಒಕ್ಯುಪೈ ವಾಲ್ ಸ್ಟ್ರೀಟ್', 'ಬ್ಲ್ಯಾಕ್ ಲೈವ್ಸ್ ಮ್ಯಾಟರ್', 'ಮೀ ಟೂ' ಮತ್ತು ಇಂತಹ ಹಲವಾರು ಕಾರ್ಮಿಕ ವರ್ಗದ ಹೋರಾಟಗಳು, ಜನರ ಆಲೋಚನಾ ಪ್ರಕ್ರಿಯೆಯನ್ನು ಹುಟ್ಟು ಹಾಕಿದ ಚಳುವಳಿಗಳಾಗಿ ಪರಿವರ್ತನೆ ಗೊಂಡವು.

ಹೀಗೆ ಈ ಹೋರಾಟಗಳಲ್ಲಿ ಭಾಗವಹಿಸಿದ್ದ ಜನರು "ಕಾರ್ಪೊರೇಟ್ ಡೆಮಾಕ್ರಟ್" ಬದಲಿಗೆ, ತಮ್ಮನ್ನು ಮತ್ತು ತಮ್ಮ ಕಾಳಜಿಯನ್ನು ಪ್ರತಿನಿಧಿಸುವವರ ಹುಡುಕಾಟದಲ್ಲಿ ಇರುವಾಗ, ಬರ್ನೀ ಸ್ಯಾಂಡರ್ಸ್ ರ ಸಕಾರಾತ್ಮಕ ಅಭಿಯಾನಕ್ಕೆ ಬೆಂಬಲವನ್ನು ಸೂಚಿಸಿದರು. ಇದನ್ನೇ, ಪ್ರಸ್ತುತ ಅಲೆಕ್ಸಾಂಡ್ರಿಯ ಮತ್ತು ಅವರ ಬೆಂಬಲಿಗರು ನ್ಯೂಯಾರ್ಕ್ ಪ್ರಾಥಮಿಕ ಚುನಾವಣಾ ಫಲಿತಾಂಶಗಳಲ್ಲಿ ಪ್ರತಿಬಿಂಬಿಸುತ್ತಿದ್ದಾರೆ ಎನ್ನಲಾಗಿದೆ.

ಅಲೆಕ್ಸಾಂಡ್ರಿಯ:


ಕಾರ್ಮಿಕ ವರ್ಗದ ಚಾಂಪಿಯನ್ ಸಂಘಟಕಿ

ಅಲೆಕ್ಸಾಂಡ್ರಿಯ ಸ್ವತಃ ದುಡಿಯುವ ಕುಟುಂಬಗಳಿಗೆ ಅರ್ಪಿತಗೊಂಡ ಚಾಂಪಿಯನ್ ಆಗಿ ಹೊರಹೊಮ್ಮಿದ ಹಾಗೂ ಅತ್ಯುತ್ತಮ ಸಂಘಟನಾ ಚತುರತೆ ಯ ಕೌಶಲ್ಯ ಹೊಂದಿರುವ ಶಿಕ್ಷಕಿ ಎಂದು ವ್ಯಾಖ್ಯಾನಿಸಲಾಗಿದೆ. ಇವರು ಹಲವು ಚಳುವಳಿಗಳ ಬೆಂಬಲದೊಂದಿಗೆ ಸ್ಪರ್ಧಿಸಿದ್ದರು. ಇವರ ಸ್ಪರ್ಧೆಯನ್ನು "ಜನ ಮತ್ತು ಹಣಗಳ ನಡುವೆ ಹಣಾಹಣಿ" ಎಂದು ಬಣ್ಣಿಸಲಾಗಿತ್ತು. ಇವರು ತಮ್ಮ ಪ್ರಚಾರದಲ್ಲಿ ಕೈಗೆತ್ತಿಕೊಂಡ ವಿಷಯಗಳು ಆರ್ಥಿಕ ಅಸಮಾನತೆ, ಕಾರ್ಪೊರೇಟ್‌ಗಳ ರಾಜಕೀಯ ನಿಯಂತ್ರಣ, ಎಲ್ಲರಿಗೂ ಸಮಾನ ಹಕ್ಕುಗಳು, ಗಂಟೆಗೆ 15 ಡಾಲರ್ ಕನಿಷ್ಠ ವೇತನ, ಎಲ್ಲರಿಗೂ ಮೆಡಿಕೇರ್ ಸೌಲಭ್ಯ, ಕಾಲೇಜು ಗಳಲ್ಲಿ ಫ್ರೀ ಟ್ಯೂಷನ್, ಮತ್ತು ಫೆಡರಲ್ ಉದ್ಯೋಗಗಳ ಖಾತರಿ, ಹಾಗೂ ವರ್ಣ ಭೇದ ಹಾಗೂ ಶೋಷಣೆಗಳ ನಡುವಿನ ಸಂಬಂಧ – ಹೀಗೆ ಹತ್ತು ಹಲವು ವರ್ಗ ಪ್ರಶ್ನೆಗಳಿಗೆ, ಪ್ರಮುಖವಾಗಿ ಕಾರ್ಮಿಕ ವರ್ಗದ ಹಿತರಕ್ಷಣೆಗೆ, ತನ್ನ ಕಾರ್ಯಸೂಚಿಯಲ್ಲಿ ಹೆಚ್ಚು ಒತ್ತು ಕೊಟ್ಟಿದ್ದ ಪರಿಣಾಮವಾಗಿ, ಒಂದು ವಿಸ್ತಾರವಾದ ಪ್ರಗತಿಪರ ಒಕ್ಕೂಟವನ್ನು ನಿರ್ಮಿಸಲಾಯಿತು. ಇದರಲ್ಲಿ, ಬ್ಲಾಕ್ ಲೈವ್ ಮ್ಯಾಟರ್, ಜಸ್ಟಿಸ್ ಡೆಮಾಕ್ರಾಟ್ಸ್, ಮುಸ್ಲಿಂ ಸಮುದಾಯ ಸಂಘಟನೆಗಳು, ಯುವ ಯಹೂದಿ ಸಂಘಟನೆ ಗಳು ಮತ್ತು ಇತರ ಅನೇಕ ಸಂಘಟನೆಗಳು ಸೇರಿದ್ದವು. ಅಲೆಕ್ಸಾಂಡ್ರಿಯ ಅವರ ವಿರೋಧಿ ಮತ್ತು ಹಾಲಿ ಶಾಸಕ ಅವರಿಗಿಂತ 10 ಪಟ್ಟು ಹೆಚ್ಚು ಹಣ ಖರ್ಚು ಮಾಡಿದರೂ ಸೋಲಬೇಕಾಯಿತು. ಅಲೆಕ್ಸಾಂಡ್ರಿಯ ಜನರ ಹಣದಿಂದಲೇ ಚುನಾವಣಾ ಪ್ರಚಾರ ಮಾಡಿದರು.

ಆಳುವ ವರ್ಗಗಳ ಗಾಬರಿ–ಆತಂಕ

ಇದೀಗ ಯು.ಎಸ್. ಆಳುವ ವರ್ಗಗಳು ಈ ಬೆಳವಣಿಗೆಗಳಿಂದ ಸಹಜವಾಗಿಯೇ ಗಾಬರಿಯಾಗಿದ್ದಾರೆ. ರಿಪಬ್ಲಿಕನ್ ರು 'ಸಮಾಜವಾದದ ರಾಜಕೀಯ'ದ ಅಪಾಯದ ಬಗ್ಗೆ ಭಯಗೊಂಡಿದ್ದಾರೆ. ಸಮಾಜವಾದಿಗಳ ಬೆಳೆಯುತ್ತಿರುವ ಪ್ರಭಾವ ಮತ್ತು ಪಕ್ಷವನ್ನು ಎಡಪಂಥೀಯತೆಯ ಕಡೆ ತಿರುಗಿಸುವ ಸಾಧ್ಯತೆ ಬಗ್ಗೆ ಡೆಮಾಕ್ರಟಿಕ್ ನಾಯಕತ್ವಕ್ಕೆ ಚಿಂತೆಯಾಗಿದೆ. ಡೆಮಾಕ್ರಾಟಿಕ್ ಪಕ್ಷ, ಎಡಪಂಥೀಯತೆಯತ್ತ ಹೊರಳುತ್ತಿರುವ ಅದರ ಮೂಲ ನೆಲೆಯಾದ ಸದಸ್ಯತ್ವ ಮತ್ತು ಕಾರ್ಪೊರೇಟ್ ನಾಯಕತ್ವ ನಡುವೆ ಹರಿದು ಹಂಚಿ ಹೋಗುತ್ತಿದೆ ಎಂದು ಕಾಂಗ್ರೆಸ್ ನ ಮಾಜಿ ಸ್ಪೀಕರ್ ನ್ಯಾನ್ಸಿ ಪೆಲೊಸಿ ಹೇಳುತ್ತಾರೆ. ಮುಂದುವರಿಯುತ್ತಾ, ಅಲೆಕ್ಸಾಂಡ್ರಿಯ ಕಾಲದ ಕರೆಯಲ್ಲ, ಅಪವಾದ ಎಂದು ನ್ಯಾನ್ಸಿ ಸಮಾಧಾನ ಪಡಲು ಪ್ರಯತ್ನಿಸಿದ್ದಾರೆ. ಆದರೆ ಡೆಮೊಕ್ರಾಟಿಕ್ ಸದಸ್ಯತ್ವ ಅಲೆಕ್ಸಾಂಡ್ರಿಯ ರನ್ನು ಕಾಲದ ಕರೆಯೆಂದು ಅಪ್ಪಿಕೊಳ್ಳುತ್ತಿದೆ.

ಈ ಹಿನ್ನೆಲೆಯಲ್ಲಿ ಡಿ.ಎಸ್.ಎ.ಯ ಸದಸ್ಯತ್ವವು ಈ ಎರಡು ವರ್ಷಗಳಲ್ಲಿ 7ರಿಂದ 37 ಸಾವಿರಕ್ಕೆ ಏರಿಕೆಯಾಗಿರುವುದು, ಮತ್ತೆ ಸಾವಿರಾರು ಮಂದಿ ಸೇರಲು ಆಸಕ್ತಿ ತೋರಿಸುತ್ತಿರುವುದು ರಿಪಬ್ಲಿಕನ್ ಮತ್ತು ಡೆಮಾಕ್ರಾಟಿಕ್ ಎರಡು ಪಕ್ಷಗಳಿಗೂ ರಾಜಕೀಯವಾಗಿ ನುಂಗಲಾರದ ತುತ್ತಾಗಿದೆ. ಮುಂಬರುವ ದಿನಗಳಲ್ಲಿ ಯು.ಎಸ್. ರಾಜಕೀಯದಲ್ಲಿ ಅಲೆಕ್ಸಾಂಡ್ರಿಯ ವಿಜಯ ಖಂಡಿತ ಒಂದು ಹೊಸ ಮೈಲಿಗಲ್ಲು ಎಂಬುದು ರಾಜಕೀಯ ವಿಶ್ಲೇಷಕರ ಅಭಿಪ್ರಾಯವಾಗಿದೆ. ●



JANASHAKTHI KANNADA VARA PATRIKE AUG 20-26, 2018 Price: Rs. 10/- Date of Publication: 17 AUG 2018 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

"ಸೌಹಾರ್ದತೆಗಾಗಿ ಸಹಪಯಣ – ದೇಶ ವಿಭಜನೆಯ ಕತೆಗಳ ಓದು–ಸಂವಾದ"

ಎಚ್.ಆರ್. ನವೀನ್ ಕುಮಾರ್

"ದೌರ್ಜನ್ಯಗಳನ್ನು ದ್ವೇಷಕ್ಕೆ ಬಳಸಬಹುದಾದರೆ, ಸೌಹಾರ್ದ–ಕಥನಗಳನ್ನು ಬೆಸುಗೆಗೆ ಬಳಸುವ ಮಾದರಿಗಳಿಲ್ಲವೇ?"



ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ ಸುಮಾರು 60 ಜನ ಎರಡು ದಿನಗಳ ಕಾಲ ನಡೆದ ಕಾರ್ಯಾಗಾರದಲ್ಲಿ ದೇಶ ವಿಭಜನೆಯ ಬಗೆಗಿನ ಕೆಲವು ಪುಸ್ತಕಗಳ ಕುರಿತು ಚರ್ಚೆ ನಡೆಸಿದರು. ಪುಸ್ತಕಗಳ ಆಶಯಗಳು, ಅವು ಪ್ರಸ್ತುತ ಸಂದರ್ಭಕ್ಕೆ ಹೇಗೆ ಸಮಕಾಲೀನವಾಗುತ್ತವೆ, ಈ ಅಂಶಗಳನ್ನು ಕೃತಿಯಲ್ಲಿ ತರುವ ಹಿಂದೆ ಲೇಖಕನ ಉದ್ದೇಶ ಏನಿರಬಹುದು, ಈ ಕೃತಿ ರಚನೆಯಾದ ಕಾಲಘಟ್ಟ ಎಂತಹದ್ದು, ಅಂದು ದೇಶದ ಸಾಮಾಜಿಕ, ಆರ್ಥಿಕ, ರಾಜಕೀಯ ಪರಿಸ್ಥಿತಿಗಳು ಹೇಗಿದ್ದವು, ಇವು ಕೃತಿಗಳ ಮೇಲೆ ಎಷ್ಟರ ಮಟ್ಟಿಗೆ ಪ್ರಭಾವ ಭೀರಿವೆ, ಮಾತ್ರವಲ್ಲದೆ ಈ ಕೃತಿಗಳು ಜನ ಕೇಂದ್ರಿತವಾಗಿವೆಯೇ ಇಲ್ಲವೇ – ಇನ್ನು ಹತ್ತು ಹಲವು ವಿಚಾರಗಳ ಕುರಿತು ಬಿಡುವಿಲ್ಲದ ಚರ್ಚೆ, ಮಾತುಕತೆ, ಸಂವಾದ, ಕವಿಗೋಷ್ಠಿ, ನಾಟಕ. ಇವೆಲ್ಲ ನಡೆದದ್ದು ಮಂಗಳೂರಿನ ಕಲಾಂಗಣದಲ್ಲಿ "ದ್ವೇಷ ಅಳಿಯದೆ ದೇಶ ಬೆಳಗದು" ಎಂಬ ಆಶಯದಲ್ಲಿ ಆಗಸ್ಟ್ 11 ಮತ್ತು 12 ರಂದು ನಡೆದ "ಸೌಹಾರ್ದತೆಗಾಗಿ ಸಹಪಯಣ – ದೇಶ ವಿಭಜನೆಯ ಕತೆಗಳ ಓದು–ಸಂವಾದ"ದಲ್ಲಿ.

'ಕೋಶ ಓದು ದೇಶ ನೋಡು' – 3.0

'ಕೋಶ ಓದು ದೇಶ ನೋಡು' ವಾಟ್ಸಪ್ ಗುಂಪಿನ ಗೆಳೆಯರು, ಸಾಮಾಜಿಕ ಮಾಧ್ಯಮದ ಹೊಸ ಸಾಧ್ಯತೆಗಳನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ವಿನೂತನ ಪ್ರಯೋಗಗಳನ್ನು ಮಾಡುತ್ತಾ ಬಂದಿದ್ದಾರೆ. ಒಂದು ವರ್ಷದಿಂದ ಯುವಜನರಲ್ಲಿ ಓದುವ ಆಸಕ್ತಿಯನ್ನು



ಬೆಳೆಸುವ, ನಿರ್ದಿಷ್ಟ ದೃಷ್ಟಿಕೋನದಲ್ಲಿ ಓದುವ ಮತ್ತು ಓದಿದ ಕೃತಿಗಳನ್ನು ಮನನ ಮಾಡಿಕೊಳ್ಳುವ ನಿಟ್ಟಿನಲ್ಲಿ ಪುಸ್ತಕ ಓದು ಅಭಿಯಾನವನ್ನು ಆರಂಭಿಸಿದ್ದಾರೆ. ಇಲ್ಲಿಯವರೆಗೆ ಈ ಆಂದೋಲನ ಮೂರನೇ ಘಟ್ಟವನ್ನು ತಲುಪಿದೆ. ಮೊದಲಿಗೆ ನಿರಂಜನರವರ ಚಿರಸ್ಮರಣೆ ಕಾದಂಬರಿಯನ್ನು ಆಯ್ಕೆಮಾಡಿಕೊಂಡು ಓದಿಸಿ, ಓದಿದವರೆಲ್ಲರನ್ನು ಕಾದಂಬರಿಯ ವಸ್ತುಸ್ಥಳವಾದ ಕೇರಳದ ಕಯ್ಯೂರಿಗೆ ಕರೆದೊಯ್ಯುವ ಮೂಲಕ ಓದಿದ್ದನ್ನು ಕಣ್ಣಾರೆ ಕಟ್ಟಿಕೊಡುವ ಪ್ರಯತ್ನ ಯಶಸ್ವಿಯಾಗಿ ನಡೆದಿತ್ತು, ನಂತರ ಶಿವರಾಮ ಕಾರಂತರ ಚೋಮನದುಡಿ ಕಾದಂಬರಿಯ ಓದು. ಈಗ ದೇಶವಿಭಜನೆಯ ಕುರಿತ ಹಲವು ಪುಸ್ತಕಗಳ ಓದು. ಖುಷ್ವಂತ್‌ಸಿಂಗ್‌ರ 'ಟ್ರೈನ್ ಟು ಪಾಕಿಸ್ತಾನ' ದಿಂದ ಆರಂಭವಾಗಿ, ಭೀಷ್ಮ ಸಾಹನಿಯವರ 'ತಮಸ್', ಸಾದತ್ ಹಸನ್ ಮಾಂಟೋ ರವರ 'ದೇಶವಿಭಜನೆಯ ಕಥೆಗಳು' ಮತ್ತು 'ಬರ್ಕ್‌ವೈಟ್ ಕಂಡ ಭಾರತ' ಪುಸ್ತಕಗಳನ್ನು ಓದಿ ಇವುಗಳನ್ನು ಮನನ ಮಾಡಲು ಎರಡು ದಿನಗಳ ಕಾಲ ಮಂಗಳೂರಿನಲ್ಲಿ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು.

ಈ ಪ್ರಸಕ್ತ ಓದು ಅಭಿಯಾನದಲ್ಲಿ ಆಯ್ಕೆಮಾಡಿಕೊಂಡ ಎಲ್ಲ ಪುಸ್ತಕಗಳು ವಿಭಜನೆಗೆ ಸಂಬಂಧಿಸಿದ್ದಾಗಿರುವುದರಿಂದ, ಕರ್ನಾಟಕದ ಕರಾವಳಿಯಾದ ಮಂಗಳೂರನ್ನು ಹಿಂದು ಕೋಮುವಾದಿಗಳು ಮತ್ತು ಮುಸ್ಲಿಂ ಮೂಲಭೂತವಾದಿಗಳು ತಮ್ಮ ಪ್ರಯೋಗಾಲಯವನ್ನಾಗಿ ಕೇಂದ್ರೀಕರಿಸುತ್ತಿರುವಾಗ, ಈ ಪ್ರದೇಶದಲ್ಲಿಯೇ ಕಾರ್ಯಾಗಾರ ನಡೆಸುವದು ಸೂಕ್ತವೆಂದು ಭಾವಿಸಿ ಇಲ್ಲಿ ಆಯೋಜಿಸಲಾಗಿತ್ತು.

"ಪೂರ್ವಾಗ್ರಹಪೀಡಿತ ಮನಸ್ಸುಗಳ ವ್ಯವಸ್ಥಿತ ಸೃಷ್ಟಿ"

ಎರಡೂ ದಿನಗಳು ನಡೆದ ಈ ಕಾರ್ಯಾಗಾರದಲ್ಲಿ ಮೊದಲಿಗೆ ಸಾಂಕೇತಿಕವಾಗಿ ಉದ್ಘಾಟನೆಯನ್ನು ಕಾರ್ಯಾಗಾರದ ಮಾರ್ಗದರ್ಶಕರೂ ಮತ್ತು ಸಂಸ್ಕೃತಿ ಚಿಂತಕರಾದ ಪ್ರೊ. ರಹಮತ್ ತರಿಕೆರೆಯವರು ನೆರವೇರಿಸಿದರು. ಅವರು ಮಾತನಾಡುತ್ತಾ "ಮುಸ್ಲಿಮರು ಎಂದರೆ ಕ್ರೂರಿಗಳು, ಸಿಖ್ಖರು ಎಂದರೆ ದಡ್ಡರು, ದಲಿತರು ಎಂದರೆ ಕೊಳಕರು, ಆಫ್ರಿಕನ್ನರು ಎಂದರೆ ಅನಾಗರೀಕರು, ಬ್ರಾಹ್ಮಣರು ಎಂದರೆ ಮನುವಾದಿಗಳು... ಈ ರೀತಿಯ ಪೂರ್ವಾಗ್ರಹಪೀಡಿತ ಮನಸ್ಸುಗಳನ್ನು ಇಂದು ಅತ್ಯಂತ ವ್ಯವಸ್ಥಿತವಾಗಿ ಸೃಷ್ಟಿಸಲಾಗುತ್ತಿದೆ. ಇದು ಇಂದಿನ ಸಮಾಜಕ್ಕೆ ಅತ್ಯಂತ ಅಪಾಯಕಾರಿ. ಪೂರ್ವಕಾಲದ ಮುಸ್ಲಿಂ ದೊರೆಯೊಬ್ಬ ಮಾಡಿದ ಕ್ರೌರ್ಯವನ್ನು, ವರ್ತಮಾನದ ಮುಸ್ಲಿಂ ಯುವಕನೊಬ್ಬನ ಮೇಲೆ ಹೊರಿಸುವುದು, ಪೂರ್ವ ಕಾಲದ ಬ್ರಾಹ್ಮಣನೊಬ್ಬ ಪಾಲಿಸಿದ ಅಸ್ಪೃಶ್ಯತೆ ಎಂಬ ನೀಚ ಪದ್ಧತಿಯ ಹೊಣೆಯನ್ನು ಈಗಿನ ಬ್ರಾಹ್ಮಣ ಯುವಕನೊಬ್ಬನ ಮೇಲೆ ಹೇರುವುದು ವರ್ತಮಾನದ ಅತೀ ದೊಡ್ಡ ಕ್ರೌರ್ಯ" ಎಂದರು.

ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಕಾರ್ಯಾಗಾರದ ಇನ್ನೊಬ್ಬ ಮಾರ್ಗದರ್ಶಕರು ಮತ್ತು ಹಿರಿಯ ಪತ್ರಕರ್ತರಾದ ದಿನೇಶ್ ಅಮ್ಮಿನ ಮಟ್ಟುರವರು "ಸಮಾಜದಲ್ಲಿ ಸಾಹಿತ್ಯ, ಸಂಗೀತ, ಕಲೆಯ ಆಸಕ್ತಿಯಿರುವವರು ಎಂದೂ ಕೆಟ್ಟು ಹೋಗಲ್ಲ. ಸಾಹಿತ್ಯದ ಓದು ಬೇರೆ ಬೇರೆ ಅನುಭವ ಲೋಕ ಪರಿಚಯಿಸಿ, ಇತಿಹಾಸದಿಂದ ಒಂದಿಷ್ಟು ಪಾಠ ಕಲಿಸುತ್ತದೆ. ಓದದಿದ್ದರೆ ಯಾವ ಪಾಠ ಕಲಿಯಲು ಆಗಲ್ಲ. 20 ವರ್ಷದ ಹಿಂದಿನ ಆರ್‌ಎಸ್‌ಎಸ್ ನಾಯಕರ ಜೊತೆ ಕೂತು ಚರ್ಚೆ ಮಾಡಬಹುದಾಗಿತ್ತು. ಆದರೆ, ಇಂದಿನ ಮೋದಿ–ಭಕ್ತರೊಂದಿಗೆ ಮಾತಾಡಲು ಸಾಧ್ಯವಿಲ್ಲ. ಸಾಹಿತ್ಯ ಓದಿನ ಮೂಲಕ ಸಮಾಜವನ್ನು ನೋಡುವ ದೃಷ್ಟಿಕೋನ ಬದಲಾಗುತ್ತದೆ. ಕೋಮುವಾದ ಹರಡುವುದು ಸುಲಭ, ಒಂದಿಷ್ಟು ಕುಂಕುಮ, ಕೇಸರಿ ಶಾಲು, ಹೇಳಲು ಒಂದಿಷ್ಟು ಸುಳ್ಳುಗಳಿದ್ದರೆ ಸಾಕು. ಬೆರಳೆಣಿಕೆಯ ಜನ ಸಾಕು, ಮಂಗಳೂರು ಕೆಡಿಸಲು. ಆದರೆ, ಜಾತ್ಯಾತೀತೆಯನ್ನು ಹರಡುವುದು ಬಲು ಕಷ್ಟ. ಇದೇ ನಮ್ಮ ಮುಂದಿರುವ ದೊಡ್ಡ ಸವಾಲು. ಫ್ಯಾಸಿಸಂ ಪುಸ್ತಕ ಓದಿಗೆ, ಸಾಂಸ್ಕೃತಿಕ ಪ್ರಕಾರಗಳಿಗೆ ಹೆದರುತ್ತದೆ. ಕೋಮುವಾದಿ ರಾಜಕಾರಣದ ಎದುರಾಗಿ ಸಾಂಸ್ಕೃತಿಕ ರಾಜಕಾರಣ ಮಾಡಬೇಕಾದ ಅನಿವಾರ್ಯತೆಯಿದೆ. ಇತ್ತೀಚೆಗೆ ಬುದ್ಧಿ ಜೀವಿಗಳು, ಚಿಂತಕರು, ಸಾಹಿತಿಗಳ ಮೇಲೆ ನಡೆಯುತ್ತಿರುವ ದಾಳಿ ಇದು ಕೇವಲ ಭಾರತಕ್ಕೆ ಸೀಮಿತವಾಗಿಲ್ಲ. ಫ್ಯಾಸಿಸಂ ಎಲ್ಲೆಲ್ಲಿ ಬಲಿಷ್ಟವಾಗಿತ್ತೋ ಅಲ್ಲೆಲ್ಲಾ ದಾಳಿ ನಡೆದಿದೆ. ಭಾರತದಲ್ಲಿಯೂ ಬುದ್ದಿ ಜೀವಿಗಳನ್ನು, ಚಿಂತಕರನ್ನು ನೈತಿಕವಾಗಿ ಕುಸಿದು ಹೋಗುವ ರೀತಿಯಲ್ಲಿ ಮಾಡಲಾಗುತ್ತಿದೆ" ಎಂದರು.

ಕೋಮುವಾದ, ಮೂಲಭೂತವಾದಗಳಾಚೆ ಮಾನವ ಸಂಬಂಧಗಳನ್ನು ಕಾಯ್ದುಕೊಳ್ಳುವುದು ಹೇಗೆ?

ಈ ಕಾರ್ಯಾಗಾರದಲ್ಲಿ ಅಭಿಯಾನದಲ್ಲಿ ಓದಿದ ಪುಸ್ತಕಗಳ ಕುರಿತು ವ್ಯವಸ್ಥಿತವಾಗಿ ಚರ್ಚೆ ನಡೆಸಲು ಬಂದಿದ್ದ ಎಲ್ಲರನ್ನು ಐದು ಗುಂಪುಗಳನ್ನಾಗಿ ವಿಂಗಡಿಸಲಾಯಿತು. ಪ್ರತಿಯೊಂದು ಗುಂಪು ಒಂದು ನಿರ್ದಿಷ್ಟ ವಿಷಯದ ಮೇಲೆ ಎಲ್ಲಾ ಓದಿನ ಪುಸ್ತಕಗಳನ್ನು ನೋಡುವ ಕುರಿತು ಸುದೀರ್ಘವಾಗಿ ಚರ್ಚಿಸಿದರು. ಐದು ಗುಂಪಿನ ವಿಷಯಗಳು ಕೆಳಕಂಡಂತೆ ಇದ್ದವು:

1. ಸೂಕ್ಷ್ಮ ಸ್ವರೂಪದಲ್ಲಿ ಕೋಮುವಾದದ ವಿಸ್ತರಣೆ : ಸಾಂಸ್ಕೃತಿಕ, ಸಾಮಾಜಿಕ ಚಟುವಟಿಕೆಗಳು, ಸಾಹಿತ್ಯ ಇತ್ಯಾದಿ– ಇವುಗಳು ಹೇಗೆ ನಡೆಯುತ್ತವೆ ಮತ್ತು ನಾವು ಅವಕ್ಕೆ ಹೇಗೆ ಪರ್ಯಾಯ ರೂಪಿಸಬಹುದು
2. ಕೋಮು ವಿಭಜನೆಯ ರಾಜಕೀಯ ಪರಿಕರಗಳು : ಕಾಶ್ಮೀರದ ಪ್ರತ್ಯೇಕತಾವಾದ, ಉಗ್ರವಾದ, ಸೇನೆ, ನುಸುಳುಕೋರರ ಸಮಸ್ಯೆ – ಇವನ್ನು ಯಾವ ಪರಿಭಾಷೆಯಲ್ಲಿ ಮತ್ತು ಭಾವದಲ್ಲಿ ಜನರಿಗೆ ತಲುಪಿಸಲಾಗುತ್ತಿದೆ? ವಾಸ್ತವಾಂಶ ಏನಿದೆ? ಅದನ್ನು ಜನರಿಗೆ ತಲುಪಿಸುವ ಬಗೆ ಹೇಗೆ?
3. ಕೋಮುವಾದ ಮತ್ತು ಮೂಲಭೂತವಾದಗಳಾಚೆ ಮಾನವ ಸಂಬಂಧಗಳನ್ನು ಕಾಯ್ದುಕೊಳ್ಳುವ ಬಗೆ ಯಾವುದು? ಕೃತಕವಲ್ಲದ ವಿಧಾನಗಳು ಏನಿವೆ?
4. ಮಾಧ್ಯಮ ಮತ್ತು ನವಮಾಧ್ಯಮಗಳಲ್ಲಿ ಕೋಮುವಾದ : ಅದಕ್ಕೆ ಪ್ರತ್ಯುತ್ತರ ನೀಡುವ ವೇದಿಕೆ ಕಟ್ಟುವುದು ಹೇಗೆ? ನವಮಾಧ್ಯಮಗಳಲ್ಲಿ, ಅಂತರ್ಜಾಲದಲ್ಲಿ ಕೋಮುವಾದಿ ಅಜೆಂಡಾಗಳಿಗೆ ಪರ್ಯಾಯ ವೇದಿಕೆ ರೂಪಿಸುವುದು ಹೇಗೆ? ಆರ್ಥಿಕತೆ, ಒಗ್ಗಟ್ಟು, ಸಾಧ್ಯತೆಗಳನ್ನು ಗಮನದಲ್ಲಿಟ್ಟುಕೊಂಡು, ಪ್ರಾಯೋಗಿಕವಾಗಿ ಜಾರಿಗೊಳಿಸಬಹುದಾದ ದಾರಿಗಳು ಇವೆಯೆ?
5. ಮುಸ್ಲಿಂ ಕೋಮುವಾದಕ್ಕೆ ಹಿಂದೂ ಕೋಮುವಾದ ಕಾರಣ ಅನ್ನುವುದಾದರೆ, ಹಿಂದೂ ಕೋಮುವಾದಕ್ಕೆ ಆಕ್ರಮಣಕಾರರ ಮುಸ್ಲಿಂ ಕೋಮುವಾದ ಕಾರಣ ಅನ್ನುವ ಚರ್ಚೆ ಮುಂದಾಗುತ್ತದೆ. ದೌರ್ಜನ್ಯಗಳನ್ನು ದ್ವೇಷಕ್ಕೆ ಬಳಸಬಹುದಾದರೆ; ಅದರ ಹತ್ತು ಪಟ್ಟು ಹೆಚ್ಚಿರುವ ಸೌಹಾರ್ದ ಕಥನಗಳನ್ನು ಬೆಸುಗೆಗೆ ಬಳಸಬಹುದು. ಈ ನಿಟ್ಟಿನಲ್ಲಿ ಯಾವೆಲ್ಲ ನಿದರ್ಶನಗಳನ್ನು ಒಳಗೊಳಿಸಿಕೊಳ್ಳಬಹುದು? ಯಾವ ಮಾದರಿಗಳನ್ನು ಮುಂದಿಡಬಹುದು?

ಗುಂಪಿನ ಎಲ್ಲರ ಅಭಿಪ್ರಾಯಗಳನ್ನು ಒಳಗೊಂಡು ಪ್ರತೀ ಗುಂಪಿನಿಂದ ಇಬ್ಬರು ಪ್ರತಿನಿಧಿಗಳು ಗುಂಪಿನ ಅಭಿಪ್ರಾಯಗಳನ್ನು ಎಲ್ಲರ ಮುಂದೆ ಹಂಚಿಕೊಂಡರು. ನಂತರ ಈ ಅಭಿಪ್ರಾಯಗಳನ್ನು ಒಟ್ಟುಗೂಡಿಸಿ ಕಾರ್ಯಾಗಾರದ ಮಾರ್ಗದರ್ಶಕರಾಗಿದ್ದ ದಿನೇಶ್ ಅಮ್ಮಿನ ಮಟ್ಟು ಮತ್ತು ರಹಮತ್ ತರೀಕರೆಯವರು ಮಾತನಾಡಿದರು.

"ಸಮಾಜದ ಗ್ರಹಿಕೆಯ ಮೂಲಕ ದೇಶವನ್ನು ಕಾಣಬೇಕು"

ಅಂತಿಮವಾಗಿ ಮಾತನಾಡಿದ ರಹಮತ್ ತರಿಕೆರೆಯವರು "ಸಾಹಿತ್ಯದ ಕೃತಿಗಳನ್ನು ರಾಜಕೀಯ ಪ್ರಜ್ಞೆ ಮೂಲಕ ಗ್ರಹಿಸುವ ಪ್ರಯತ್ನ ಇಲ್ಲಿ ನಡೆದಿದೆ. ಇದು ಓದಿನ ಒಂದು ಫಲಪ್ರದ ವಿಧಾನ" ಎಂದು 'ಕೋಶ ಓದು ದೇಶ ನೋಡು' ಅಭಿಯಾನದ ಪ್ರಯತ್ನವನ್ನು ಶ್ಲಾಘಿಸಿದರು. "ಅಂತಾರಾಷ್ಟ್ರೀಯ ಮಟ್ಟದಲ್ಲಿ ನಡೆದ ರಾಜಕೀಯ ವಿಭಜನೆಯನ್ನು ಒಂದು ಊರಿನ ಕಥನದ ಮೂಲಕ ತೋರಿಸುವ ಪ್ರಯತ್ನ 'ಟ್ರೈನ್ ಟು ಪಾಕಿಸ್ತಾನ್' ಕೃತಿಯಲ್ಲಿದೆ. ಊರಿನ ಸೂಕ್ಷ್ಮ ವಿವರಗಳ ಮೂಲಕ ದೇಶದ ದುರಂತವನ್ನು ಕಾದಂಬರಿ ಕಟ್ಟಿಕೊಡುತ್ತದೆ. ನಾವು ನಮ್ಮ ಸುತ್ತಲಿನ ಸಮಾಜದ ಗ್ರಹಿಕೆಯ ಮೂಲಕ ದೇಶವನ್ನು ಕಾಣುವುದು ಸಾಧ್ಯವಾಗಬೇಕು" ಎಂದು ಅವರು ಅಭಿಪ್ರಾಯಪಟ್ಟರು.

"ಧರ್ಮದ ಹೆಸರಿನಲ್ಲಿ ಕೋಮುವಾದದ ಕೇಡಿಗೆ ಅಡಿಪಾಯ ಹಾಕಲಾಗುತ್ತದೆ. ಕಾದಂಬರಿಯಲ್ಲಿ ಕೊಲ್ಲುವವನೂ, ಕಾಪಾಡುವವನೂ – ಇಬ್ಬರೂ 'ಸತ್ ಶ್ರೀ ಅಕಾಲ್' ಎದು ಹೇಳುತ್ತಾರೆ. ಧರ್ಮದ ಎರಡು ಆಯಾಮಗಳನ್ನು ಇಲ್ಲಿ ಹೇಳಲಾಗಿದೆ" "ಕೋಮುವಾದ–ವಿರೋಧಿ ಮತ್ತು ಮೂಲಭೂತವಾದ–ವಿರೋಧಿ ಸಂಕಥನದಲ್ಲಿ ಬಳಸುವ ಪರಿಭಾಷೆಯ ಕುರಿತು ದೀರ್ಘವಾದ

ಪುಟ 11 ಕ್ಕೆ



ಧರೆ ಹತ್ತಿ ಉರಿದಾಗ ನಾಟಕ

JANASHAKTHIKANNADAVARAPATRIKE: Printed, Published by **G.V.SRIRAMAREDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**